1953

ಶ್ರೀ ರಾಮಕೃಷ್ಣಾಶ್ರಮ

ಮೈಸೂರು

ಭಕ್ತಿಃ ಗೌಣೀ ಮತ್ತು ಪರಾ

ಸ್ವಾಮಿ ವಿವೇಕಾನಂದ

ಪ್ರಕಾಶಕರು:

ಶ್ರೀ ರಾಮಕೃಷ್ಣಾಶ್ರಮ

ಮೈಸೂರು.

ಬೆಲೆ ೧-೦-೦



ಶ್ರೀ ವಿವೇಕಾನಂದ ಸ್ವಾಮಿಗಳವರು

“ ತ್ಯಾಗ ಮತ್ತು ಸೇವೆ, ಇವೇ ಭರತಖಂಡದ ಹುಟ್ಟು ಆದರ್ಶಗಳು ”

ಭಕ್ತಿಃ ಗೌಣೀ ಮತ್ತು ಪರಾ

ಸ್ವಾಮಿ ವಿವೇಕಾನಂದ

ಪ್ರಕಾಶಕರು:

ಶ್ರೀ ರಾಮಕೃಷ್ಣಾಶ್ರಮ

ಮೈಸೂರು.

ಬೆಲೆ ೧-೦-೦

ಮೊದಲನೆಯ ಮುದ್ರಣ
೧೯೫೩.

ಪ್ರಕಾಶಕರು :
ಸ್ವಾಮಿ ಶಾಂಭವಾನಂದ, ಮೈಸೂರು.

ಮುದ್ರಕರು :
ಹಿಂದೂಸ್ಥಾನ್ ಪ್ರೆಸ್, ಮೈಸೂರು.

ಭಕ್ತಿ

ಸ ತನ್ಮಯೋ ಅಮೃತ ಈಶಸಂಸ್ಥೋಜ್ಞಃ ಸರ್ವಗೋ ಭುವನಸ್ಯಾಸ್ಯ ಗೋಪ್ತಾ |
ಯ ಈಶೋಽಸ್ಯಜಗತೋ ನಿತ್ಯಮೇವ ನಾನ್ಯೋ ಹೇತುರ್ವಿದ್ಯತ ಈಶನಾಯ ||
ಯೋ ಬ್ರಹ್ಮಾಣಂ ವಿಧದಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ |
ತಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ||

ಅವನೆ ವಿಶ್ವಾತ್ಮ, ಮರಣಾತೀತ, ವಿಶ್ವೇಶ್ವರ, ಸರ್ವಜ್ಞ, ಸರ್ವವ್ಯಾಪಿ, ಭುವನರಕ್ಷಕ. ಈ ಜಗತ್ತನ್ನು ನಿತ್ಯವೂ ಅವನೆ ಆಳುವವನು, ಅವನಲ್ಲದೆ ಇತರರಿಗೆ ಈ ಸಾಮರ್ಥ್ಯವಿಲ್ಲ.

ಯಾರು ಸೃಷ್ಟಿಗೆ ಮೊದಲು ಬ್ರಹ್ಮನನ್ನು ಸೃಷ್ಟಿಸಿದನೊ, ಯಾರು ವೇದವನ್ನು ಅವನಿಗೆ ಕೊಟ್ಟನೊ—ಆತನೆಡೆಗೆ ತಿರುಗುವಂತೆ ಬುದ್ಧಿಯನ್ನು ಕೊಡುವ ಸ್ವಯಂ ಪ್ರಕಾಶಮಾನನಾದ ದೇವನಲ್ಲಿ ಮೋಕ್ಷಾಕಾಂಕ್ಷಿತನಾಗಿ ನಾನು ಶರಣಾಗುವೆನು—ಶ್ವೇತಾಶ್ವತರ ಉಪನಿಷತ್ತು—೧೭, ೧೮.

ಭಕ್ತಿ ವಿವರಣೆ

ಭಕ್ತಿಮಾರ್ಗವೆಂದರೆ ನಿಜವಾಗಿ ಹೃತ್ಪೂರ್ವಕ ಭಗವಂತನನ್ನು ಅರಸುವುದು. ಈ ಅನ್ವೇಷಣೆ ಪ್ರೇಮದಲ್ಲಿ ಪ್ರಾರಂಭವಾಗಿ, ಪ್ರೇಮದ ಮೂಲಕ ಸಾಗಿ, ಪ್ರೇಮದಲ್ಲಿ ಪರ್ಯವಸಾನವಾಗುವುದು. ಭಗವಂತನ ಮೇಲಿರುವ ಆತ್ಯಂತಿಕ ಪ್ರೇಮೋನ್ಮಾದ ಕ್ಷಣವಾದರೂ ಸಾಕು ನಿತ್ಯ ಮುಕ್ತಿಯನ್ನು ನೀಡುವುದು. ನಾರದರು ತಮ್ಮ ಭಕ್ತಿ ಸೂತ್ರದಲ್ಲಿ ಇದನ್ನು ಹೀಗೆ ವಿವರಿಸುವರು: "ಭಕ್ತಿ ಎಂದರೆ ಈಶ್ವರನ ಮೇಲೆ ಇಡುವ ಪರಮ ಪ್ರೇಮ. ಒಬ್ಬನಿಗೆ ಇದು ಪ್ರಾಪ್ತವಾದರೆ ಅವನು ಎಲ್ಲರನ್ನೂ ಪ್ರೀತಿಸುವನು, ಯಾರನ್ನೂ ದ್ವೇಷಿಸನು, ನಿತ್ಯತೃಪ್ತನಾಗುವನು. ಈ ಪ್ರೇಮ ಲೌಕಿಕ ಕಾಮನಾರೂಪವಾದುದಲ್ಲ ಏಕೆಂದರೆ ಲೌಕಿಕ ವಾಸನೆ ಇರುವವರೆಗೆ ಪರಮಪ್ರೇಮ ಮಾನವನಿಗೆ ದೊರಕುವುದಿಲ್ಲ. ಭಕ್ತಿ ಕರ್ಮಕ್ಕಿಂತ ಹೆಚ್ಚು, ಜ್ಞಾನಕ್ಕಿಂತ ಹೆಚ್ಚು, ಯೋಗಕ್ಕಿಂತ ಹೆಚ್ಚು. ಏಕೆಂದರೆ ಇವಕ್ಕೆ ಒಂದೊಂದು ಫಲ ಉಂಟು. ಆದರೆ ಭಕ್ತಿ ಸ್ವಯಂ ಫಲವಾಗಿರುವುದು. ಇದೇ ಸಾಧನ ಮತ್ತು ಗುರಿ ಕೂಡ."

ಭಕ್ತಿಯೊಂದೇ ನಮ್ಮ ಸಾಧು ಸಂತರು ಮತ್ತೆ ಮತ್ತೆ ಹಾಡುವ ಪಲ್ಲವಿ. ಕೇವಲ ಭಕ್ತಿಯಮೇಲೆ ಬರೆದಿರುವ ನಾರದ ಶಾಂಡಿಲ್ಯರ ಮಾತಂತಿರಲಿ. ವ್ಯಾಸ ಸೂತ್ರಗಳ ಮೇಲೆ ಭಾಷ್ಯವನ್ನು ಬರೆದಿರುವವನು ಕೂಡ ಜ್ಞಾನ ಮಾರ್ಗವನ್ನು ಹೊಗಳಿದರೂ ಪ್ರೇಮದ ವಿಷಯದಲ್ಲಿಯೂ ಕೆಲವು ಗಮನಾರ್ಹವಾದ ವಿಷಯಗಳನ್ನು ಹೇಳುವನು. ಭಾಷ್ಯಕಾರನು ಸೂತ್ರವಾಕ್ಯಗಳನ್ನೆಲ್ಲಾ, ಇಲ್ಲವೆ ಬಹು ಪಾಲು ಸೂತ್ರವನ್ನಾದರೂ, ಶುಷ್ಕ ಜ್ಞಾನದ ಪರವಾಗಿ ವ್ಯಾಖ್ಯಾನ ಮಾಡಬೇಕೆಂದು ಇಚ್ಛಿಸಿದರೂ, ಅಲ್ಲಿ ಉಪಾಸನಾ ಪಾದದಲ್ಲಿರುವ ಕೆಲವು ಸೂತ್ರಗಳು ಹೀಗೆ ವ್ಯಾಖ್ಯಾನ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

ನಿಜವಾಗಿ ನೋಡಿದರೆ ಸಾಧಾರಣ ಜನ ಭಾವಿಸುವಷ್ಟು ಮಹದಂತರ ಜ್ಞಾನಕ್ಕೂ ಭಕ್ತಿಗೂ ಇಲ್ಲ. ಅವು ಕೊನೆಗೆ ಒಂದಕ್ಕೊಂದು ಸೇರಿ ಐಕ್ಯವಾಗುವುದನ್ನು ನಾವು ಮುಂದುವರಿದಂತೆ ನೋಡುವೆವು. ರಾಜಯೋಗ ಕೂಡ ಹೀಗೆಯೆ. ಪಾಪ! ಕಪಟಿಗಳು ಮತ್ತು ರಹಸ್ಯ ವಿದೆಯನ್ನು ಮಾರುವವರ ಕೈಯಲ್ಲಿ ಇದು ಕೆಲವುವೇಳೆ ಸೇರಿ ಅರಿಯದವರನ್ನು ಮೋಸಮಾಡುವುದಕ್ಕೆ ಸಹಾಯ ಮಾಡುವುದು. ಹಾಗಿಲ್ಲದೆ ಅದನ್ನು ಮೋಕ್ಷಕ್ಕೆ ಸಾಧನವಾಗಿ ಅಭ್ಯಾಸಮಾಡಿದರೆ ಅದರಿಂದಲೂ ಇದೇ ಗುರಿಯನ್ನು ಸೇರಬಹುದು.

ಭಕ್ತಿಯಲ್ಲಿ ದೊಡ್ಡ ಅನುಕೂಲವಿದೆ. ಪರಮಪುರುಷಾರ್ಥವನ್ನು ಪಡೆಯುವುದಕ್ಕೆ ಇದು ಬಹಳ ಸುಲಭವಾದ ಮತ್ತು ಸ್ವಭಾವಸಹಜವಾದ ಮಾರ್ಗ. ಇದರಲ್ಲಿ ಇರುವ ದೊಡ್ಡದೊಂದು ಅನಾನುಕೂಲವೆ, ಪ್ರಾರಂಭ ಸ್ಥಿತಿಯಲ್ಲಿ ಇದು ಹಲವುವೇಳೆ ಮತಭ್ರಾಂತಿಯಲ್ಲಿ ಪರ್ಯವಸಾನವಾಗುವ ಅಪಾಯವಿದೆ. ಹಿಂದೂ ಮಹಮ್ಮದೀಯ ಮತ್ತು ಕ್ರೈಸ್ತರಲ್ಲಿ ಇರುವ ಬಹುಪಾಲು ಮತಭ್ರಾಂತರ ತಂಡವೆಲ್ಲ ಇಂತಹ ಭಕ್ತಿಯ ಕೆಳಗಿನ ವರ್ಗದಿಂದ ಬಂದವರು. ನಾವು ಪ್ರೀತಿಸುವ ವಸ್ತುವಿನಮೇಲೆ ನಿಷ್ಠೆ ಇಲ್ಲದೆ ಇದ್ದರೆ ನಿಜವಾದ ಭಕ್ತಿ ವೃದ್ಧಿಯಾಗುವುದಿಲ್ಲ. ಆದರೆ ಅನೇಕವೇಳೆ ಇದೇ ಸ್ವಭಾವವೆ ಅನ್ಯವಸ್ತುಗಳನ್ನು ಹಳಿಯುವುದಕ್ಕೆ ಕಾರಣವಾಗುವುದು. ಪ್ರತಿಯೊಂದು ಧರ್ಮದಲ್ಲಿ ಮತ್ತು ದೇಶದಲ್ಲಿರುವ ದುರ್ಬಲ ಅಪ್ರಬುದ್ಧ ಜನರು ತಮ್ಮ ಇಷ್ಟದೇವತೆಯನ್ನು ಈ ಒಂದು ರೀತಿಯಿಂದ ಮಾತ್ರ ಪ್ರೀತಿಸುವರು; ಅದೇ ಅನ್ಯರ ಆದರ್ಶಗಳನ್ನು ತೆಗಳುವುದರ ಮೂಲಕ.

ತನ್ನ ಇಷ್ಟದೇವತೆಯ ಮೇಲೆ ಅಷ್ಟೊಂದು ಅಸಕ್ತಿಯಿಂದ ಕೂಡಿದವನು, ತನ್ನ ಧರ್ಮದಮೇಲೆ ಅಷ್ಟೊಂದು ಶ್ರದ್ಧೆ ಭಕ್ತಿ ಇರುವವನು, ಇತರರ ಆದರ್ಶವನ್ನು ಕೇಳಿದರೆ ಸಾಕು, ಕಂಡರೆ ಸಾಕು, ಕಿಡಿಕಿಡಿ ಕಾರುತ್ತಾ ಕೂಗಾಡುವ ಧರ್ಮಾಂಧನಾಗುವನು. ಇಂತಹ ಪ್ರೀತಿಯನ್ನು ಯಜಮಾನನ ಆಸ್ತಿಯನ್ನು ಮತ್ತೊಬ್ಬರು ದೋಚಿಕೊಂಡು ಹೋಗದಿರಲಿ ಎಂದು ಕಾಯುವ ನಾಯಿಯ ಸ್ವಭಾವಕ್ಕೆ ಹೋಲಿಸಬಹುದು. ನಾಯಿಯ ಹುಟ್ಟುಗುಣ ಮನುಷ್ಯನ ಯುಕ್ತಿಗಿಂತ ಮೇಲು, ಅಷ್ಟೆ. ಏಕೆಂದರೆ ಯಜಮಾನ ಯಾವ ವೇಷದಲ್ಲಿ ಬರಲಿ ಅವನನ್ನು ಕಂಡುಹಿಡಿಯುವುದು, ಅವನು ವೈರಿ ಎಂದು ತಪ್ಪು ತಿಳಿದುಕೊಳ್ಳುವುದಿಲ್ಲ. ಮತಭ್ರಾಂತನು ಯುಕ್ತಾಯುಕ್ತ ಪರಿಜ್ಞಾನವನ್ನೆಲ್ಲ ಕಳೆದುಕೊಳ್ಳುವನು. ವ್ಯಕ್ತಿಪ್ರಾಮುಖ್ಯತೆಯೇ ಹೆಚ್ಚು ಪ್ರಾಧಾನ್ಯ ಅವನಿಗೆ. ಇತರರು ಹೇಳುವುದನ್ನು ಗಣನೆಗೇ ತರುವುದಿಲ್ಲ, ಅದು ಸರಿಯೆ ತಪ್ಪೆ ಯೋಚಿಸುವುದೇ ಇಲ್ಲ. ಯಾವಾಗಲೂ ಅವನು ಮುಖ್ಯವಾಗಿ ಗಣನೆಗೆ ತರುವುದೇ ಯಾರು ಆ ಮಾತನ್ನು ಹೇಳುತ್ತಾರೆ ಎಂಬುದು. ತನ್ನಂತೆ ಇರುವವರಿಗೆ ದಯಾಳುವಾಗಿ, ಒಳ್ಳೆಯವನಾಗಿ, ಸತ್ಯನಿಷ್ಠನಾಗಿ ಅವರನ್ನೆಲ್ಲಾ ಪ್ರೀತಿಸುತ್ತಿದ್ದರೂ, ತನ್ನ ಧರ್ಮಕ್ಕೆ ಬಾಹಿರರಾದವರನ್ನು ಕಂಡರೆ ಎಂತಹ ಪಾಪಕರ್ಮವನ್ನು ಮಾಡುವುದಕ್ಕೂ ಹೇಸನು.

ಆದರೆ ಈ ಅಪಾಯ ಭಕ್ತಿ ಗೌಣೀ ಸ್ಥಿತಿಯಲ್ಲಿ ಇರುವಾಗ ಮಾತ್ರ ಇರುವುದು. ಭಕ್ತಿ ಮಾಗಿ ಪರಾಭಕ್ತಿಯಾದಾಗ ಮತಭ್ರಾಂತಿಯ ಕರಾಳ ರಕ್ಕಸನ ಸುಳಿವು ಇನ್ನುಮೇಲೆ ಇರುವುದಿಲ್ಲ. ಪರಾಭಕ್ತಿಯಲ್ಲಿ ನೆಲಸಿದ ಜೀವಿ ಪ್ರೇಮೇಶ್ವರನ ಸಮೀಪದಲ್ಲಿರುವನು. ದ್ವೇಷವನ್ನು ಸಾಧಿಸುವುದಕ್ಕೆ ಅವನಿಂದ ಇನ್ನು ಸಾಧ್ಯವಿಲ್ಲ.

ಈ ಜೀವನದಲ್ಲಿ ಸಮರಸವಾಗಿ ಬೆಳೆಯುವುದಕ್ಕೆ ನಮಗೆಲ್ಲ ಸಾಧ್ಯವಿಲ್ಲ. ಆದರೂ ಯಾರಲ್ಲಿ ಜ್ಞಾನ ಭಕ್ತಿ ಕರ್ಮಗಳು ಸಮರಸವಾಗಿ ಹೊಂದಿಕೊಂಡಿವೆಯೊ ಅಂತಹವನು ಅತಿಶ್ರೇಷ್ಠ ವ್ಯಕ್ತಿ ಎಂಬುದು ನಮಗೆಲ್ಲ ಗೊತ್ತಿದೆ. ಹಕ್ಕಿ ಹಾರಬೇಕಾದರೆ ಮೂರು ವಸ್ತುಗಳು ಆವಶ್ಯಕ. ಅವೇ ಎರಡು ರೆಕ್ಕೆ ತಿರುಗುವುದಕ್ಕೆ ಪುಚ್ಛ. ಜ್ಞಾನ ಒಂದು ರೆಕ್ಕೆ ಭಕ್ತಿ ಮತ್ತೊಂದು ರೆಕ್ಕೆ. ನಮ್ಮ ಸಮತ್ವವನ್ನು ರಕ್ಷಿಸುವುದೇ ಯೋಗವೆಂಬ ಪುಚ್ಛ. ಸೌಹಾರ್ದದಿಂದ ಮೂರು ಉಪಾಸನೆಗಳನ್ನು ಯಾರು ಅನುಷ್ಠಾನ

ಮಾಡಲಾರರೊ, ಭಕ್ತಿಮಾರ್ಗ ಒಂದನ್ನೆ ಯಾರು ಸ್ವೀಕರಿಸುವರೊ ಅವರು ಬಾಹ್ಯ ಆಚಾರ ವ್ಯವಹಾರಗಳು ಮುಂದುವರಿಯುವ ಜೀವಿಗೆ ಅತ್ಯಾವಶ್ಯಕವಾದರೂ ಈಶ್ವರನ ಪರಮಪ್ರೇಮವನ್ನು ಪಡೆಯುವುದು ಮಾತ್ರ ಇದರ ಗುರಿ ಎಂಬುದನ್ನು ಮರೆಯದಿರಬೇಕು.

ಭಕ್ತಿ ಮತ್ತು ಜ್ಞಾನವನ್ನು ಪ್ರತಿಪಾದಿಸುವವರಿಬ್ಬರೂ ಭಕ್ತಿಯ ಶಕ್ತಿಯನ್ನು ಒಪ್ಪಿಕೊಂಡರೂ ಅವರಲ್ಲಿ ಸ್ವಲ್ಪ ವ್ಯತ್ಯಾಸಗಳಿವೆ. ಜ್ಞಾನಿಗಳು ಮುಕ್ತಿಗೆ ಸಾಧನ ಭಕ್ತಿ ಎನ್ನುವರು. ಭಕ್ತರು ಭಕ್ತಿಯನ್ನು ಸಾಧನ ಮತ್ತು ಅದೇ ಪಡೆಯಬೇಕಾದ ಗುರಿ ಎಂದು ಭಾವಿಸುವರು. ನನ್ನ ದೃಷ್ಟಿಯಲ್ಲಿ ಇದು ವ್ಯತ್ಯಾಸವಿಲ್ಲದ ಪ್ರತ್ಯೇಕತೆ. ಭಕ್ತಿಯನ್ನು ಮತ್ತೊಂದು ಗುರಿಗೆ ಸಾಧನವಾಗಿ ಉಪಯೋಗಿಸಿದಾಗ ಅದು ಗೌಣೀಭಕ್ತಿಯಾಗುವುದು. ಮೇಲಿನ ಅಂತಸ್ಥಿನಲ್ಲಿ ಪರಾಭಕ್ತಿಯನ್ನು ಗೌಣೀಭಕ್ತಿಯಿಂದ ಪ್ರತ್ಯೇಕಿಸಲಾಗುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಉಪಾಸನೆಗೇ ಹೆಚ್ಚು ಪ್ರಾಮುಖ್ಯತೆ ಕೊಡುವರು. ಪೂರ್ಣಪ್ರೇಮ ಲಭಿಸಿದಾಗ ಇಚ್ಛಿಸದಿದ್ದರೂ ಜ್ಞಾನ ದೊರಕುವುದು. ಪೂರ್ಣಜ್ಞಾನವಿದ್ದರೆ ಅಲ್ಲಿ ಪ್ರೇಮವಿಲ್ಲದೆ ಇರುವುದಿಲ್ಲ ಎಂಬುದನ್ನು ಮರೆಯುವೆವು.

ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ಪ್ರಖ್ಯಾತ ಭಾಷ್ಯಾಚಾರ್ಯರು ಏನು ಹೇಳುತ್ತಾರೆ ಎಂಬುದನ್ನು ಗಮನಿಸುವ: "ಆವೃತ್ತಿ ರಸ ಕೃದುಪದೇಶಾತ್" (ಬ್ರ.ಸೂ. ೪-೧-೧) ಎಂಬುದನ್ನು ವಿವರಿಸುವಾಗ ಶಂಕರಾಚಾರ್ಯರು ಹೀಗೆ ಹೇಳುತ್ತಾರೆ: "ಯಾರು ತತ್ಪರನಾಗಿ ಗುರು ಮುಂತಾದವರನ್ನು ಅನುಸರಿಸುತ್ತಾನೋ ಅವನ ವಿಷಯದಲ್ಲಿ ಇವನು ಗುರುವನ್ನು ಉಪಾಸನೆ ಮಾಡುತ್ತಿರುವನು, ಇವನು ರಾಜನನ್ನು ಉಪಾಸನೆ ಮಾಡುತ್ತಿರುವನು ಎಂದು ಹೇಳುತ್ತಾರೆ. ಹೀಗೆಯೆ ನಿರಂತರ ಪತಿಪರಾಯಣೆ ಸ್ತ್ರೀಯು ಪತಿಯನ್ನೇ ಧ್ಯಾನಿಸುತ್ತಿರುವಳು ಎನ್ನುವರು". ಇಲ್ಲಿ ಕೂಡ ನಿರಂತರವಾದ ಉತ್ಕಟಪ್ರೀತಿ ಮನನ ಎಂದಂತೆ ಆಯಿತು.

"ಧ್ಯಾನ ಎಂದರೆ ಧ್ಯಾನಿಸುವ ವಸ್ತುವಿನ ನಿರಂತರ ಮನನ. ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಬೀಳುವ ಅವಿಚ್ಛಿನ್ನ ತೈಲಧಾರೆಯಂತೆ ದೇವರಿಗೆ ಸಂಬಂಧಪಟ್ಟ ಇಂತಹ ಮನನ ನಮಗೆ ಪ್ರಾಪ್ತವಾದರೆ ಬಂಧನವೆಲ್ಲ ನಾಶವಾಗುವುದು. ನಿರಂತರ ಮನನ ಮುಕ್ತಿಗೆ ಸಾಧನ ಎಂಬುದನ್ನು ಶಾಸ್ತ್ರಗಳು ಸಾರುತ್ತವೆ. ಹೀಗೆ ಮನನ ಮಾಡುವುದು

ಪ್ರತ್ಯಕ್ಷ ನೋಡಿಸಂತೆಯೆ. ಏಕೆಂದರೆ "ಯಾರು ಅತಿ ಸಮೀಪದಲ್ಲಿರುವನೊ ಅತಿ ದೂರದಲ್ಲಿರುವನೊ ಅವನನ್ನು ನೋಡಿದಾಗ ನಮ್ಮ ಬಂಧನವೆಲ್ಲ ನಾಶವಾಗುವುದು, ಸಂದೇಹ ಮಾಯವಾಗುವುದು, ಕರ್ಮಫಲಗಳೆಲ್ಲ ನಿರ್ನಾಮವಾಗುವುವು" ಎಂದಿದೆ. ಯಾರು ಹತ್ತಿರದಲ್ಲಿರುವರೊ ಅವರನ್ನು ನೋಡಬಹುದು. ಆದರೆ ಯಾರು ದೂರದಲ್ಲಿ ಇರುವರೊ ಅವರನ್ನು ಮನನ ಮಾತ್ರ ಮಾಡಿಕೊಳ್ಳಬಹುದು. ಆದರೂ ಶಾಸ್ತ್ರ ಯಾರು ಸಮೀಪದಲ್ಲಿರುವನೊ ಮತ್ತು ಯಾರು ಅತಿ ದೂರದಲ್ಲಿರುವನೊ ಅವನನ್ನು ನಾವು ನೋಡಬೇಕು ಎನ್ನುವುದು. ಅಂದರೆ ಮನನ ನೋಡಿದಷ್ಟೇ ಪ್ರಯೋಜನ ಎನ್ನುವುದು. ಈ ಮನನ ಅತಿ ತೀವ್ರವಾದಾಗ ನೋಡಿದಂತೆಯೇ ಆಗುವುದು. ಶಾಸ್ತ್ರದ ಮೂಲ ಶ್ಲೋಕಗಳನ್ನು ನೋಡಿದರೆ ಪೂಜೆ ಎಂದರೆ ನಿರಂತರ ಮನನ ಎಂದು ಕಾಣುವುದು. ಜ್ಞಾನ ಎಂದರೆ ನಿರಂತರ ಪೂಜೆಯ ಹಾಗೆ, ಇದನ್ನೆ ನಿರಂತರ ಮನನ ಎನ್ನುವರು. ಪ್ರತ್ಯಕ್ಷ ಜ್ಞಾನದ ಸ್ಥಿತಿಗೆ ಬಂದ ನೆನಪನ್ನೆ ಶಾಸ್ತ್ರದಲ್ಲಿ ಮುಕ್ತಿಗೆ ಸಾಧನ ಎನ್ನುವರು. "ಹಲವು ಶಾಸ್ತ್ರಗಳ ಮೂಲಕ ಆತ್ಮಸಾಕ್ಷಾತ್ಕಾರವಾಗುವುದಿಲ್ಲ. ಬುದ್ಧಿಯ ಮೂಲಕವಾಗಿ ಇಲ್ಲ, ಅಥವಾ ವೇದಾಧ್ಯಯನದ ಮೂಲಕವಾಗಿ ಕೂಡ ಅಲ್ಲ. ಆತ್ಮ ಯಾರನ್ನು ಒಲಿಯುವುದೊ ಅವರು ಆತ್ಮನನ್ನು ಪಡೆಯುವರು. ಆತ್ಮ ಅವರಿಗೆ ವ್ಯಕ್ತವಾಗುವುದು." ಯಾರು ನಮ್ಮ ಪ್ರೇಮಕ್ಕೆ ಅತಿ ನಿಕಟಭಾಗಿಗಳೊ ಅವರನ್ನು ಆಶಿಸುತ್ತೇವೆ. ಯಾರಿಗೆ ಆತ್ಮ ಅತಿ ಪ್ರಿಯವಾಗಿರುವುದೊ ಅವರು ಆತ್ಮನಿಗೆ ಅತಿ ಪ್ರಿಯವಾಗುವರು. ಭಕ್ತರು ಆತ್ಮನನ್ನು ಪಡೆಯಲೆಂದು ದೇವರೆ ಅವರಿಗೆ ಸಹಾಯ ಮಾಡುವನು. ಏಕೆಂದರೆ ಶ್ರೀ ಕೃಷ್ಣನೇ ಗೀತೆಯಲ್ಲಿ ಹೀಗೆ ಹೇಳುತ್ತಾನೆ: "ಅನವರತವೂ ನನ್ನಲ್ಲಿಯೇ ಆಸಕ್ತರಾಗಿ ಪ್ರೀತಿಯಿಂದ ಭಜಿಸುತ್ತಿರುವವರಿಗೆ ನನ್ನನ್ನು ಸೇರುವಂತಹ ಬುದ್ಧಿಯೋಗವನ್ನು ಕೊಡುತ್ತೇನೆ". ಸ್ಮರಿಸಲ್ಪಡುವ ವಸ್ತುವಾದ ಪರಮಾತ್ಮನಿಗೆ ಬಹಳ ಪ್ರಿಯವಾಗಿರುವುದೆಂಬ ಕಾರಣದಿಂದ ಈ ಧ್ಯಾನಾನುಸಂಧಾನ ಪ್ರತ್ಯಕ್ಷ ಅನುಭವದಂತೆ ಯಾರಿಗೆ ಪರಮಪ್ರಿಯವಾಗಿರುವುದೊ ಅವರಿಗೆ ಪರಮಾತ್ಮನ ಲಾಭವಾಗುವುದು. ಇಂತಹ ನಿರಂತರ ಮನನವನ್ನೆ ಭಕ್ತಿ ಎಂದು ಅಥಾತೋ ಬ್ರಹ್ಮ ಜಿಜ್ಞಾಸಾ | (ಬ್ರ. ಸೂ. ೧-೧-೧) ಎಂಬ ಸೂತ್ರದ ಮೇಲೆ ಬರೆದಿರುವ ಶ್ರೀ ಭಾಷ್ಯದಲ್ಲಿ ಶ್ರೀ ರಾಮಾನುಜಾಚಾರ್ಯರು ಹೇಳುವರು.

" ಈಶ್ವರ ಪ್ರಣಿಧಾನಾದ್ವಾ " (ಪತಂಜಲಿ ಯೋಗಸೂತ್ರ ೧-೨೩) ಈಶ್ವರ ಪ್ರಣಿಧಾನದಿಂದಲಾಗಲಿ ಎಂಬುದಕ್ಕೆ ವೃತ್ತಿಯನ್ನು ಬರೆಯುವಾಗ ಭೋಜ ಹೀಗೆ ಹೇಳುವನು : " ಪ್ರಣಿಧಾನವೆಂದರೆ ವಿಷಯಸುಖಾದಿ ಫಲವನ್ನು ಇಚ್ಛಿಸದೆ ಸಕಲ ಕ್ರಿಯೆಗಳನ್ನು ಗುರುಗಳ ಗುರುವಾದ ಪರ ಮೇಶ್ವರನಿಗೆ ಅರ್ಪಣೆಮಾಡುವ ಒಂದು ಬಗೆಯ ಭಕ್ತಿ. " ಇದೇ ಸೂತ್ರದ ಮೇಲೆ ಭಾಷ್ಯವನ್ನು ಬರೆಯುವಾಗ ಭಗದ್ವ್ಯಾಸರು ಪ್ರಣಿಧಾನವೆಂದರೆ ಈಶ್ವರನ ಅನುಗ್ರಹ ಯೋಗಿಗೆ ದೊರೆತು ಅವನ ಇಷ್ಟವನ್ನು ನೆರವೇರಿಸುವ ಭಕ್ತಿ ವಿಶೇಷವೆಂದು ಹೇಳುವರು.

ಶಾಂಡಿಲ್ಯರ ಮತದಲ್ಲಿ ಭಕ್ತಿ ಎಂದರೆ " ಈಶ್ವರನ ಮೇಲೆ ಇರುವ ಪರಮಾನುರಕ್ತಿ." ಆದರೆ ಇವೆಲ್ಲಕ್ಕಿಂತ ಶ್ರೇಷ್ಠ ವಿವರಣೆಯೆ ಭಕ್ತಾಗ್ರೇಸರ ನಾದ ಪ್ರಹಲ್ಲಾದ ಕೊಟ್ಟಿರುವುದು.

ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾ ಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥
(ವಿಷ್ಣು ಪುರಾಣ ೧–೨೦–೧೯)

" ವಿವೇಕ ರಹಿತರಿಗೆ ಅನಿತ್ಯ ವಿಷಯುಗಳಲ್ಲಿ ಎಂದೆಂದಿಗೂ ನಾಶ ವಾಗದ ಯಾವ ಬಗೆಯ ಪ್ರೀತಿ ಇರುವುದೊ, ನಿನ್ನನ್ನು ಸ್ಮರಿಸುತ್ತಿರುವಾಗ ಅಂಥ ಪ್ರೀತಿ ನನ್ನ ಹೃದಯುವನ್ನು ಎಂದಿಗೂ ಬಿಟ್ಟು ಹೋಗದಿರಲಿ." ಪ್ರೀತಿ ಎಂದರೆ ಯಾರ ಮೇಲಿನ ಪ್ರೀತಿ ? ಪರಮೇಶ್ವರನ ಮೇಲಿನ ಪ್ರೀತಿ ಉಳಿದ ವಸ್ತುವಿನ ಮೇಲಿನ ಪ್ರೀತಿ ಎಷ್ಟೇ ಹೆಚ್ಚಿನದಾಗಿರಲಿ ಅದು ಭಕ್ತಿ ಎನಿಸಲಾರದು. ಏಕೆಂದರೆ ಪೂರ್ವಾಚಾರ್ಯರೊಬ್ಬರ ಸಮ್ಮತಿಯಿಂದ ಶ್ರೀ ರಾಮಾನುಜಾಚಾರ್ಯರು ಶ್ರೀ ಭಾಷ್ಯದಲ್ಲಿ ಹೀಗೆ ಹೇಳುವರು. " ಈ ಪ್ರಪಂಚದಲ್ಲಿ ಬ್ರಹ್ಮಾದಿ ಸ್ಥಂಭಪರ್ಯಂತ ಎಲ್ಲವೂ ಕರ್ಮದಿಂದಾದ ಜನನ ಎಲ್ಲ ಮರಣಗಳಿಗೆ ಅಡಿಯಾಳಾಗಿರುವುವು. ಆದಕಾರಣ ಇವು ಧ್ಯಾನಯೋಗ್ಯ ವಸ್ತುವಲ್ಲ. ಅವೆಲ್ಲ ಅಜ್ಞಾನದೊಳಗೆ ಇವೆ. ಸಂಸಾರದ ಬದಲಾವಣೆಗೆ ಒಳಗಾಗಿವೆ. "

ಶಾಂಡಿಲ್ಯರು ಉಪಯೋಗಿಸಿರುವ ಅನುರಕ್ತಿ ಎಂಬ ಮಾತನ್ನು ವಿವರಿಸುವಾಗ ಭಾಷ್ಯಕಾರರಾದ ಸ್ವಪ್ನೇಶ್ವರರು " ಇದು ಅನು ಆ ಮೇಲೆ ಆಗುವ ರಕ್ತಿ= ರಾಗ ಎಂದರೆ ಭಗವಂತನ ಸ್ವರೂಪ ಮಹಿಮೆ ಮುಂತಾದು

ವನ್ನು ತಿಳಿದುಕೊಂಡ ಮೇಲೆ ಉಂಟಾಗುವ ಪ್ರೇಮ. ಹಾಗಿಲ್ಲವೆ ಬರಿಯ ಪ್ರೇಮವೆ ಭಕ್ತಿ ಎಂದರೆ ಹೆಂಡತಿ ಮಕ್ಕಳು ಮುಂತಾದವರ ಮೇಲೆ ಇರುವ ಪ್ರೀತಿಯೆ ಭಕ್ತಿಯಾಗಿ ಬಿಡುವುದು" ಎಂದು ಹೇಳುವರು.

ಪ್ರಾರಂಭದಲ್ಲಿ ಸಾಮಾನ್ಯ ಉಪಾಸನಾ ರೂಪದಲ್ಲಿ ಮೊದಲಾಗಿ ಅಂತ್ಯದಲ್ಲಿ ಈಶ್ವರನ ಮೇಲಿರುವ ನಿರಂತರ ಪ್ರೇಮ ರೂಪವಾಗಿ ಪರಿಣಮಿಸುವ ಮಾನಸಿಕ ಪ್ರಯತ್ನ ಧಾರೆಯೆ ಭಕ್ತಿ ಎಂದು ಸ್ಪಷ್ಟವಾಯಿತು.

ಈಶ್ವರ ತತ್ತ್ವ

ಈಶ್ವರ ಎಂದರೆ ಯಾರು? "ಜನ್ಮಾದ್ಯಸ್ಯಯತಃ" (ಬ್ರ. ಸೂ. ೧-೧-೨೨) ಯಾರಿಂದ ಸೃಷ್ಟಿ ಸ್ಥಿತಿ ಪ್ರಳಯಗಳಾಗುವುವೊ ಅವನು ನಿತ್ಯನೂ, ಶುದ್ಧನೂ, ಮುಕ್ತನೂ, ಸರ್ವಜ್ಞನೂ, ಸರ್ವಶಕ್ತನೂ, ದಯಾಮಯನೂ ಗುರುಗಳಿಗೆ ಗುರು ಆಗಿರುವನು. ಇವೆಲ್ಲಕ್ಕಿಂತಲೂ ಹೆಚ್ಚಾಗಿ "ಸ ಈಶ್ವರಃ ಅನಿರ್ವಚನೀಯ ಪ್ರೇಮ ಸ್ವರೂಪಃ" ಭಗವಂತ ಇಂತಹವನೆಂದು ವಿವರಿಸಲಳವಲ್ಲದ ಪ್ರೇಮ ಸ್ವರೂಪ.

ಇವು ನಿಜವಾಗಿ ಸಗುಣದೇವರ ವಿವರಣೆ ಆಯಿತು. ಹಾಗಾದರೆ ಇಬ್ಬರು ದೇವರು ಇರುವರೆ? "ನೇತಿ ನೇತಿ" ಎನ್ನುವ ಜ್ಞಾನಿಗಳ ಸಚ್ಚಿದಾನಂದ ಸ್ವರೂಪನಾದ ದೇವರೊಬ್ಬನು, ಭಕ್ತರ ಪ್ರೇಮ ಸ್ವರೂಪನಾದ ದೇವರೊಬ್ಬನು, ಹೀಗೆ ಇಬ್ಬರು ಇರುವರೆ? ಇಲ್ಲ. ಸಚ್ಚಿದಾನಂದ ಸ್ವರೂಪನೆ ಪ್ರೇಮೇಶ್ವರನು ಕೂಡ. ಅವನೆ ಸಗುಣ ಮತ್ತು ನಿರ್ಗುಣನು. ಭಕ್ತರು ಆರಾಧಿಸುವ ಸಗುಣದೇವರು ಬ್ರಹ್ಮನಿಂದ ಬೇರೆ ಅಲ್ಲ ಎಂಬುದನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟಿರಬೇಕು. ಸರ್ವವೂ ಅದ್ವಿತೀಯವಾದ ಬ್ರಹ್ಮವೇ, ಆದರೆ ಅದ್ವಿತೀಯ ಉಪಾಧಿರಹಿತ ಬ್ರಹ್ಮ ಅತಿ ಗಹನವಾಗಿರುವುದರಿಂದ ಅದನ್ನು ಆರಾಧಿಸುವುದಕ್ಕೆ ಆಗುವುದಿಲ್ಲ, ಪ್ರೀತಿಸುವುದಕ್ಕೆ ಆಗುವುದಿಲ್ಲ. ಆದಕಾರಣ ಭಕ್ತರು ಬ್ರಹ್ಮನ ಸೋಪಾಧಿಕ ರೂಪವಾದ ಈಶ್ವರನನ್ನು ಆರಿಸಿಕೊಂಡಿರುವರು. ಇದಕ್ಕೊಂದು ಉದಾಹರಣೆಯನ್ನು ಕೊಡಬೇಕಾದರೆ, ಬ್ರಹ್ಮ ಜೇಡಿಮಣ್ಣಿನಂತೆ, ಅದರಿಂದ ಹಲವಾರು ಮಡಿಕೆ ಕುಡಿಕೆಗಳಾಗುವಂತೆ. ಮಣ್ಣಿನ ದೃಷ್ಟಿಯಿಂದ ಇವೆಲ್ಲ

ಒಂದು. ಆದರೆ ಆವಿರ್ಭಾವನೆಯ ದೃಷ್ಟಿಯಿಂದ ಒಂದು ಮತ್ತೊಂದಕ್ಕಿಂತ ಬೇರೆ. ಆ ಸಾಮಾನುಗಳೆಲ್ಲ ತಯಾರಾಗುವುದಕ್ಕೆ ಮುಂಚೆ ಅವೆಲ್ಲ ಅವ್ಯಕ್ತಸ್ಥಿತಿಯಲ್ಲಿ ಜೇಡಿಮಣ್ಣಿನಲ್ಲಿದ್ದವು. ಆದರೆ ಅವು ರೂಪುತಾಳಿದ ಮೇಲೆ ಒಂದು ಮತ್ತೊಂದಕ್ಕಿಂತ ಬೇರೆ ಆಗಿರುವುವು. ಮಣ್ಣಿನ ಇಲಿ ಎಂದಿಗೂ ಮಣ್ಣಿನ ಆನೆ ಆಗಲಾರದು. ಏಕೆಂದರೆ ನಿರಾಕಾರದ ಮಣ್ಣಿನ ದೃಷ್ಟಿಯಿಂದ ಅವುಗಳೆಲ್ಲ ಒಂದೇ ಆಗಿದ್ದರೂ, ಆವಿರ್ಭಾವನೆಯ ದೃಷ್ಟಿಯಿಂದ ಅವು ಹಾಗೆ ಇರುವುದಕ್ಕೆ ಕಾರಣ ಆಕಾರವಾಗಿರುವುದು. ನಿರುಪಾಧಿಕ ಬ್ರಹ್ಮದ ಸೋಪಾಧಿಕ ಶ್ರೇಷ್ಠ ಆವಿರ್ಭಾವನೆಯೆ ಈಶ್ವರ. ಅಥವಾ ಬೇರೆ ಮಾತಿನಲ್ಲಿ ಹೇಳಬಹುದಾದರೆ, ಮಾನವ ನಿರುಪಾಧಿಕ ಸತ್ಯವನ್ನು ಮನಸ್ಸಿನ ಮೂಲಕ ಗ್ರಹಿಸಬಲ್ಲ ಶ್ರೇಷ್ಠತಮ ಭಾವನೆ ಆಗಿರುವುದು ಈಶ್ವರ. ಸೃಷ್ಟಿ ಅನಾದಿ, ಅದರಂತೆಯೆ ಈಶ್ವರನು ಕೂಡ.

ಬ್ರಹ್ಮಸೂತ್ರದ ನಾಲ್ಕನೆ ಅಧ್ಯಾಯದ ನಾಲ್ಕನೆ ಪಾದದಲ್ಲಿ ಮೋಕ್ಷವನ್ನು ಪಡೆದ ಮುಕ್ತ ಜೀವಿಗೆ ಸ್ವಲ್ಪ ಹೆಚ್ಚು ಕಡಿಮೆ ಅನಂತ ಜ್ಞಾನ ಮತ್ತು ಶಕ್ತಿ ಬರುವುದೆಂದು ಹೇಳಿದೆ. ಅಲ್ಲಿ ವ್ಯಾಸರು ಇತರರಿಗೆ ಸೃಷ್ಟಿ ಸ್ಥಿತಿ ಪ್ರಳಯ ಶಕ್ತಿಗಳು ಬರಲಾರವು, ಅದು ಈಶ್ವರನಿಗೆ ಮಾತ್ರ ಮೀಸಲಾಗಿರುವುದು ಎಂದು ಹೇಳುತ್ತಾರೆ. ಈ ಸೂತ್ರಕ್ಕೆ ವ್ಯಾಖ್ಯಾನವನ್ನು ಬರೆಯುವಾಗ ದ್ವೈತಭಾಷ್ಯಕಾರರು ಆಧೀನದಲ್ಲಿರುವ ಜೀವಿಗೆ ದೇವರಂತೆ ಅನಂತ ಶಕ್ತಿ ಮತ್ತು ಸ್ವಾತಂತ್ರ್ಯ ಪ್ರಾಪ್ತವಾಗಲಾರದೆಂದು ಬಹಳ ಸರಳವಾಗಿ ವಿವರಿಸುವುದು ಸುಲಭ. ಪೂರ್ಣದ್ವೈತಿಗಳಾದ ಮಧ್ವಾಚಾರ್ಯರು ತಮ್ಮ ಭಾಷ್ಯದಲ್ಲಿ ವರಾಹ ಪುರಾಣದಿಂದ ಒಂದು ಶ್ಲೋಕವನ್ನು ಉದಹರಿಸಿ ತಮ್ಮ ಪದ್ಧತಿ ಮೇರೆಗೆ ಸಂಕ್ಷೇಪವಾಗಿ ಇದರ ವ್ಯಾಖ್ಯಾನವನ್ನು ಪೂರೈಸಿರುವರು.

ಈ ಸೂತ್ರವನ್ನು ವಿವರಿಸುವಾಗ ಶ್ರೀರಾಮಾನುಜಾಚಾರ್ಯರು ಹೀಗೆ ಹೇಳುವರು: "ಮುಕ್ತ ಜೀವಿಗೆ ದೊರಕುವ ಸಿದ್ಧಿಗಳಲ್ಲಿ ಪರಮ ಪುರುಷನ ಅಸಾಧಾರಣ ಶಕ್ತಿಯಾದ ಜಗತ್ತನ್ನು ಸೃಷ್ಟಿಸುವುದು ಮುಂತಾದ ಸರ್ವೇಶ್ವರತ್ವ ಸೇರಿದೆಯೊ ಅಥವಾ ಆ ಪರಮಪುರುಷನನ್ನು ಸಾಕ್ಷಾತ್ತಾಗಿ ಅನುಭವಿಸುವುದೇ ಅವರಿಗೆ ದೊರಕುವ ಈಶ್ವರತ್ವವೊ? ಎಂಬ ಸಂಶಯ ಬರಲು, ಪೂರ್ವಪಕ್ಷದವರು ಹೀಗೆ ಹೇಳುವರು: ಜಗದೀಶ್ವರತ್ವವೂ ಮುಕ್ತ ಪುರುಷನಿಗೆ ಬರುವುದು ಯುಕ್ತ. ಏಕೆಂದರೆ

ಶ್ರುತಿಯಲ್ಲಿ 'ಯಾವುದರ ಲೇಪವೂ ಇಲ್ಲದ ಪರಮೇಶ್ವರನ ಪರಮಸಾಮ್ಯವನ್ನು ಪಡೆಯುತ್ತಾನೆ' ಎಂದೂ 'ಅವನ ಸಂಕಲ್ಪಗಳೆಲ್ಲ ಸಂಪೂರ್ಣವಾಗುವುವು' (ಛಾ) ಎಂದೂ ಹೇಳಿದೆ. ಆದರೆ ಜಗತ್ತನ್ನು ಆಳುವುದು ಎಂಬ ಸರ್ವೇಶ್ವರನ ಅಸಾಧಾರಣ ಶಕ್ತಿ ಇಲ್ಲದೆ ಇದ್ದರೆ ಆ ಪರಮಸಾಮ್ಯವಾಗಲಿ ಸತ್ಯಸಂಕಲ್ಪತ್ವವಾಗಲಿ ಉಂಟಾಗಲಾರದು. ಆದುದರಿಂದ ಸತ್ಯಸಂಕಲ್ಪತ್ವವೂ, ಪರಮಸಾಮ್ಯವೂ ಉಂಟಾಗುವುದಕ್ಕಾಗಿ ಮುಕ್ತರಿಗೆ ಜಗತ್ತನ್ನೆಲ್ಲಾ ಆಳುವ ಶಕ್ತಿ ಬರುವುದು ಎಂಬುದನ್ನು ನಾವು ಒಪ್ಪಲೇಬೇಕು ಎನ್ನುವುದು ಪೂರ್ವಪಕ್ಷ. ಅದಕ್ಕೆ ನಮ್ಮ ಸಮಾಧಾನವೇನೆಂದರೆ, ಮುಕ್ತರಿಗೆ ಜಗದ್ವ್ಯಾಪಾರ ಒಂದನ್ನು ಬಿಟ್ಟು ಮಿಕ್ಕ ಎಲ್ಲಾ ಶಕ್ತಿಗಳೂ ಉಂಟಾಗುವುವು. ಜಗದ್ವ್ಯಾಪಾರ ಎಂದರೆ ಎಲ್ಲಾ ಚೇತನಾಚೇತನಗಳ ಬಗೆಬಗೆಯ ಸ್ವರೂಪ, ಸ್ಥಿತಿ, ಪ್ರವೃತ್ತಿ ಇವುಗಳನ್ನು ಗೊತ್ತುಪಡಿಸುವುದು. ಈ ಜಗದ್ವ್ಯಾಪಾರವೇನೂ ಮುಕ್ತನಿಗೆ ಬರುವುದಿಲ್ಲ. ಪರಮಾತ್ಮನ ನಿಜವಾದ ಸ್ವರೂಪವನ್ನು ಮರೆಮಾಡಿದ್ದ ಆವರಣವನ್ನೆಲ್ಲಾ ದೂರಮಾಡಿಕೊಂಡು ಯಾವ ಆತಂಕವೂ ಇಲ್ಲದೆ ಬ್ರಹ್ಮನನ್ನು ಅನುಭವಿಸುವುದೇ ಮುಕ್ತನಿಗೆ ಉಂಟಾಗುವ ಈಶ್ವರತ್ವ. ಯಾವುದರಿಂದ ಹುಟ್ಟಿದವುಗಳೆಲ್ಲಾ ಬದುಕಿರುವುವೊ, ಈ ಲೋಕವನ್ನು ಬಿಟ್ಟು ಯಾವುದನ್ನು ಸೇರುತ್ತವೆಯೊ—ಅದನ್ನು ವಿಚಾರಮಾಡು, ಅದೇ ಬ್ರಹ್ಮ (ತೈತ್ತರೀಯ) ಎಂಬ ಶ್ರುತಿ ಇದಕ್ಕೆ ಪ್ರಮಾಣ. ಈ ಜಗನ್ನಿಯಾಮಕತ್ವ ಗುಣ ಮುಕ್ತರಿಗೂ ಸಾಧಾರಣ ಗುಣವಾಗಿ ಬಿಟ್ಟರೆ ಈ ಶ್ರುತಿವಚನ, ಜಗದೀಶ್ವರನಾಗಿರುವುದೆ ಬ್ರಹ್ಮತ್ವ—ಎಂದು ತಿಳಿಸುವ ಲಕ್ಷಣವಾಕ್ಯವಾಗಲಾರದೆ ಹೋಗುವುದು. ಏಕೆಂದರೆ ಅಸಾಧಾರಣ ಧರ್ಮವೇ ಲಕ್ಷಣ. ಹೀಗೆಯೆ 'ಎಲೈ ಪ್ರಿಯಬಾಲಕನೆ ಮೊದಲು ಇದು ಸದ್ರೂಪವಾದ ಅದ್ವಿತೀಯವಾದ ಒಂದೇ ಆಗಿತ್ತು. ಅದು ನಾನು ಬಹುವಾಗಿ ಅನೇಕವನ್ನು ಉತ್ಪತ್ತಿಮಾಡುವೆ ಎಂದುಕೊಂಡಿತು. ಅದು ತೇಜಸ್ಸನ್ನುಂಟುಮಾಡಿತು' (ಛಾಂದೋಗ್ಯ); 'ಇದು ಮೊದಲು ಬ್ರಹ್ಮ ಒಂದೇ ಆಗಿತ್ತು. ಅದು ಒಂದೇ ಆಗಿದ್ದುದರಿಂದ ಸಾಕಾಗಲಿಲ್ಲ. ಅದು ಕ್ಷತ್ರವೆಂಬ ಪ್ರಶಸ್ತರೂಪ ಒಂದನ್ನು ಸೃಷ್ಟಿಮಾಡಿತು. ಇಂದ್ರ ವರುಣ ಸೋಮ ರುದ್ರ ಪರ್ಜನ್ಯ ಯಮ ಮೃತ್ಯು ಈಶಾನ—ಈ ದೇವತೆಗಳೆಲ್ಲ ಕ್ಷತ್ರರು (ಬೃಹದಾರಣ್ಯ). ಇದು ಮೊದಲು ಆತ್ಮ ಒಂದೇ ಆಗಿತ್ತು; ವ್ಯಾಪಾರ ಉಳ್ಳದ್ದು ಮತ್ತೆ ಬೇರೆ

ಯಾವುದೂ ಇರಲಿಲ್ಲ. ಅವನು ಲೋಕವನ್ನು ಸೃಷ್ಟಿಸೋಣವೆಂದು ಯೋಚಿಸಿದನು, ಆತನು ಈ ಲೋಕವನ್ನು ಸೃಷ್ಟಿಸಿದನು' (ಐ.) 'ನಾರಾಯಣನೊಬ್ಬನೆ ಇದ್ದನು. ಬ್ರಹ್ಮನಾಗಲಿ ಈಶಾನನಾಗಲಿ ಈ ಪೃಥ್ವಿಯಾಗಲಿ ಸೋಮನಾಗಲಿ ಸೂರ್ಯನಾಗಲಿ ಇರಲಿಲ್ಲ. ಒಬ್ಬನೇ ಇರುವುದು ಅವನಿಗೆ ಸರಿಹೋಗಲಿಲ್ಲ. ಧ್ಯಾನಾವಸ್ಥೆಯಲ್ಲಿರುವ ಅವನಿಗೆ ಒಬ್ಬ ಕನ್ಯೆಯೂ ಹತ್ತು ಇಂದ್ರಿಯಗಳೂ ಹುಟ್ಟಿದವು. (ಮಹೋ), ಇತ್ಯಾದಿ ವಚನಗಳಲ್ಲಿಯೂ, ಯಾರು ಭೂಮಿಯಲ್ಲಿದ್ದು ಭೂಮಿಗಿಂತ ಬೇರೆ ಆಗಿರುವನೊ (ಬೃ) ಇತ್ಯಾದಿ ವಾಕ್ಯಗಳಲ್ಲಿಯೂ, ಎಲ್ಲ ಜಗತ್ತನ್ನು ಆಳುವುದು ಎಂಬ ವಿಶೇಷಣ ಪರಮಪುರುಷನನ್ನು ಕುರಿತದ್ದು ಎಂದು ಶ್ರುತಿ ಸಾರುವುದು. ಇಡೀ ಜಗತ್ತನ್ನೇ ಆಳುವುದು ಎಂದು ಹೇಳುವ ವಾಕ್ಯಗಳಲ್ಲಿ ಮುಕ್ತಜೀವನ ವಿಷಯವೇ ಕಂಡುಬರುವುದಿಲ್ಲ. ಹಾಗೆ ಕಂಡುಬಂದಿದ್ದರೆ ಇಂಥ ಜೀವನಿಗೆ ಜಗದ್ವ್ಯಾಪಾರ ಸೇರಿದೆ ಎನ್ನಬಹುದಾಗಿತ್ತು." ಹೀಗೆಂದು ಹೇಳಿ ಶ್ರೀರಾಮಾನುಜಾಚಾರ್ಯರು ಇದರ ಮುಂದಿನ ಸೂತ್ರವನ್ನು ವಿವರಿಸುವಾಗ "ಇದಕ್ಕೆ ವಿರುದ್ಧವಾಗಿ ಮುಕ್ತರಿಗೆ ಜಗದ್ವ್ಯಾಪಾರ ಉಂಟೆಂದು ಪ್ರತ್ಯಕ್ಷವಾಗಿ ಹೇಳುವ ಪ್ರಮಾಣವಚನಗಳು ಕಂಡುಬರುವುದರಿಂದ ಹೀಗೆ ಹೇಳುವುದು ಸರಿಯಲ್ಲ ಎಂದು ನೀವು ಹೇಳಬಹುದು. ಆದರೆ ಈ ವಚನಗಳು ಅಧಿಕಾರಿಕ ದೇವತೆಗಳ ಲೋಕದಲ್ಲಿ ಮುಕ್ತಜೀವರು ಅನುಭವಿಸುವ ಐಶ್ವರ್ಯವನ್ನು ತಿಳಿಸುತ್ತವೆ ಎಂಬುದೇ ನಮ್ಮ ಉತ್ತರ" ಎಂದು ಬರೆದಿರುತ್ತಾರೆ. ಪ್ರಕೃತದ ಸಮಸ್ಯೆಯನ್ನು ಬಗೆಹರಿಸಲು ಇದೊಂದು ಉಪಾಯವೇ ಸರಿ. ರಾಮಾನುಜ ಸಿದ್ಧಾಂತದಲ್ಲಿ ಏಕತ್ವವನ್ನು ಒಪ್ಪಿದ್ದರೂ ಆ ಒಂದು ಒಟ್ಟಿನೊಳಗೆ ನಿತ್ಯಭೇಧಗಳಿವೆ ಎಂದು ಅವರು ಅಂಗೀಕರಿಸುತ್ತಾರೆ. ಅಂತೂ ಅವರದೂ ಸ್ವಲ್ಪ ಹೆಚ್ಚು ಕಡಿಮೆ ದ್ವೈತಸಿದ್ಧಾಂತವಾಗಿರುವುದರಿಂದ ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಭೇದವನ್ನು ಸ್ಪಷ್ಟವಾಗಿ ವಿಂಗಡಿಸಿ ತೋರಿಸುವುದು ರಾಮಾನುಜಾಚಾರ್ಯರಿಗೂ ಸುಲಭವೇ ಆಯಿತು.

ಅದ್ವೈತವಾದಿಗಳ ಪ್ರಖ್ಯಾತ ಪ್ರತಿನಿಧಿಗಳಾದ ಶಂಕರಾಚಾರ್ಯರು ಏನು ಹೇಳುತ್ತಾರೆ ಎಂಬುದನ್ನು ಈಗ ನೋಡೋಣ. ದ್ವೈತಿಯ ಯಾವ ಆಶೆ ಆಕಾಂಕ್ಷೆಗಳಿಗೂ ಭಂಗ ಬರದಂತೆ ಮಾನವರು ಮುಟ್ಟಬೇಕಾಗಿರುವ ಪರಮಪದವಿಗೂ ಲೋಪ ಬಾರದಂತೆ ಪ್ರಕೃತ ಪ್ರಶ್ನೆಗೆ ಸ್ವತಂತ್ರವಾದ

ಒಂದು ಉತ್ತರವನ್ನು ಅದ್ವೈತ ಸಿದ್ಧಾಂತ ಹೇಗೆ ಕೊಟ್ಟಿದೆ ಎಂಬುದನ್ನು ಗಮನಿಸುವ. ಮುಕ್ತಿಯಾದ ಮೇಲೂ ತಮ್ಮ ಮನಸ್ಸನ್ನು ಇಟ್ಟುಕೊಂಡು ತಾವು ಪ್ರತ್ಯೇಕವಾಗಿರಬೇಕೆಂದು ಬಯಸಿದರೆ ಅವರಿಗೆ ಈ ಆಸೆ ಕೈಗೂಡಿ ಸಗುಣಬ್ರಹ್ಮಾನಂದವನ್ನು ಅನುಭವಿಸಲು ಅವಕಾಶವಿದೆ. ಇದರ ವಿಚಾರ ವನ್ನು ಕುರಿತೇ ಭಾಗವತ ಪುರಾಣ ಹೀಗೆ ಹೇಳುವುದು : ಭಗವಂತನ ಕಲ್ಯಾಣಗುಣಗಳು ಎಂತಹವು ಎಂದರೆ, ಕೇವಲ ಆತ್ಮರತಿಗಳು, ಸಕಲ ಬಂಧನದಿಂದ ಪಾರಾದ ಮಹಾತ್ಮರು ಕೂಡ ಸರ್ವವ್ಯಾಪಿಯಾದ ಭಗವಂತನನ್ನು ಪ್ರೇಮೈಕಹೇತುವಿನಿಂದ ಭಜಿಸುತ್ತಿರುವರು. ಈ ಕಲ್ಪದಲ್ಲಿ ಪ್ರಕೃತಿಲಯವನ್ನು ಹೊಂದಿ ಪರಿಪೂರ್ಣರಾಗಿ ಮುಂದಿನ ಕಲ್ಪದಲ್ಲಿ ಪ್ರಪಂಚದ ಪ್ರಜಾಪತಿಗಳಾಗುವರೆಂದು ಸಾಂಖ್ಯರು ಹೇಳುವರು. ಅದೂ ಇಂಥವರ ವಿಷಯವೆ. ಆದರೆ ಇದರಲ್ಲಿ ಯಾರೊಬ್ಬರೂ ಎಂದಿಗೂ ಈಶ್ವರ ಸಮನಾಗುವುದಿಲ್ಲ. ಸೃಷ್ಟಿ, ಸ್ರಷ್ಟವ್ಯ, ಸ್ರಷ್ಟ, ಜ್ಞಾನ, ಜ್ಞೇಯ, ಜ್ಞಾತೃ, ನಾನು ನೀನು ಅವನು, ವಿಷಯ ವಿಷಯಸಂಬಂಧ ಇವು ಯಾವುದೂ ಇಲ್ಲದ ಸ್ಥಿತಿಯನ್ನು ಯಾರು ಯಾರಿಂದ ನೋಡಿಸಿಕೊಳ್ಳು ವರು ? (ಬೃ.) ಈ ಸ್ಥಿತಿಯನ್ನು ಯಾರು ಪಡೆಯುವರೋ, ಅವರು ಎಲ್ಲಕ್ಕೂ ಅತೀತರಾಗುವರು. "ಮನಸ್ಸು ಮಾತಿಗೆ ನಿಲುಕದ (ತೈ.)" ಎಲ್ಲವನ್ನೂ ಮೀರಿದ ಸ್ಥಿತಿಗೆ ಹೋಗುತ್ತಾರೆ. ಶ್ರುತಿಗಳು ಇದಲ್ಲ ಎಂದು ವಿವರಿಸಿರುವ ವಸ್ತುವನ್ನೇ ಸೇರಿರುತ್ತಾರೆ. ಆದರೆ ಯಾರು ಈ ಸ್ಥಿತಿಯನ್ನು ಹೊಂದಲಾರರೊ, ಅಥವಾ ಹೊಂದಲಿಚ್ಛಿಸುವುದಿಲ್ಲವೊ ಅವರ ಭಾಗಕ್ಕೆ ನಿರ್ಭೇದವಾಗಿ ಒಂದೆಯಾಗಿರುವ ಬ್ರಹ್ಮವನ್ನು ಚೇತನ ಅಚೇತನ ಮತ್ತು ಇವೆರಡರಲ್ಲಿ ಅಂತರ್ಯಾಮಿಯಾಗಿರುವ ಈಶ್ವರ ಎಂಬ ತ್ರಿಪುಟಿ ಭೇದದಿಂದ ಕಾಣುವುದು ಉಳಿದುಕೊಂಡೇ ಇರುವುದು. ಆದಕಾರಣವೆ ಪ್ರಹ್ಲಾದ ಭಕ್ತ್ಯಾಧಿಕ್ಯದಿಂದ ತನ್ನನ್ನು ತಾನು ಮರೆತಾಗ ಪ್ರಪಂಚವಾಗಲಿ ಅದರ ಕಾರಣವಾಗಲಿ ಅವನಿಗೆ ಕಾಣುತ್ತಿರಲಿಲ್ಲ. ಅವನಿಗೆ ಎಲ್ಲವೂ ನಾಮರೂಪಗಳ ಭೇದವಿಲ್ಲದ ಒಂದೇ ಒಂದು ಅನಂತ ಸತ್ತಾರೂಪವಾಗಿತ್ತು. ಆದರೆ ತಾನು ಪ್ರಹ್ಲಾದನೆಂಬ ನೆನಪು ಬಂದೊಡ ನೆಯೆ ಪ್ರಪಂಚವೂ ಗೋಚರಿಸಿತು, ಅನಂತ ಕಲ್ಯಾಣಗುಣಾಕಾರನಾದ ಸರ್ವೇಶ್ವರನೂ ಗೋಚರಿಸಿದನು. ಧನ್ಯಾತ್ಮರಾದ ಗೋಪಿಯರು ಕೂಡ ಹೀಗೆಯೆ. ಅವರಿಗೆ ತಾವು ಇಂಥವರು ಎಂಬ ವ್ಯಕ್ತಿತ್ವ ಎಲ್ಲಿಯವರೆಗೆ

ಅಳಿಸಿಹೋಗಿತ್ತೊ ಅಲ್ಲಿಯವರೆಗೆ ಅವರೆಲ್ಲರೂ ಕೃಷ್ಣರೇ ಆಗಿದ್ದರು. ಆದರೆ ಆತನು ಉಪಾಸ್ಯನೆಂಬ ಬುದ್ಧಿ ಉಂಟಾದೊಡನೆಯೇ ಅವರು ಗೋಪಿಯರೇ ಆದರು. ತಕ್ಷಣ "ಮುಖಾರವಿಂದ ಮಂದಹಾಸದಿಂದ ವಿಕಸಿಸುತ್ತಿರಲು, ಪೀತಾಂಬರಧಾರಿಯಾದ, ವನಮಾಲೆಯನ್ನು ಧರಿಸಿದ, ಸಾಕ್ಷಾತ್ ಮನ್ಮಥ ಮನ್ಮಥನಾಗಿದ್ದ ಶ್ರೀಕೃಷ್ಣ ಅವರಿಗೆ ಗೋಚರಿಸಿದನು."

ಇನ್ನು ನಮ್ಮ ಶಂಕರಾಚಾರ್ಯರ ಕಡೆಗೆ ತೆರಳುವ. ಅವರು ಹೀಗೆ ಹೇಳುವರು : ಯಾರು ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡೇ ಈಶ್ವರ ಸಾಯುಜ್ಯವನ್ನು ಪಡೆಯುತ್ತಾರೊ ಅವರ ಐಶ್ವರ್ಯ ಸಾಂಕುಶವಾಗಿರುವುದೊ ನಿರಂಕುಶವಾಗಿರುವುದೊ ಎಂಬ ಸಂಶಯ ಬಂದರೆ ಮೊದಲನೆ ಪಕ್ಷದಲ್ಲಿ ಹೀಗೆ ತೋರುವುದು. ಸ್ವರಾಜ್ಯವನ್ನು ಪಡೆಯುತ್ತಾರೆ (ತೈ), ದೇವತೆಗಳೆಲ್ಲ ಅವನನ್ನು ಪೂಜಿಸುವರು (ತೈ), ಅವರು ಎಲ್ಲ ಲೋಕಗಳಲ್ಲಿಯೂ ಸ್ವೇಚ್ಛೆಯಾಗಿ ಇರಬಲ್ಲರು (ಛಾ) ಮುಂತಾದ ಶ್ರುತಿಗಳಿರುವುದರಿಂದ ಅವರ ಐಶ್ವರ್ಯ ನಿರಂಕುಶವಾಗಿಯೇ ಇರಬೇಕು. ಈ ಪೂರ್ವಪಕ್ಷಕ್ಕೆ ಉತ್ತರವಾಗಿ ವ್ಯಾಸರು "ಜಗದ್ವ್ಯಾಪಾರ ಹೊರತು" ಎಂದು ಬರೆದಿರುತ್ತಾರೆ. ಜಗತ್ತಿನ ಸೃಷ್ಟಿಯೆ ಮುಂತಾದ ವ್ಯಾಪಾರವನ್ನು ಬಿಟ್ಟು ಉಳಿದ ಅಣಿಮಾದಿ ಸಿದ್ಧಿಗಳನ್ನು ಪಡೆಯುವುದೇ ಮುಕ್ತರ ಈಶ್ವರತ್ವ. ಜಗದ್ವ್ಯಾಪಾರ ಮಾತ್ರ ನಿತ್ಯಸಿದ್ಧನಾದ ಈಶ್ವರನಿಗೆ ಮೀಸಲು. ಏಕೆಂದರೆ ಆವಾಕ್ಯಗಳಲ್ಲಿ ಆತ್ಮನನ್ನು ಉದ್ದೇಶಿಸಿಯೇ ಹೇಳಿರುವುದು, ಮುಕ್ತರ ವಿಚಾರ ಅಲ್ಲಿ ಇಲ್ಲವೇ ಇಲ್ಲ. ಪರಮೇಶ್ವರನೇ ಜಗದ್ವ್ಯಾಪಾರಕ್ಕೆ ತಕ್ಕವನು. ಆತನನ್ನು ಉದ್ದೇಶಿಸಿಯೇ ಉತ್ಪತ್ತಿ ಮುಂತಾದುವನ್ನು ಶ್ರುತಿಯಲ್ಲಿ ಹೇಳಿರುವರು. ಆತನಿಗೆ ನಿತ್ಯಸಿದ್ಧನೆಂಬ ವಿಶೇಷಣವೂ ಇರುವುದು. ಆತನನ್ನು ಅನ್ವೇಷಣೆಮಾಡಿ ಉಪಾಸನೆ ಮಾಡುವುದರಿಂದಲೇ ಮಿಕ್ಕವರಿಗೆ ಅಣಿಮಾದಿ ಐಶ್ವರ್ಯ ಉಂಟಾಗುವುದೆಂದು ಶ್ರುತಿಯಲ್ಲಿ ಹೇಳಿದೆ. ಆದಕಾರಣ ಜಗದ್ವ್ಯಾಪಾರ ವಿಷಯದಲ್ಲಿ ಅವರ ಸಂಬಂಧವಿಲ್ಲ. ಅವರಿಗೆ ತಮ್ಮ ವ್ಯಕ್ತಿತ್ವವಿರುವುದರಿಂದ ಒಬ್ಬರ ಇಚ್ಛೆ ಮತ್ತೊಬ್ಬರ ಇಚ್ಛೆಗೆ ವಿರೋಧವಾಗಬಹುದು. ಒಬ್ಬ ಸೃಷ್ಟಿಸಬೇಕೆಂದು ಇಚ್ಛಿಸಿದರೆ ಮತ್ತೊಬ್ಬ ಸಂಹಾರ ಮಾಡಬೇಕೆಂದು ಇಚ್ಛಿಸಬಹುದು. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಒಂದೇ ಮಾರ್ಗವಿದೆ. ಅದೇ ಇತರರ ಸಂಕಲ್ಪಗಳು ಒಬ್ಬನ ಸಂಕಲ್ಪಕ್ಕೆ ಅಧೀನವಾಗಿರುವುದು. ಆದಕಾರಣ ಮುಕ್ತರ

ಸಂಕಲ್ಪ ಪರಮೇಶ್ವರನ ಸಂಕಲ್ಪಕ್ಕೆ ಅಧೀನವೆಂದು ಸಿದ್ಧಾಂತವಾದ ಹಾಗಾಯಿತು.

ಸಗುಣೋಪಾಸನೆಯಲ್ಲಿ ಮಾತ್ರ ಭಕ್ತಿಗೆ ಅವಕಾಶವಿದೆ ಎಂದ ಹಾಗಾಯಿತು. "ಅವ್ಯಕ್ತದಲ್ಲಿ ಮನಸ್ಸಿರುವವರ ಮಾರ್ಗ ಅತಿ ಕಠಿಣ" (ಗೀ) ಭಕ್ತಿ ಮಾನವ ಸ್ವಭಾವಕ್ಕೆ ಅನುಗುಣವಾಗಿ ಸರಾಗವಾಗಿ ತೇಲಿ ಕೊಂಡು ಹೋಗಬೇಕಾಗಿದೆ. ಬ್ರಹ್ಮನೆಂದರೆ ಮಾನವದೃಷ್ಟಿಗೆ ಅನುಗುಣವಾಗಿರುವ ಭಾವನೆಯಲ್ಲದೆ ಮತ್ತಾವುದೂ ನಮಗೆ ಇರಲಾರದು. ಆದರೆ ನಮಗೆ ತಿಳಿದಿರುವ ಪ್ರತಿಯೊಂದು ವಿಷಯ ಕೂಡ ಹೀಗೆಯೆ ಇಲ್ಲವೆ? ಸಹಸ್ರಾರು ವರುಷಗಳ ಹಿಂದೆ ಪ್ರಪಂಚದ ಮಾನಸಿಕ ಶಾಸ್ತ್ರಜ್ಞರಲ್ಲಿ ಅಗ್ರೇಸರನಾದ ಭಗವಾನ್ ಕಪಿಲರು, ಬಾಹ್ಯ ಮತ್ತು ಆಂತರಿಕ ಸಂವೇದನೆಗಳಲ್ಲೆಲ್ಲಾ ಮಾನವನ ಮನಸ್ಸು ಸೇರಿಕೊಂಡೇ ಇರುವುವು ಎಂದು ಸಾರಿದರು. ನಮ್ಮ ದೇಹದಿಂದ ಈಶ್ವರನವರೆಗೆ ನಮ್ಮ ಜ್ಞಾನಕ್ಕೆ ಗೋಚರವಾಗುವ ಪ್ರತಿಯೊಂದು ವಿಷಯವೂ ಮನಸ್ಸು ಮತ್ತು ಮತ್ತಾವುದೊ ಒಂದು ಸೇರಿಕೊಂಡು ಆಗಿದೆ. ಇನ್ನೊಂದು ಯಾವುದೆಂದು ನಮಗೆ ತಿಳಿಯದು. ಆದರೂ ಅಪರಿಹಾರ್ಯವಾದ ಈ ಮಿಶ್ರಣವನ್ನೆ ನಾವು ಸಾಮಾನ್ಯವಾಗಿ ವಿಷಯದ ಇರವು ಎಂದು ಭಾವಿಸುವೆವು. ನಿಜವಾಗಿ ನೋಡಿದರೆ ಮಾನವನಿಗೆ ತಿಳಿಯುವುದಕ್ಕೆ ಸಾಧ್ಯವಾದ ತತ್ತ್ವವೆಲ್ಲ ಇಷ್ಟೆ, ಮುಂದೆ ಸಾಧ್ಯವಾಗಬಹುದಾಗಿರುವುದೂ ಇಷ್ಟೆ. ಈಶ್ವರ ಮಾನವೀಯ ದೃಷ್ಟಿಗೆ ಬದ್ಧವಾಗಿರುವುದರಿಂದ ಸತ್ಯವಲ್ಲ ಎಂದು ಹೇಳುವುದು ಅವಿವೇಕ. ಭಾವಸತ್ತಾವಾದ (Idealism) ವಸ್ತುಸತ್ತಾವಾದ (Realism) ಎಂಬ ಪಾಶ್ಚಾತ್ಯರ ವ್ಯರ್ಥವಾದವನ್ನು ಇದು ಹೋಲುವುದು. ಅವರ ಭಯಂಕರ ಮನಸ್ತಾಪಕ್ಕೆ ಮೂಲ ಅವರು 'ಸತ್ಯ' ಎಂಬ ಪದಕ್ಕೆ ಕೊಡುವ ಅರ್ಥದಲ್ಲಿದೆ. ಈಶ್ವರನೆಂಬ ಭಾವನೆಯಲ್ಲಿ ವಾಚ್ಯಾರ್ಥಲಾಕ್ಷ್ಯಾರ್ಥಗಳೆಲ್ಲ ಸೇರಿವೆ. ಆದಕಾರಣ ಈಶ್ವರ ಪ್ರಪಂಚದಲ್ಲಿರುವ ಇತರ ವಸ್ತುಗಳಷ್ಟೇ ಸತ್ಯ. ಇದೂ ಅಲ್ಲದೆ ಸತ್ಯ ಎಂಬ ಪದಕ್ಕೆ ಈಗ ತೋರಿದ ಅರ್ಥಕ್ಕಿಂತ ಹೆಚ್ಚು ಏನೂ ಇಲ್ಲ. ಈಶ್ವರನ ವಿಷಯದಲ್ಲಿ ನಮ್ಮ ತಾತ್ತ್ವಿಕ ಭಾವನೆ ಇದು.

ಆತ್ಮಸಾಕ್ಷಾತ್ಕಾರವೆ ಭಕ್ತಿಯೋಗದ ಗುರಿ

ಭಕ್ತನ ಮನೋದಾರ್ಢ್ಯವನ್ನು ವೃದ್ಧಿಮಾಡುವುದಕ್ಕೆ ಮಾತ್ರ ನೀರಸ ವಿವರಣೆಗಳು ಆವಶ್ಯಕ. ಇದಕ್ಕಿಂತ ಹೆಚ್ಚಿನ ಪ್ರಯೋಜನವಿಲ್ಲ. ಏಕೆಂದರೆ ತರ್ಕದ ಅಸ್ಪಷ್ಟ ಕೋಲಾಹಲದಿಂದ ಬೇಗ ಪಾರುಮಾಡಿಸಿ ಸಾಕ್ಷಾತ್ಕಾರದೇಗುಲಕ್ಕೆ ಒಯ್ಯುವ ಮಾರ್ಗದಲ್ಲಿ ಹೋಗುತ್ತಿರುವನು. ಭಗವಂತನ ದಯದಿಂದ ವಾಗಾಡಂಬರದಿಂದ ಕೂಡಿದ ಅಸಮರ್ಥತರ್ಕಕ್ಕೆ ಮಿಗಿಲಾದ ಸ್ಥಿತಿಯನ್ನು ಪಡೆಯುವನು. ಕೇವಲ ಪಾಂಡಿತ್ಯದ ಅಜ್ಞಾನ ದಲ್ಲಿ ತೊಳಲುವ ಬದಲು ಆತ್ಮಸಾಕ್ಷಾತ್ಕಾರದ ದಿವ್ಯಜ್ಯೋತಿ ದರ್ಶನ ವಾಗುವುದು. ಅವನು ಇನ್ನು ಮೇಲೆ ತರ್ಕಮಾಡಿ ನಂಬಬೇಕಾಗಿಲ್ಲ. ಹೆಚ್ಚು ಕಡಿಮೆ ಪ್ರತ್ಯಕ್ಷ ನೋಡಿದಂತೆಯೆ ಇರುವುದು. ಹೀಗೆ ದೇವರನ್ನು ನೋಡುವುದು ಪಡೆಯುವುದು ಆನಂದಿಸುವುದು ಎಲ್ಲಕ್ಕಿಂತ ಮಿಗಿಲಲ್ಲವೆ? ಮೋಕ್ಷಕ್ಕಿಂತಲೂ ಇದು ಮಿಗಿಲಾದ ಸ್ಥಿತಿಯೆಂದು ಸಾರುವ ಭಕ್ತರು ಹಲವರಿರುವರು. ಇದು ಅತಿ ಶ್ರೇಷ್ಠ ಪ್ರಯೋಜನ ಕೂಡ ಅಲ್ಲವೇನು? ಪ್ರಪಂಚದಲ್ಲಿ ಇರುವ ಬಹುಪಾಲು ಜನರು ಯಾವುದು ಮಾನವನಿಗೆ ಲೌಕಿಕ ಸುಖಭೋಗಗಳನ್ನು ಒದಗಿಸುವುದೊ ಅದೇ ಪ್ರಯೋಜನವಾದುದು, ಉಪಯೋಗವಾದುದು ಎಂದು ನಂಬುವರು. ಅವರಿಗೆ ಧರ್ಮ, ದೇವರು, ಕೈವಲ್ಯ, ಆತ್ಮ ಮುಂತಾದುವು ದ್ರವ್ಯ ಮತ್ತು ಪ್ರಾಪಂಚಿಕ ಭೋಗ ಗಳನ್ನು ಒದಗಿಸದೆ ಇರುವುದರಿಂದ ಪ್ರಯೋಜನವಿಲ್ಲ. ಇಂಥ ಜನರಿಗೆ ತಮ್ಮ ಇಂದ್ರಿಯ ತೃಪ್ತಿಪಡಿಸದೆ ಹಸಿವು ಬಾಯಾರಿಕೆಯನ್ನು ಅಡಗಿಸದೆ ಇರುವ ಯಾವ ವಸ್ತುವಿನಿಂದಲೂ ಪ್ರಯೋಜನವಿಲ್ಲ. ಪ್ರತಿಯೊಬ್ಬರಿಗೂ ಪ್ರಯೋಜನವೆಂಬುದು ಅವರವರ ಬಯಕೆಯನ್ನು ಅವಲಂಬಿಸಿರುವುದು. ತಿನ್ನುವುದು ಕುಡಿಯುವುದು ಸಂತಾನೋತ್ಪತ್ತಿ ಸಾಯುವದು ಇವನ್ನು ಯಾರು ಮೀರಿಹೋಗಲಾರರೊ ಅವರ ಸುಖವೆಲ್ಲ ಇಂದ್ರಿಯ ತೃಪ್ತಿ ಯಲ್ಲಿದೆ. ಇದನ್ನು ಮೀರಿದ ಯಾವುದಾದರೂ ಒಂದು ವಿಷಯವನ್ನು ಎಳ್ಳಷ್ಟಾದರೂ ಇದು ಅತ್ಯಾವಶ್ಯಕ ಎಂದು ಅನುಭವಿಸಬೇಕಾದರೂ ಅವರು ಇನ್ನೂ ಹಲವು ಜನ್ಮಗಳು ಸಾಗಿಹೋಗಬೇಕು. ಯಾರಿಗೆ ಸಂಸಾರದ ಕ್ಷಣಭಂಗುರ ಸುಖಕ್ಕಿಂತ ಆತ್ಮನ ನಿತ್ಯಸುಖ ಹೆಚ್ಚೊ, ಯಾರಿಗೆ ಇಂದ್ರಿಯ ತೃಪ್ತಿ ಏನೂ ಅರಿಯದ ಮಕ್ಕಳಾಟವೆಂದು ತೋರು

ವುದೊ, ಅವರಿಗೆ ಮಾತ್ರ ಭಗವಂತ ಮತ್ತು ಭಗವದ್ಭಕ್ತಿಯೇ ಜೀವನದ ಏಕಮಾತ್ರ ಪರಮ ಪುರುಷಾರ್ಥವಾಗಿರುವುದು. ದೇವರ ದಯೆಯಿಂದ ಪ್ರಾಪಂಚಿಕತೆಯಿಂದ ತುಂಬಿ ತುಳುಕಾಡುತ್ತಿರುವ ಜಗತ್ತಿನಲ್ಲಿ ಇನ್ನೂ ಅಂಥ ಕೆಲವು ವ್ಯಕ್ತಿಗಳು ಇರುವರು.

ಭಕ್ತಿಯೋಗ ನಾವು ಹೇಳಿದಂತೆ ಗೌಣೀ (ಇನ್ನೂ ಸಾಧನಸ್ಥಿತಿ) ಮತ್ತು ಪರಾ (ಅತಿಶ್ರೇಷ್ಠಸ್ಥಿತಿ) ಎಂದು ಎರಡು ಭಾಗವಾಗಿದೆ. ನಾವು ಇನ್ನೂ ಗೌಣೀ ಸ್ಥಿತಿಯಲ್ಲಿರುವಾಗ ನಮಗೆ ಹಲವು ಸ್ಥೂಲವಸ್ತುಗಳ ಸಹಾಯ ಅನಿವಾರ್ಯ ಎಂಬುದನ್ನು ಮುಂದುವರಿದಂತೆ ನೋಡುವೆವು. ಎಲ್ಲಾ ಧರ್ಮದ ಪುರಾಣ ಮತ್ತು ಬಾಹ್ಯಾಚಾರಗಳನ್ನೊಳಗೊಂಡ ಭಾಗವೆಲ್ಲ ಸ್ವಾಭಾವಿಕವಾದ ಬೆಳವಣಿಗೆ. ಇವು ಸಾಧಕನಿಗೆ ಮೊದಲು ಸಹಾಯಮಾಡಿ ಅವನನ್ನು ಭಗವಂತನೆಡೆಗೆ ಒಯ್ಯುವುದು ಎಂಬುದು ನಿಜವಾಗಿದೆ. ಯಾವ ಧರ್ಮದಲ್ಲಿ ಪುರಾಣ ಮತ್ತು ಬಾಹ್ಯಾಚಾರಗಳು ಹೇರಳವಾಗಿ ಬೆಳೆದಿವೆಯೊ ಅಲ್ಲಿ ಮಾತ್ರ ಪ್ರಚಂಡ ಆಧ್ಯಾತ್ಮಿಕವೀರರು ಜನಿಸಿರುವರೆಂಬುದು ಗಮನಾರ್ಹವಾದ ಸಂಗತಿ. ಸುಂದರವಾಗಿರುವ ಭವ್ಯವಾಗಿರುವ ಕಾವ್ಯ ಮಯವಾಗಿರುವ ಭಾಗವನ್ನೆಲ್ಲ, ದೇವರೆಡೆಗೆ ತಪ್ಪು ಹೆಜ್ಜೆಯನ್ನಿಟ್ಟುಕೊಂಡು ನಡೆಯುತ್ತಿರುವ ಹಸಿಗೂಸಿಗೆ ಸಹಾಯಕವಾಗಿರುವ ಭಾಗವನ್ನೆಲ್ಲ ನಾಶಮಾಡಲೆತ್ನಿಸುವ ಶುಷ್ಕಮತ ಭ್ರಾಂತಿಯಿಂದ ಪ್ರೇರಿತವಾದ ಧರ್ಮಗಳು—ಆಧ್ಯಾತ್ಮಿಕ ಚಾವಣಿಗೆ ಆಧಾರ ಭೂತವಾದ ಮೂಲ ಸ್ಥಂಬಗಳನ್ನೆ ಕಿತ್ತೆಗೆಯಲು ಹವಣಿಸುತ್ತಿರುವ ಧರ್ಮಾಂಧರು—ತಮ್ಮ ಅಜ್ಞಾನದಲ್ಲಿ ಮೌಢ್ಯತೆಯಿಂದ ಯಾವುದೊ ಒಂದನ್ನು ಸತ್ಯವೆಂದು ಭ್ರಮಿಸಿ, ಜೀವಪೋಷಕವಾದುದನ್ನೆಲ್ಲ, ಜೀವಿಯಲ್ಲಿ ವಿಕಾಸವಾಗುತ್ತಿರುವ ಆಧ್ಯಾತ್ಮಿಕ ತರುವಿಗೆ ಸಾರಭೂತವಾದ ಪೋಷಕ ದ್ರವ್ಯವನ್ನೆಲ್ಲ ನಾಶಮಾಡಲೆತ್ನಿಸುವ ಧರ್ಮಗಳು—ಕೊನೆಗೆ ತಮಗೆ ಉಳಿಯುವುದೆಲ್ಲ ತಿರುಳಿಲ್ಲದ ಬರಿಯ ಕರಟ, ಅಸಂಖ್ಯಾತ ಹುರುಳಿಲ್ಲದ ಶಬ್ದಜಾಲ, ವಿತಂಡವಾದವೆಂದು ಬಹಳ ಬೇಗ ಗೊತ್ತಾಗುವುದು. ಬಹುಶಃ ಕೊನೆಗೆ ಸ್ವಲ್ಪ ಸಮಾಜ ಸಂಸ್ಕರಣ ಅಥವಾ ಸಮಾಜ ಸುಧಾರಣೆ ಮಾತ್ರ ಉಳಿಯಬಹುದು. ಇಂತಹ ಧರ್ಮಾನುಯಾಯಿಗಳಲ್ಲಿ ಬಹುಪಾಲು ಜನ ತಿಳಿದೊ ತಿಳಿಯದೆಯೊ ಚಾರ್ವಾಕರು ಅವರ ಜೀವನದ ಮುಖ್ಯ ಗುರಿಯೆ, ಇಹಪರಲೋಕವೆ ಇಂದ್ರಿಯಭೋಗ. ಇದೇ ಅವರ ಇಷ್ಟಾ

ಪೂರ್ತ, ಪರಮಪುರುಷಾರ್ಥ. ಮಾನವನ ಐಹಿಕ ಸುಖಕ್ಕೆ ಕಾರಣವಾದ ಕಸಗುಡಿಸುವುದು, ಚರಂಡಿ ಬಳಿಯುವುದು ಮತ್ತು ಇನ್ನೂ ಇತರ ಸಾಮಾಜಿಕ ಕರ್ಮಗಳೇ ಜೀವನದ ಪರಮಸಾರ್ಥಕ ಪರಮಪುರುಷಾರ್ಥವಾಗುವುದು. ಇಂತಹ ಅಜ್ಞಾನ ಮತ್ತು ಮತಭ್ರಾಂತಿಯಿಂದ ಸಂಮ್ಮಿಶ್ರಣವಾಗಿರುವ ವಿಚಿತ್ರ ವ್ಯಕ್ತಿಗಳು ಎಷ್ಟು ಬೇಗ ತಮ್ಮ ಸ್ವಜಗುಣದಿಂದ ಹೊರ ಬಂದು ತಾವು ಸೇರಬೇಕೆಂದಿರುವ ಜಡವಾದಿ ನಾಸ್ತಿಕವಾದಿಗಳ ಪಂಗಡಕ್ಕೆ ಸೇರಿದರೆ ಜಗತ್ತಿಗೆ ಅಷ್ಟು ಮೇಲು. ಒಂದು ಕಣದಷ್ಟು ಧರ್ಮಾನುಷ್ಠಾನ ಆತ್ಮಸಾಕ್ಷಾತ್ಕಾರ, ಒಂದು ಮಣ ಮಾತಿಗಿಂತ ಒಣಹೆಮ್ಮೆಗಿಂತ ಮೇಲು. ಈ ನೀರಸಶಬ್ದಾಡಂಬರ ಮತಭ್ರಾಂತಿಯಿಂದ ಪ್ರಚಂಡ ಆಧ್ಯಾತ್ಮಿಕ ಜೀವಿಯೊಬ್ಬ ಉದ್ಭವಿಸುವುದನ್ನು ತೋರಿ. ಸಾಧ್ಯವಿಲ್ಲದೆ ಇದ್ದರೆ ನಿಮ್ಮ ಒಣ ಹರಟೆಯನ್ನು ನಿಲ್ಲಿಸಿ. ಸತ್ಯ ಶುಭ್ರ ಜ್ಯೋತಿ ಬರುವುದಕ್ಕೆ ನಿಮ್ಮ ಹೃದಯ ಕವಾಟಗಳನ್ನು ತೆರೆಯಿರಿ. ತಾವು ನಿಜವಾಗಿ ಏನನ್ನು ಮಾತಾಡುತ್ತಿರುವೆವು ಎಂಬುದನ್ನು ಅರಿತ ಭರತಖಂಡದ ಮಹಾತ್ಮರಡಿಯಲ್ಲಿ ಮಕ್ಕಳಂತೆ ಕುಳಿತುಕೊಳ್ಳುವ. ಅವರು ಹೇಳುವುದನ್ನು ಲಕ್ಷ್ಯವಿಟ್ಟು ಕೇಳುವ.

ಗುರುವಿನ ಆವಶ್ಯಕತೆ

ಪ್ರತಿಯೊಂದು ಜೀವಿಯೂ ಮುಕ್ತನಾಗಲೇ ಬೇಕು, ಪ್ರತಿಯೊಂದು ಪ್ರಾಣಿಯೂ ಕೊನೆಗೆ ಸಿದ್ಧವಾಗಲೇ ಬೇಕು. ನಮಗೆ ಈಗ ತೀದಿರುವುದೆಲ್ಲ ನಮ್ಮ ಹಿಂದಿನ ಕರ್ಮ ಮತ್ತು ಆಲೋಚನೆಯ ಪರಿಣಾಮ. ನಾವು ಭವಿಷ್ಯದಲ್ಲಿ ಏನಾಗುವೆವೊ ಅದೆಲ್ಲಾ ನಾವು ಈಗ ಏನುಮಾಡುವೆವೊ ಆಲೋಚಿಸುವೆವೊ ಅದರ ಪರಿಣಾಮ. ನಮ್ಮ ಅದೃಷ್ಟಕ್ಕೆ ನಾವೇ ಹೊಣೆಯಾದರೂ ಮತ್ತೊಬ್ಬರಿಂದ ಸಹಾಯವನ್ನು ಅಪೇಕ್ಷಿಸಬಾರದು ಎಂದು ಅಲ್ಲ. ಇಲ್ಲಿ ಬಹುಪಾಲು ಜನರಿಗೆ ಅನ್ಯರ ಸಹಾಯ ಅತ್ಯಾವಶ್ಯಕ. ಆ ಸಹಾಯ ಒದಗಿದಾಗ ಜೀವನದ ಉತ್ತಮ ಶಕ್ತಿ ಮತ್ತು ಸಾಧ್ಯತೆ ಬಹಳ ಬೇಗ ವೃದ್ಧಿಯಾಗುವುದು, ಆಧ್ಯಾತ್ಮಿಕ ಜೀವನ ಜಾಗ್ರತ

ವಾಗುವುದು, ಬೆಳವಣಿಗೆ ಚುರುಕಾಗುವುದು. ಮಾನವ ಕೊನೆಗೆ ಪವಿತ್ರನಾಗಿ ಪರಿಪೂರ್ಣನಾಗುವನು.

ಈ ಉತ್ತೇಜನ ಶಕ್ತಿ ನಮಗೆ ಗ್ರಂಥದಿಂದ ದೊರಕಲಾರದು. ಒಂದು ಜೀವಿಗೆ ಮತ್ತೊಂದು ಜೀವಿಯಿಂದ ಮಾತ್ರ ಉತ್ತೇಜನ ದೊರಕಬಹುದಲ್ಲದೆ ಅನ್ಯರಿಂದ ಅಲ್ಲ. ನಾವು ಬದುಕಿರುವ ಪರ್ಯಂತರ ಗ್ರಂಥಗಳನ್ನು ಓದಬಹುದು, ನಾವು ಬಹಳ ಬುದ್ಧಿವಂತರೂ ಆಗಬಹುದು. ಆದರೆ ಕೊನೆಗೆ ನಾವು ಆಧ್ಯಾತ್ಮಿಕ ಜೀವನದಲ್ಲಿ ವಿಕಾಸವೇ ಆಗಿಲ್ಲ ಎಂಬುದು ಗೋಚರವಾಗುವುದು. ಮನುಷ್ಯನ ಬುದ್ಧಿಶಕ್ತಿ ಬೆಳೆದಂತೆ ಅದಕ್ಕೆ ಸರಿಸಮವಾಗಿ ಅವನ ಆಧ್ಯಾತ್ಮಿಕ ಜೀವನ ವಿಕಾಸವೂ ಆಗುವುದೆಂಬ ನಿಯಮವೇನೂ ಇಲ್ಲ. ಗ್ರಂಥವನ್ನು ಓದಿ ಅದರಿಂದ ನಾವು ಧಾರ್ಮಿಕ ಜೀವನದಲ್ಲಿ ಬಹಳ ಮುಂದುವರಿಯುತ್ತಿರುವೆವೆಂದು ಕೆಲವುವೇಳೆ ಭ್ರಾಂತರಾಗುವೆವು. ಆದರೆ ಇಂತಹ ಅಧ್ಯಯನದಿಂದ ನಮ್ಮ ಜೀವನದ ಮೇಲೆ ಆಗಿರುವ ಪರಿಣಾಮವನ್ನು ವಿಭಜನೆಮಾಡಿ ನೋಡಿದರೆ, ಹೆಚ್ಚು ಎಂದರೆ ಇದರಿಂದ ನಮ್ಮ ಬುದ್ಧಿಗೆ ಸ್ವಲ್ಪ ಪ್ರಯೋಜನವಾಗಿದೆಯೆ ಹೊರತು, ನಮ್ಮ ಆಧ್ಯಾತ್ಮಿಕತೆಗೆ ಯಾವ ಸಹಾಯವೂ ಆಗಿಲ್ಲ. ಧಾರ್ಮಿಕ ಜೀವನದಲ್ಲಿ ಉತ್ತೇಜಿತರನ್ನಾಗಿ ಮಾಡುವುದಕ್ಕೆ ಗ್ರಂಥಗಳಿಗೆ ಅಸಾಧ್ಯವಾದುದರಿಂದಲೆ, ನಮ್ಮಲ್ಲಿ ಪ್ರತಿಯೊಬ್ಬರೂ ಹೆಚ್ಚು ಕಡಿಮೆ ಆಧ್ಯಾತ್ಮಿಕ ವಿಷಯಗಳನ್ನು ಕುರಿತು ಅದ್ಭುತವಾಗಿ ಮಾತನಾಡಿದರೂ, ಕಾರ್ಯತಃ ಬಂದಾಗ, ಅದರಂತೆ ಬಾಳಬೇಕಾದಾಗ ನಮಗೆ ಸಾಧ್ಯವೇ ಇಲ್ಲದಂತೆ ತೋರುವುದು. ಆತ್ಮ ಜಾಗ್ರತಿಗೆ ಮತ್ತೊಂದು ಜೀವದಿಂದಲೇ ಉತ್ತೇಜನ ದೊರಕಬೇಕು.

ಯಾರಿಂದ ಇಂತಹ ಉತ್ತೇಜನ ಬರುವುದೊ ಅವನೇ ಗುರು ಯಾರಿಗೆ ಇದನ್ನು ನೀಡುವರೊ ಅವನೆ ಶಿಷ್ಯ. ಇಂತಹ ಉತ್ತೇಜನವನ್ನು ಮತ್ತೊಂದು ಜೀವಿಗೆ ಕೊಡಬೇಕಾದರೆ ಮೊದಲು ಯಾರಿಂದ ಇದು ಬರುತ್ತದೆಯೊ ಅವರಿಗೆ ಈ ಉತ್ತೇಜನವನ್ನು ಮತ್ತೊಬ್ಬನಿಗೆ ನೀಡುವ ಯೋಗ್ಯತೆ ಇರಬೇಕು. ಎರಡನೆಯದಾಗಿ ಅದನ್ನು ಸ್ವೀಕರಿಸುವುದಕ್ಕೆ ವ್ಯಕ್ತಿ ಯೋಗ್ಯವಾಗಿರಬೇಕು. ಬೀಜ ಸಜೀವವಾಗಿರಬೇಕು, ಕ್ಷೇತ್ರ ಚೆನ್ನಾಗಿ ಹದವಾಗಿರಬೇಕು, ಇವೆರಡೂ ಸರಿಯಾಗಿದ್ದರೆ ಮಾತ್ರ ಅದ್ಭುತ ಆಧ್ಯಾತ್ಮಿಕತೆ ವಿಕಾಸವಾಗುವುದು. "ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ" ಗುರುವೂ ಅದ್ಭುತ ವ್ಯಕ್ತಿಯಾಗಿರಬೇಕು, ಶಿಷ್ಯನೂ ಜಾಣ

ನಾಗಿರಬೇಕು. ಇಬ್ಬರೂ ಅದ್ಭುತ ವ್ಯಕ್ತಿಗಳಾದಾಗ ಮಾತ್ರ ಅಸಾಧಾರಣ ಆಧ್ಯಾತ್ಮಿಕ ಜಾಗ್ರತಿ ಉಂಟಾಗುವುದು, ಇಲ್ಲದೆ ಇದ್ದರೆ ಇಲ್ಲ. ಇಂತಹವರೇ ನಿಜವಾದ ಗುರುಗಳು, ಇಂತಹವರೆ ನಿಜನಾದ ಶಿಷ್ಯರು. ಉಳಿದವರೆಲ್ಲ ಆಧ್ಯಾತ್ಮಿಕತೆಯೊಂದಿಗೆ ಆಟವಾಡುತ್ತಿರುವರು. ಅವರಲ್ಲಿ ಸ್ವಲ್ಪ ಕುತೂಹಲ ಜಾಗ್ರತವಾಗಿದೆ, ವಿಚಾರಮಾಡಬೇಕೆಂಬ ಬುದ್ಧಿ ಮೊಳೆತಿದೆ. ಆದರೆ ಅವರೆಲ್ಲ ಇನ್ನೂ ಆಧ್ಯಾತ್ಮಿಕ ಕ್ಷೇತ್ರದ ಹೊರವಳಯದಲ್ಲಿ ನಿಂತಿರುವರು. ಇದರಿಂದಲೂ ಸ್ವಲ್ಪ ಪ್ರಯೋಜನವಿದೆ, ಇದರಲ್ಲಿ ಸಂಶಯವಿಲ್ಲ. ಇದರಿಂದಲೂ ಕಾಲಕ್ರಮೇಣ ನಿಜವಾದ ಆಧ್ಯಾತ್ಮಿಕ ದಾಹ ಉದಿಸಬಹುದು. ಪ್ರಕೃತಿಯಲ್ಲಿ ಒಂದು ಅದ್ಭುತ ನಿಯಮವಿದೆ. ಕ್ಷೇತ್ರ ಅಣಿಯಾಗಿದ್ದರೆ ಬೀಜ ಬಂದೇ ತೀರಬೇಕು. ಒಂದು ಜೀವಿ ಆಧ್ಯಾತ್ಮಿಕತೆಗಾಗಿ ಹಂಬಲಿಸಿದರೆ ಅದನ್ನು ಅನುಗ್ರಹಿಸುವ ಜೀವಿಕೂಡ ಬಂದೇ ತೀರುವನು. ಸ್ವೀಕರಿಸುವ ವ್ಯಕ್ತಿಯಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಆಕರ್ಷಿಸುವುದು ಪಕ್ವವಾಗಿ ಬಲವಾದೊಡನೆಯೆ ಈ ಆಕರ್ಷಣೆಯನ್ನು ಸಫಲ ಮಾಡುವ ಜ್ಯೋತಿ ತನಗೆತಾನೆ ಬಂದೇ ತೀರುವುದು.

ಮಾರ್ಗದಲ್ಲಿ ಹಲವು ಅಪಾಯಗಳೂ ಉಂಟು. ಉದಾಹರಣೆಗೆ ಶಿಷ್ಯ ತನ್ನಲ್ಲಿ ಏಳುವ ತಾತ್ಕಾಲಿಕ ಉದ್ವೇಗವನ್ನು ನಿಜವಾದ ಆಧ್ಯಾತ್ಮಿಕ ಹಂಬಲ ಎಂದು ತಪ್ಪು ತಿಳಿಯಬಹುದು. ಅದನ್ನು ನಮ್ಮ ಜೀವನದಲ್ಲೆ ಪರೀಕ್ಷಿಸಿಕೊಳ್ಳಬಹುದು. ಅನೇಕವೇಳೆ ನಮ್ಮ ಜೀವನದಲ್ಲಿ ನಾವು ಪ್ರೀತಿಸುವವರೊಬ್ಬರು ಕಾಲವಾಗುವರು. ನಮಗೊಂದು ಆಘಾತ ಬೀಳುವುದು. ಪ್ರಪಂಚ ನಮ್ಮ ಕೈಗಳಿಂದ ನುಸುಳಿಹೋಗುವಂತೆ ತೋರುವುದು. ನಮಗೆ ಅದಕ್ಕಿಂತಲೂ ಸತ್ಯವಾದ ಉತ್ತಮವಾದ ವಸ್ತುಬೇಕು, ನಾವು ಧಾರ್ಮಿಕರಾಗಬೇಕು ಎನ್ನಿಸುವುದು. ಕೆಲವು ದಿನದಲ್ಲಿ ಆ ಭಾವನೆ ಮಾಯವಾಗುವುದು. ನಾವು ಹಿಂದೆ ಇದ್ದ ಎಡೆಯಲ್ಲೆ ಸಿಕ್ಕಿಕೊಂಡಿರುವುದು ಕಾಣುವುದು. ನಾವೆಲ್ಲ ಅನೇಕವೇಳೆ ಇಂತಹ ಉದ್ವೇಗವನ್ನೇ ಅಧ್ಯಾತ್ಮಿಕ ಹಂಬಲವೆಂದು ಭ್ರಾಂತರಾಗುವೆವು. ಈ ಬಗೆಯ ಕ್ಷಣಿಕ ಉದ್ವೇಗವನ್ನು ನಾವು ಹಾಗೆ ತಪ್ಪು ತಿಳಿದುಕೊಂಡಿರುವವರೆಗೆ ನಿರಂತರವಾದ ನಿಷ್ಕಪಟವಾದ ಆಧ್ಯಾತ್ಮಿಕ ದಾಹ ನಮಗೆ ಪ್ರಾಪ್ತವಾಗುವುದಿಲ್ಲ. ನಮ್ಮ ಜೀವನಕ್ಕೆ ಆಧ್ಯಾತ್ಮಿಕತೆಯನ್ನು ಅನುಗ್ರಹಿಸುವ ಗುರು ದೊರಕಲಾರ. ನಾವು ಯಾವಾಗಲಾದರೂ ನಮಗೆ ಸತ್ಯಬೇಕು, ನಮ್ಮ ಸತ್ಯಾ

ನ್ವೇಷಣೆ ಫಲಕಾರಿಯಾಗಿಲ್ಲ ಎಂದು ದೂರುವುದಕ್ಕೆ ಪ್ರಯತ್ನಿಸಿದರೆ, ಹಾಗೆ ದೂರುವುದಕ್ಕೆ ಮುಂಚೆ ನಮ್ಮ ಆತ್ಮಪರೀಕ್ಷೆ ಮಾಡಿಕೊಂಡು ನಿಜವಾದ ಆಧ್ಯಾತ್ಮಿಕ ಹಂಬಲ ನಮ್ಮ ಜೀವನದಲ್ಲಿ ಇದೆಯೆ ಎಂಬುದನ್ನು ನೋಡಿಕೊಳ್ಳಬೇಕು. ಆಗ ಅನೇಕರಲ್ಲಿ, ನಾವಿನ್ನೂ ಸತ್ಯಸ್ವೀಕಾರಕ್ಕೆ ಯೋಗ್ಯರಲ್ಲ, ನಿಜವಾದ ಆಧ್ಯಾತ್ಮಿಕ ದಾಹ ನಮ್ಮಲ್ಲಿ ಇಲ್ಲ ಎಂಬುದು ಗೊತ್ತಾಗುವುದು.

ಗುರುವಿನ ವಿಷಯದಲ್ಲಿ ಮತ್ತೂ ದೊಡ್ಡ ಅಪಾಯಗಳಿವೆ. ಹಲವರು ಅಜ್ಞಾನದಲ್ಲೆ ತನ್ಮಯರಾಗಿದ್ದರೂ ಅಹಂಕಾರದಿಂದ ಉನ್ಮತ್ತರಾಗಿ ತಾವು ಸರ್ವಜ್ಞರೆಂದು ಭಾವಿಸುವರು. ಅವರು ಇಷ್ಟುಮಾತ್ರ ಮಾಡಿ ನಿಲ್ಲುವುದಿಲ್ಲ, ಇತರರ ಜವಾಬ್ದಾರಿಯನ್ನೂ ತಾವು ಸ್ವೀಕರಿಸುತ್ತೇವೆ ಎನ್ನುವರು. ಕುರುಡ ಕುರುಡನಿಗೆ ಮಾರ್ಗದರ್ಶಕನಾಗಿ ಇಬ್ಬರೂ ಹಳ್ಳಕ್ಕೆ ಬಿದ್ದಂತೆ. "ಮೂಢರು ಅವಿದ್ಯೆಯಲ್ಲಿ ನಿರತರಾಗಿ, ತಾವೆ ಪಂಡಿತರು ತಿಳಿದವರು ಎಂದು ಹೆಮ್ಮೆಪಡುತ್ತ, ಕುರುಡರನ್ನು ಅನುಸರಿಸುತ್ತಿರುವ ಕುರುಡರಂತೆ ಮುಗ್ಗರಿಸುತ್ತಾ ತಾರಾಡುತ್ತಿರುವರು." ಪ್ರಪಂಚದಲ್ಲಿ ಇಂಥ ಜನ ತುಂಬಿ ತುಳುಕಾಡುತ್ತಿರುವರು. ಪ್ರತಿಯೊಬ್ಬನೂ ಗುರುವಾಗಲಿಚ್ಛಿಸುವನು. ಪ್ರತಿಯೊಬ್ಬ ಭಿಕ್ಷುಕನು ಕೋಟಿ ದ್ರವ್ಯವನ್ನು ದಾನ ಮಾಡಲಿಚ್ಛಿಸುವನು. ಈ ಭಿಕ್ಷುಕರು ಎಷ್ಟು ನಗೆಗೆ ಈಡಾಗಿರುವರೊ ಹಾಗೆಯೆ ಗುರುಗಳೂ ಕೂಡ ಹಾಸ್ಯಾಸ್ಪದರಾಗುವರು.

ಗುರುಶಿಷ್ಯರ ಲಕ್ಷಣ

ಗುರುವನ್ನು ತಿಳಿದುಕೊಳ್ಳುವುದು ಹೇಗೆ? ಸೂರ್ಯನನ್ನು ನೋಡುವುದಕ್ಕೆ ಪಂಜಿನ ಬೆಳಕು ಬೇಕಾಗಿಲ್ಲ. ಅವನನ್ನು ನೋಡುವುದಕ್ಕೆ ಒಂದು ದೀಪವನ್ನು ಹಚ್ಚಬೇಕಾಗಿಲ್ಲ. ಸೂರ್ಯೋದಯವಾದೊಡನೆಯೆ ಸ್ವಭಾವತಃ ಅದು ನಮಗೆ ಗೊತ್ತಾಗುವುದು. ಮಾನವ ಗುರು ನಮ್ಮ ನೆರವಿಗೆ ಬಂದರೆ, ಸತ್ಯವಾಗಲೆ ಅವನಲ್ಲಿ ಬೆಳಗುವುದಕ್ಕೆ ಆರಂಭವಾಗಿದೆ ಎಂದು ನಮ್ಮ ಮನಸ್ಸಿಗೆ ಹೇಗೊ ಗೊತ್ತಾಗುವುದು. ಸತ್ಯ ಸ್ವತಃ ಸಿದ್ಧವಾದುದು, ಅದನ್ನು ಸತ್ಯವೆಂದು ಸಾಧಿಸುವುದಕ್ಕೆ ಮತ್ತಾವ ಪ್ರಮಾಣವೂ

ಬೇಕಾಗಿಲ್ಲ. ಅದು ಸ್ವಯಂ ಪ್ರಕಾಶಮಾನವಾದುದು. ಅದು ನಮ್ಮ ಜೀವನದ ಅಂತರತಮ ಭಾಗವನ್ನೆಲ್ಲಾ ಪ್ರವೇಶಿಸುವುದು. ಅದರ ಮುಂದೆ ಇಡೀ ಪ್ರಪಂಚ ಬಾಗಿ ' ಇದೇ ಸತ್ಯ ' ಎಂದು ಘೋಷಿಸುವುದು. ಯಾವ ಗುರುಗಳ ಜ್ಞಾನ ಮತ್ತು ಉಪದೇಶ ಸೂರ್ಯನಂತೆ ಪ್ರಕಾಶಿಸುತ್ತಿರುವುದೊ ಅವರೇ ಜಗತ್ತು ಸಂದರ್ಶಿಸಿದ ಶ್ರೇಷ್ಠತಮ ವ್ಯಕ್ತಿಗಳು. ಪ್ರಪಂಚದ ಬಹುಪಾಲು ಜನ ಅಂತಹ ವ್ಯಕ್ತಿಗಳನ್ನು ದೇವರೆಂದು ಆರಾಧಿಸುವರು. ಆದರೆ ಅವರಿಗಿಂತ ಸ್ವಲ್ಪ ಕೆಳಗೆ ಇರುವವರಿಂದಲೂ ನಾವು ಸಹಾಯವನ್ನು ಪಡೆಯಬಹುದು. ಯಾರಿಂದ ನಮಗೆ ಉಪದೇಶ ದೊರಕಬೇಕೊ ಸಹಾಯವಾಗಬೇಕೊ ಅವರನ್ನು ತಿಳಿದುಕೊಳ್ಳುವಷ್ಟು ಸಾಮರ್ಥ್ಯ ನಮ್ಮಲ್ಲಿ ಇಲ್ಲ. ಆದಕಾರಣವೆ ಶಿಷ್ಯನ ಯೋಗ್ಯತಾ ಪರೀಕ್ಷೆಗೆ ಹೇಗೆ ಲಕ್ಷಣಗಳು ಇರಬೇಕೊ ಹಾಗೆಯೆ ಗುರುವಿನ ಯೋಗ್ಯತೆಯನ್ನು ನಿಶ್ಕರ್ಷಿಸಬಲ್ಲ ಕೆಲವು ಲಕ್ಷಣಗಳು, ಗುಣಗಳು ಇರಬೇಕು.

ಶಿಷ್ಯನಲ್ಲಿ ಇರಬೇಕಾದ ಮುಖ್ಯಗುಣಗಳು ಪರಿಶುದ್ಧತೆ, ನಿಜವಾದ ಜ್ಞಾನಾಕಾಂಕ್ಷೆ, ಮತ್ತು ಧೃಢ ಪ್ರಯತ್ನ. ಯಾರು ಪರಿಶುದ್ಧರಲ್ಲವೊ ಅವರು ನಿಜವಾದ ಆಧ್ಯಾತ್ಮಿಕ ವ್ಯಕ್ತಿಗಳಾಗಲಾರರು. ಆಧ್ಯಾತ್ಮಿಕ ಜೀವಿಯಾಗಬೇಕೆಂದು ಬಯಸುವವನು ಕಾಯಾ ವಾಚಾ ಮನಸಾ ಅತ್ಯಾವಶ್ಯಕವಾಗಿ ಪರಿಶುದ್ಧನಾಗಿರಬೇಕು. ಜ್ಞಾನಾಕಾಂಕ್ಷೆಯ ವಿಷಯದಲ್ಲಿ ನಾವು ಹೆಚ್ಚು ಹೇಳಬೇಕಾಗಿಲ್ಲ. ನಮಗೆ ಬೇಕಾಗಿರುವುದು ದೊರಕುತ್ತದೆ ಎಂಬುದು ಸನಾತನವಾದ ನಿಯಮ. ನಾವು ಯಾವುದನ್ನು ಕೋರುತ್ತಿರುವೆವೊ ಅದಲ್ಲದೆ ಯಾರಿಗೂ ಮತ್ತೇನೂ ದೊರಕುವುದಿಲ್ಲ. ಸತ್ಯಕ್ಕಾಗಿ ಹಂಬಲಿಸುವುದು ಬಹಳ ಕಷ್ಟ. ನಾವು ಆಲೋಚಿಸುವಷ್ಟು ಸುಲಭವಲ್ಲ. ಧಾರ್ಮಿಕ ವಿಷಯಗಳನ್ನು ಕೇಳುವುದು, ಅದಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಓದುವುದು, ಇವೇ ಸಾಲದು ನಮ್ಮ ಹೃದಯದ ಹಂಬಲವನ್ನು ತೋರುವುದಕ್ಕೆ. ಪವಿತ್ರ ಭಾವನೆಯನ್ನು ನಿಜವಾಗಿ ಅನುಭವಿಸಿ ನಮ್ಮ ಹೀನ ಪ್ರವೃತ್ತಿಯಿಂದ ಪಾರಾಗುವವರೆಗೆ, ನಿರಂತರ ಶ್ರಮಪಡುತ್ತಿರಬೇಕು, ಹೋರಾಟವಾಗುತ್ತಿರಬೇಕು, ನಮ್ಮ ಹೀನ ಸಂಸ್ಕಾರಗಳಿಂದ ಪಾರಾಗಲು ಅವಿಶ್ರಾಂತರಾಗಿ ದುಡಿಯುತ್ತಿರಬೇಕು. ಈ ಹೋರಾಟ ಎಲ್ಲೊ ಒಂದೆರಡು ದಿನ ವರುಷ ಅಥವಾ ಹಲವು ಜನ್ಮಗಳ ಮಾತಲ್ಲ. ನೂರಾರು ಜನ್ಮಗಳು ಈ ಹೋರಾಟವನ್ನು ನಡೆಸಬೇಕಾಗಬಹುದು. ಕೆಲವುವೇಳೆ

ಜಯ ಶ್ರೀಘ್ರದಲ್ಲಿ ಲಭಿಸಬಹುದು, ಆದರೆ ಯುಗದಷ್ಟು ದೀರ್ಘಕಾಲ ಬೇಕೆಂದು ತೋರಿದರೂ ಸಾವಧಾನದಿಂದ ಕಾಯಲು ಸಿದ್ಧರಾಗಿರಬೇಕು. ಇಂತಹ ಧೃಢ ಪ್ರಯತ್ನದಿಂದ ಪ್ರೇರಿತನಾದ ಶಿಷ್ಯ ಕೊನೆಗೆ ಜಯ ಗಳಿಸುವನು, ಆತ್ಮ ಸಾಕ್ಷಾತ್ಕಾರವನ್ನು ಪಡೆಯುವನು.

ಗುರುವಿಗೆ ಶಾಸ್ತ್ರಗಳ ಸಾರ ಗೊತ್ತಿರಬೇಕು. ಪ್ರಪಂಚದ ಜನರೆಲ್ಲ ವೇದ ಖೊರಾರ್ ಬೈಬಲ್ ಓದಬಹುದು. ಆದರೆ ಅವರು ಓದುವುದೆಲ್ಲ ಶಬ್ದ ಜಾಲ, ವಾಕ್ಯಲಕ್ಷಣ, ಪದೋತ್ಪತ್ತಿ, ಭಾಷಾ ಸ್ವರೂಪ ಮಾತ್ರ. ಇವೆಲ್ಲ ಧರ್ಮದ ನೀರಸಭಾಗಗಳು. ಯಾವ ಗುರು ಹೆಚ್ಚು ಶಬ್ದ ಜಾಲದಲ್ಲಿ ನಿರತನಾಗಿರುವನೊ, ಅದರ ಆವೇಗಕ್ಕೆ ಮರುಳಾಗಿ ಹೋಗುವನೊ ಅವನು ಶಾಸ್ತ್ರಗಳ ಸಾರವನ್ನು ತಿಳಿಯಲಾರ. ನಿಜವಾದ ಗುರುವಿನ ಲಕ್ಷಣವೆ ಅವನಲ್ಲಿ ಶಾಸ್ತ್ರಗಳ ಸಾರದ ಅನುಭವ ಇರಬೇಕು. ಶಾಸ್ತ್ರಗಳ ಪದಪುಂಜ ಒಂದು ಮಹಾಕಾನನದಂತೆ. ಆನೇಕವೇಳೆ ಮನುಷ್ಯ ಅದರಲ್ಲಿ ದಾರಿ ತಪ್ಪುವನು. "ಮಾತುಗಳನ್ನು ಹಲವು ಬಗೆಯಲ್ಲಿ ರಚಿಸುವರೀತಿ, ಹಲವು ರೀತಿ ಸುಂದರವಾದ ಭಾಷೆಯಲ್ಲಿ ಮಾತಾನಾಡುವುದು, ಶಾಸ್ತ್ರಾರ್ಥವನ್ನು ಹಲವು ರೀತಿ ಚಮತ್ಕಾರವಾಗಿ ವಿವರಿಸುವುದು ಇವೆಲ್ಲ ಪಂಡಿತ ರಂಜನೆಗೆ ಮತ್ತು ಭೋಗಕ್ಕೆ ಯೋಗ್ಯವೇ ಹೊರತು ಇದರಿಂದ ಮುಕ್ತಿ ದೊರಕಲಾರದು." ಇತರರಿಗೆ ಜ್ಞಾನದಾನ ಮಾಡುವುದಕ್ಕೆ ಯಾರು ಇಂತಹ ಮಾರ್ಗವನ್ನು ಅನುಸರಿಸುವರೊ ಅವರು ಜನರಿಗೆ ತಮ್ಮ ಪಾಂಡಿತ್ಯ ಪ್ರದರ್ಶಿಸಿ ಅವರಿಂದ ತಾವು ದೊಡ್ಡ ಪಂಡಿತರೆಂದು ಹೊಗಳಿಕೆಯನ್ನು ಕೇಳುವುದಕ್ಕೆ ಕಾತುರರಾಗಿರುವರು. ಪ್ರಪಂಚದ ಯಾವ ಮಹಾಗುರುಗಳೂ ಶಾಸ್ತ್ರವ್ಯಾಖ್ಯಾನದ ಗೋಜಿಗೆ ಹೋಗಲಿಲ್ಲವೆಂಬುದು ನಿಮಗೆ ತೋರುವುದು. ಗ್ರಂಥಪೀಡನೆ, ಶಬ್ದಗಳ ನಾನಾರ್ಥಶೋಧನೆ ಅವುಗಳ ಮೂಲ ಸ್ವರೂಪ ವಿಚಾರಣೆ ಇವುಗಳ ಗೋಜಿಗೆ ಹೋಗಲಿಲ್ಲ. ಆದರೂ ಅವರು ಎಷ್ಟು ಚೆನ್ನಾಗಿ ಬೋಧಿಸಿದರು. ಇತರರಿಗೆ ಬೋಧಿಸುವುದಕ್ಕೆ ಏನೂ ಇಲ್ಲದೆ ಇದ್ದರೂ ಕೆಲವುವೇಳೆ ಒಂದು ಪದವನ್ನು ತೆಗೆದುಕೊಂಡು ಆ ಪದ ಹೇಗೆ ಹುಟ್ಟಿತು, ಮೊದಲು ಅದನ್ನು ಯಾರು ಬಳಸಿದರು, ಆ ಮನುಷ್ಯ ಏನು ತಿಂದ, ಎಷ್ಟು ಹೊತ್ತು ಮಲಗುತ್ತಿದ್ದ ಎನ್ನುವುದರ ಮೇಲೆ ಮೂರು ಕಾಂಡದ ಉದ್ಗ್ರಂಥವನ್ನು ಬರೆಯುತ್ತಾರೆ.

ಭಗವಾನ್ ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಿದ್ದರು.

ಕೆಲವರು ಒಂದು ಮಾವಿನ ತೋಟಕ್ಕೆ ಹೋಗಿ ಗಿಡದ ರೆಂಬೆಕೊಂಬೆ ಅದರ ಬಣ್ಣ ಮತ್ತು ಅವುಗಳ ಗಾತ್ರವನ್ನು ಮತ್ತೊಂದರೊಡನೆ ಹೋಲಿಸುತ್ತ ಅದನ್ನು ಜೋಪಾನವಾಗಿ ಒಂದು ಪುಸ್ತಕದಲ್ಲಿ ಬರೆದರು. ಅನಂತರ ಪ್ರತಿ ಯೊಂದು ವಿಷಯದಮೇಲೂ ಚರ್ಚೆಮಾಡುವುದಕ್ಕೆ ದೊಡ್ಡದೊಂದು ಪರಿಷತ್ತನ್ನು ಕೂಡಿಸಿದರು. ಬಹಳ ಕುತೂಹಲದಿಂದ ಇದನ್ನು ಅವರು ಕೇಳಿ ದರು ಎಂಬುದಕ್ಕೆ ಸಂದೇಹವಿಲ್ಲ. ಆದರೆ ಅವರಲ್ಲಿ ಒಬ್ಬ ಎಲ್ಲರಿಗಿಂತ ವಿವೇಕಿ ಯಾದವನು ಇದಾವುದನ್ನು ಲೆಕ್ಕಿಸಲಿಲ್ಲ. ಹಣ್ಣನ್ನು ತಿನ್ನಲು ಮೊದಲು ಮಾಡಿದನು. ಅವನು ಬುದ್ಧಿವಂತನಲ್ಲವೆ? ಎಲೆ ರೆಂಬೆ ಎಣಿಸಿ ಬರೆದಿಡು ವುದನ್ನು ಇತರರಿಗೆ ಬಿಡಿ. ಇಂತಹ ವಿಷಯಗಳಿಗೂ ಯೋಗ್ಯ ಸ್ಥಳವಿದೆ, ಆದರೆ ಆಧ್ಯಾತ್ಮಿಕ ಕಾರ್ಯಕ್ಷೇತ್ರದಲ್ಲಿ ಅಲ್ಲ. ಎಲೆ ಎಣಿಸುವವರ ಪೈಕಿ ಯಾವ ಆಧ್ಯಾತ್ಮಿಕ ವೀರನನ್ನೂ ನೀವು ನೊಡಲಾರಿರಿ. ನೀವು ಭಕ್ತರಾಗ ಬೇಕಾದರೆ, ಶ್ರೀಕೃಷ್ಣ ಮಥುರೆಯಲ್ಲಿ ಹುಟ್ಟಿದನೊ ವ್ರಜದಲ್ಲಿ ಹುಟ್ಟಿದನೊ? ಅವನು ಮಾಡುತ್ತಿದ್ದುದು ಏನು? ಅಥವಾ ನಿಜವಾಗಿ ಯಾವ ತಾರೀಖಿನ ದಿನ ಅವನು ಗೀತಾ ಸಂದೇಶವನ್ನು ಸಾರಿದನು ಎಂಬುದನ್ನು ತಿಳಿದು ಕೊಳ್ಳಬೇಕಾಗಿಲ್ಲ. ಗೀತೆಯಲ್ಲಿ ಬರುವ ಕರ್ಮತತ್ಪರತೆ ಮತ್ತು ಪ್ರೇಮ ಮುಂತಾದ ಘನವಾದ ವಿಷಯಗಳಮೇಲೆ ನಮಗೆ ಆಸಕ್ತಿ ಬೇಕು, ಅಷ್ಟೆ. ಈ ಗ್ರಂಥ ಮತ್ತು ಅದರ ಕರ್ತೃವಿನ ವಿಷಯದ ಚರ್ಚೆ ವಿವರಗಳೆಲ್ಲ ಪಂಡಿತ ರಂಜನೆಗೆ ಮಾತ್ರ. ಅವರಿಗೆ ಬೇಕಾದುದನ್ನು ಅವರು ಇಟ್ಟುಕೊಳ್ಳಲಿ. ಪಾಂಡಿತ್ಯದಿಂದ ಕೂಡಿರುವ ಅವರ ವಾದಗಳಿಗೆ 'ಶಾಂತಿಃ ಶಾಂತಿಃ' ಎಂದು ಇತ್ತ ಬನ್ನಿ, ಮಾವಿನ ಹಣ್ಣನ್ನು ತಿನ್ನಿ.

ಗುರುವಿನಲ್ಲಿ ಇರಬೇಕಾದ ಎರಡನೆ ಲಕ್ಷಣವೆ ಪಾಪರಾಹಿತ್ಯ. ಗುರುವಿನ ಶೀಲ ಮತ್ತು ಅವನ ವ್ಯಕ್ತಿತ್ವವನ್ನು ಏತಕ್ಕೆ ನೋಡಬೇಕು? ಅವನು ಹೇಳುವುದನ್ನು ಪರೀಕ್ಷಿಸಿ ತೆಗೆದುಕೊಂಡರೆ ಸಾಕಲ್ಲವೆ ಎಂದು ಹೇಳುವರು. ಇದು ಸರಿಯಲ್ಲ. ಒಂದು ವಸ್ತುವಿನ ಚಲನವಲನಗಳನ್ನು ನಿರ್ಧರಿಸುವ ಲೆಕ್ಕಾಚಾರವಾಗಲಿ, ರಸಾಯನಶಾಸ್ತ್ರವಾಗಲಿ ಅಥವಾ ಇನ್ನು ಯಾವುದಾದರೂ ಭೌತವಿಜ್ಞಾನಶಾಸ್ತ್ರವನ್ನು ಕುರಿತ ವಿಷಯವಾದರೆ ಹೇಳುವವನು ಹೇಗಾದರೂ ಇರಬಹುದು. ವಿಜ್ಞಾನಶಾಸ್ತ್ರಕ್ಕೆ ಬೇಕಾಗಿ ರುವದು ಕೇವಲ ಕೆಲವು ಬೌದ್ಧಿಕ ಸಲಕರಣೆ. ಆದರೆ ಆಧ್ಯಾತ್ಮಿಕ ಜೀವನದಲ್ಲಿ ಮೊದಲಿಂದ ಕೊನೆಯವರೆಗೆ ಇದು ಸಾಧ್ಯವೇ ಇಲ್ಲ.

ಪರಿಶುದ್ಧವಾಗಿಲ್ಲದ ಹೃದಯದಲ್ಲಿ ಆಧ್ಯಾತ್ಮಿಕ ಜ್ಯೋತಿ ಎಂದಿಗೂ ಬೆಳಗಲಾರದು. ಪರಿಶುದ್ಧನಲ್ಲದವನು ಯಾವ ಧರ್ಮವನ್ನು ಬೋಧಿಸಬಲ್ಲ? ಒಬ್ಬ ತಾನು ಆಧ್ಯಾತ್ಮಿಕ ಸತ್ಯವನ್ನು ಗಳಿಸುವುದಕ್ಕಾಗಲಿ ಅದನ್ನು ಇತರರಿಗೆ ಅನುಗ್ರಹಿಸುವುದಕ್ಕಾಗಲಿ ಮುಖ್ಯವಾಗಿ ಬೇಕಾಗಿರುವುದೇ ಚಿತ್ತಶುದ್ಧಿ. ಚಿತ್ತಶುದ್ಧವಾಗುವತನಕ ಭಗವಂತನ ದರ್ಶನವಾಗಲಿ ಅತೀಂದ್ರಿಯ ಸತ್ಯದ ಕ್ಷಣಿಕ ಅನುಭವವಾಗಲಿ ದೊರಕಲಾರದು. ಆದಕಾರಣವೆ ಆಧ್ಯಾತ್ಮಿಕ ಗುರುವಿನಲ್ಲಿ ಮೊದಲು ಆತ ಏನಾಗಿರುವನು ಎಂಬುದನ್ನು ನೋಡಿ ಅನಂತರ ಅವನು ಹೇಳುವುದನ್ನು ಕೇಳಬೇಕು. ಅವನು ಅತ್ಯಂತ ಪರಿಶುದ್ಧನಾಗಿರಬೇಕು. ಆಗಮಾತ್ರ ಅವನು ಹೇಳುವ ಮಾತಿಗೆ ಬೆಲೆ. ಆಗಮಾತ್ರ ಅವನು ಇತರರಿಗೆ ಆಧ್ಯಾತ್ಮಿಕತೆಯನ್ನು ಅನುಗ್ರಹಿಸುವವನು. ಆತನಲ್ಲಿಯೇ ಆಧ್ಯಾತ್ಮಿಕಶಕ್ತಿ ಇಲ್ಲದೆ ಇದ್ದರೆ ಇತರರಿಗೆ ಅವನು ಏನನ್ನು ರವಾನಿಸಬಲ್ಲ? ಗುರುವಿನ ಚಿತ್ತದಲ್ಲಿ ಸ್ಪುತ್ಯಾರ್ಹ ಆಧ್ಯಾತ್ಮಿಕಶಕ್ತಿತರಂಗ ಇರಬೇಕು. ಆಗಮಾತ್ರ ಶಿಷ್ಯನಿಗೆ ಸಹಾನುಭೂತಿಯಿಂದ ದಾನಮಾಡಬಹುದು. ಗುರುವಿನ ಕೆಲಸ ಶಿಷ್ಯನಿಗೆ ನಿಜವಾಗಿ ಏನನ್ನೊ ದಾನಮಾಡುವುದಾಗಿದೆ. ಶಿಷ್ಯನಲ್ಲಿರುವ ಪಾಂಡಿತ್ಯ ಅಥವಾ ಮತ್ತಾವುದಾದರೂ ಸ್ವಭಾವವನ್ನು ಜಾಗ್ರತಗೊಳಿಸುವುದಲ್ಲ. ಸತ್ಯವಾದ ಜೀವನ ವಿಕಾಸಕ್ಕೆ ಸಹಕಾರಿಯಾದ ಯಾವುದೊ ಒಂದು ಶಕ್ತಿಯ ಅಂಶವು ಗುರುವಿನಿಂದ ಶಿಷ್ಯನಿಗೆ ಹೋಗುವುದು. ಆದಕಾರಣವೆ ಗುರು ಪರಿಶುದ್ಧನಾಗಿರಬೇಕು.

ಮೂರನೆ ಲಕ್ಷಣವೆ ಉದ್ದೇಶಕ್ಕೆ ಸಂಬಂಧಪಟ್ಟಿರುವುದು. ಗುರು ದ್ರವ್ಯ ಕೀರ್ತಿ ಯಶಸ್ಸು ಮುಂತಾದುವನ್ನು ಗಳಿಸಬೇಕೆಂಬ ಯಾವ ಸ್ವಾರ್ಥ ಉದ್ದೇಶದಿಂದಲೂ ಪ್ರೇರಿತನಾಗಿರಬಾರದು. ಆತನ ಬೋಧನೆ ಕೇವಲ ಪ್ರೇಮದಿಂದ ಪ್ರೇರಿತವಾಗಿರಬೇಕು, ಇಡೀ ಮಾನವಕೋಟಿಗೆ ಇರುವ ಪ್ರೇಮದಿಂದ ಪ್ರೇರಿತವಾಗಿರಬೇಕು. ಆಧ್ಯಾತ್ಮಶಕ್ತಿಯನ್ನು ಮತ್ತೊಂದು ಜೀವಿಗೆ ಅನುಗ್ರಹಿಸಬೇಕಾಕದರೆ ಪ್ರೇಮದ ಮೂಲಕ ಮಾತ್ರ ಸಾಧ್ಯ. ಲಾಭ ಕೀರ್ತಿ ಮುಂತಾದ ಯಾವ ಸ್ವಾರ್ಥ ಆಸೆ ಯಾದರೂ ತಕ್ಷಣ ಪ್ರೇಮವನ್ನು ನಾಶಮಾಡುವುದು. ಪ್ರೇಮಮಯ ಭಗವಂತ. ಯಾರು ದೇವರನ್ನು ಪ್ರೇಮಮಯನೆಂದು ಅರಿತಿರುವರೊ ಅವರು ಮಾತ್ರ ಭಕ್ತಿಯ ವಿಚಾರವಾಗಿ ದೇವರ ವಿಚಾರವಾಗಿ ಮತ್ತೊಬ್ಬರಿಗೆ ಬೋಧಿಸಲು ಯೋಗ್ಯರು.

ನಿಮ್ಮ ಗುರುವಿನಲ್ಲಿ ಇಂತಹ ಲಕ್ಷಣಗಳಿಲ್ಲ ಕಂಡುಬಂದರೆ ನಿಮಗೆ ಅಂಜಿಕೆ ಇಲ್ಲ. ಇಲ್ಲದಿದ್ದರೆ ಅವನ ಬುದ್ಧಿವಾದವನ್ನು ಕೇಳುವುದು ಕ್ಷೇಮಕರವಲ್ಲ. ಅವನು ನಿಮಗೆ ಸದ್ಗುಣವನ್ನು ಅನುಗ್ರಹಿಸುವುದು ಅಸಾಧ್ಯವಾದರೆ ದುರ್ಗುಣವನ್ನು ನೀಡುವ ಅಪಾಯವಿದೆ. ಇಂತಹ ಅಪಾಯದಿಂದ ನಾವು ಹೇಗಾದರೂ ಪಾರಾಗಬೇಕು. "ಶ್ರೋತ್ರಿಯೊ ಅವೃಜಿನೊ ಅಕಾಮುಹತೊ ಯೊ ಬ್ರಹ್ಮವಿತ್ತಮಃ" ಯಾರು ಶಾಸ್ತ್ರ ಜ್ಞಾನಿಯೊ, ಪಾಪವಿದೂರನೊ, ಕಾಮರಹಿತನಾಗಿರುವನೊ, ಅವನೆ ಬ್ರಹ್ಮ ಜ್ಞಾನಿಗಳಲ್ಲಿ ಶ್ರೇಷ್ಠ. ಇಂತಹವನೆ ನಿಜವಾದ ಗುರು.

ನಾವು ಆಧ್ಯಾತ್ಮಿಕತೆಯನ್ನು ಪ್ರೀತಿಸುವುದಾಗಲಿ ಮೆಚ್ಚುವುದಾಗಲಿ ಅದನ್ನು ಅನುಷ್ಠಾನಕ್ಕೆ ತರುವುದನ್ನಾಗಲಿ ಯಾರಿಂದ ಎಂದರೆ ಅವರಿಂದ ಎಲ್ಲಿ ಅಂದರೆ ಅಲ್ಲಿ ಕಲಿಯಲಾಗುವುದಿಲ್ಲ ಎಂಬುದನ್ನು ಇದುವರೆವಿಗೂ ಹೇಳಿರುವುದರಿಂದ ತಿಳಿದಂತೆ ಆಯಿತು. "ಕಲ್ಲುಗಳಲ್ಲಿ ಧರ್ಮಬೋಧನೆಯನ್ನು, ಹರಿವ ಝರಿಯಲ್ಲಿ ಗ್ರಂಥವನ್ನು, ಎಲ್ಲದರಲ್ಲಿಯೂ ಸದ್ವಿಷಯಗಳನ್ನು" ನೋಡಬೇಕೆಂಬುದು ಕಾವ್ಯದೃಷ್ಟಿಯಿಂದ ಸುಂದರ ಅಲಂಕಾರಿಕ ಭಾವನೆಯಾಗಿರಬಹುದು. ಆದರೆ ಯಾರಲ್ಲಿ ಆಗಲೆ ಧಾರ್ಮಿಕಭಾವನೆ ಸುಪ್ತಾವಸ್ಥೆಯಲ್ಲಿ ಇಲ್ಲವೊ ಅಂಥವರಿಗೆ ಯಾರೂ ಎಳ್ಳಷ್ಟೂ ಆಧ್ಯಾತ್ಮಿಕತೆಯನ್ನು ಕೊಡಲಾರರು. ಯಾರಿಗೆ ಕಲ್ಲು ಝರಿ ಧರ್ಮಬೋಧನೆಯನ್ನು ಮಾಡಬಲ್ಲದು? ಯಾರಿಗೆ ಅಂತರಂಗದ ಹೃದಯಪದ್ಮ ಆಗಲೆ ವಿಕಸಿತವಾಗಿದೆ ಅವನಿಗೆ ಮಾತ್ರ. ಈ ಪದ್ಮವಿಕಸಿಸುವಂತೆ ಮಾಡುವ ಜ್ಯೋತಿ ಯಾವಾಗಲೂ ಶ್ರೇಷ್ಠ ಆಧ್ಯಾತ್ಮಿಕ ಗುರುವಿನಿಂದ ಮಾತ್ರ ಬರುವುದು. ಹೀಗೆ ಹೃದಯವಿಕಾಸವಾದಾಗ ಕಲ್ಲು ಝರಿ ಸೂರ್ಯ ಚಂದ್ರ ತಾರೆ ಅಥವಾ ನಮ್ಮ ದಿವ್ಯ ಪ್ರಪಂಚದಲ್ಲಿರುವ ಯಾವುದಾದರೂ ವಸ್ತುವಿನಿಂದ ಸಂದೇಶವನ್ನು ಸ್ವೀಕರಿಸಲು ಅಣಿಯಾಗುವುದು. ಆದರೆ ಯಾರ ಅಂತರಾತ್ಮ ಇನ್ನೂ ವಿಕಾಸವಾಗಿಲ್ಲವೊ ಅವರು ಕೇವಲ ಕಲ್ಲು ಮತ್ತು ಝರಿಯನ್ನು ನೋಡಬಲ್ಲರು. ಕುರುಡನೊಬ್ಬ ವಸ್ತುಪ್ರದರ್ಶನ ಶಾಲೆಗೆ ಹೋಗಬಹುದು. ಆದರೆ ಅವನು ಯಾವ ಪ್ರತಿಫಲವನ್ನೂ ಅದರಿಂದ ಪಡೆಯಲಾರ. ಮೊದಲು ಅವನ ಕಣ್ಣು ತೆರೆಯಬೇಕು. ಅನಂತರ ಮಾತ್ರ ಅವನು ಪ್ರದರ್ಶನಾಲಯದಲ್ಲಿರುವ ವಸ್ತುವಿನ ವಿಚಾರವನ್ನು ತಿಳಿಯಬಲ್ಲ.

ಜಿಜ್ಞಾಸುವಿನ ಕಣ್ಣು ತೆರೆಯುವಂತೆ ಮಾಡುವವನೆ ಗುರು. ಗುರು ಶಿಷ್ಯರ ಸಂಬಂಧ ಪೂರ್ವಿಕರಿಗೂ ಅವನ ವಂಶಜರಿಗೂ ಇರುವ ಸಂಬಂಧ ದಂತೆ. ಗುರುವಿನಮೇಲೆ ಶ್ರದ್ಧೆ ಭಕ್ತಿ ದೈನ್ಯತೆ ಗೌರವಗಳಿಲ್ಲದೆ ಇದ್ದರೆ ಯಾವ ಆಧ್ಯಾತ್ಮಿಕ ವಿಕಾಸವೂ ಶಿಷ್ಯನಲ್ಲಿ ಆಗುವುದಿಲ್ಲ. ಎಲ್ಲಿ ಗುರು ಶಿಷ್ಯರಲ್ಲಿ ಇಂತಹ ಸಂಬಂಧವಿದೆಯೊ ಅಲ್ಲಿ ಮಾತ್ರ ಪ್ರಚಂಡ ಆಧ್ಯಾತ್ಮಿಕ ಜೀವಿಗಳು ವಿಕಾಸವಾಗುವರು. ಯಾವ ದೇಶದಲ್ಲಿ ಇಂಥ ಪವಿತ್ರ ಸಂಬಂಧವನ್ನು ರಕ್ಷಿಸುವುದನ್ನು ಮರೆತಿರುವರೊ ಅಲ್ಲಿ ಗುರು ಕೇವಲ ಉಪನ್ಯಾಸಕನಾಗಿರುವನು. ಗುರು ತನ್ನ ಬೋಧನೆಗೆ ಐದು ಡಾಲರನ್ನು ನಿರೀಕ್ಷಿಸುವನು, ಶಿಷ್ಯ ಗುರುವಿನಿಂದ ಬೀಳುವ ಕೆಲವು ವಿಷಯಗಳನ್ನು ಸಂಗ್ರಹಿಸುವುದರಲ್ಲಿ ನಿರತನಾಗಿರುವನು. ಇದಾದಮೇಲೆ ಇಬ್ಬರೂ ತಮ್ಮ ತಮ್ಮ ದಾರಿಯನ್ನು ಹಿಡಿದುಕೊಂಡು ಹೋಗುವರು. ಇಂತಹ ಸ್ಥಿತಿ ಯಲ್ಲಿ ಆಧ್ಯಾತ್ಮಿಕತೆ ಲವಲೇಶವಾದರೂ ಇರುವುದು ಅಪರೂಪ. ಅದನ್ನು ಅನುಗ್ರಹಿಸುವವನೂ ಇರುವುದಿಲ್ಲ, ಅದನ್ನು ಸ್ವೀಕರಿಸುವುದಕ್ಕೂ ಯಾರೂ ಇರುವುದಿಲ್ಲ. ಇಂತಹ ಜನರಿಗೆ ಧರ್ಮ ಒಂದು ವ್ಯಾಪಾರವಾಗುವುದು. ಹಣ ಕೊಟ್ಟು ಇದನ್ನು ಪಡೆಯಬಹುದು ಎಂದು ಅವರು ಭಾವಿಸುವರು. ದುರ್ದೈವ ವಶದಿಂದ ಅದು ಹಾಗೆ ಆಗಲಾರದು.

ಶ್ರೇಷ್ಠ ಜ್ಞಾನವೂ ಶ್ರೇಷ್ಠ ಧರ್ಮವೂ ಆಗಿರುವ ಆಧ್ಯಾತ್ಮಿಕತೆಯನ್ನು ನಾವು ಕೊಂಡುಕೊಳ್ಳಲಾರೆವು; ಅದನ್ನು ಗ್ರಂಥಗಳಿಂದಲೂ ಗ್ರಹಿಸ ಲಾರೆವು. ಪ್ರಪಂಚದ ಮೂಲೆ ಮೂಲೆಯನ್ನು ಹುಡುಕಬಹುದು, ಹಿಮಾಲಯಾ, ಆಲ್ಪ್ಸ, ಕಾಕಸಸ್ ಪರ್ವತಶ್ರೇಣಿಯನ್ನೆಲ್ಲಾ ಶೋಧಿಸ ಬಹುದು, ಸಮುದ್ರದಆಳದಲ್ಲಿ ತಡಕಬಹುದು, ಟಿಬೆಟ್ ಮತ್ತು ಗೋಬಿಮರುಭೂಮಿಯಲ್ಲೆಲ್ಲಾ ಹುಡುಕಾಡಬಹುದು; ನಿಮ್ಮ ಹೃದಯ ಸ್ವೀಕರಿಸುವುದಕ್ಕೆ ಅಣಿಯಾಗಿ ಗುರು ಬರುವವರೆಗೆ ಅದು ನಿಮಗೆ ದೊರಕ ಲಾರದು. ದೇವನಿಂದ ಕಳಿಸಲ್ಪಟ್ಟ ಗುರು ಬಂದಾಗ ಮಗುವಿನಂತೆ ಸರಳ ಶ್ರದ್ಧೆ ಭಕ್ತಿಯಿಂದ ಅವನನ್ನು ಸೇವಿಸಿ, ಅವನ ಪ್ರಭಾವಕ್ಕೆ ನಿಮ್ಮ ಹೃದಯ ವನ್ನೆಲ್ಲ ಯಾವ ಸಂಕೋಚವಿಲ್ಲದೆ ಸಮರ್ಪಿಸಿ. ಅವನಲ್ಲಿ ಭಗವಂತ ಆವಿರ್ಭವಿಸಿರುವುದನ್ನು ನೋಡಿ. ಯಾರು ಹೀಗೆ ಪ್ರೀತಿ ಮತ್ತು ಗೌರವ ದಿಂದ ಪ್ರೇರಿತರಾಗಿ ಸತ್ಯವನ್ನು ಅರಸಲು ಬರುವರೊ ಅವರಿಗೆ ಮಾತ್ರ

ಸತ್ಯನಾರಾಯಣನು, ಸತ್ಯಶಿವಸೌಂದರ್ಯದ ಅತಿ ಅದ್ಭುತ ವಿಷಯಗಳನ್ನು ಅರ್ಥವಾಗುವಂತೆ ಮಾಡುವನು.

ಆವತಾರಿಕ ಗುರು ಮತ್ತು ಅವತಾರ

ಎಲ್ಲಿ ಅವನ ಪಾವನ ನಾಮವನ್ನು ಉಚ್ಚಾರಮಾಡಿದರೂ ಅದು ಪವಿತ್ರಸ್ಥಳವಾಗುವುದು. ಅವನ ನಾಮವನ್ನು ಉಚ್ಚಾರಮಾಡುವ ಮನುಷ್ಯ ಎಷ್ಟು ಮಹಾಮಹಿಮನಾಗಿರಬೇಕು! ಯಾರ ಮೂಲಕ ನಮಗೆ ಆಧ್ಯಾತ್ಮಿಕ ವಿಷಯಗಳು ದೊರಕುವುದೊ ಅವರ ಸಮೀಪಕ್ಕೆ ನಾವು ಎಷ್ಟು ಭಯ ಭಕ್ತಿಯಿಂದ ಹೋಗಬೇಕು! ಇಂತಹ ಪರಮ ಆಧ್ಯಾತ್ಮಿಕ ಗುರುಗಳು ಪ್ರಪಂಚದಲ್ಲಿ ಬಹಳ ಅಪರೂಪ. ಆದರೆ ಪ್ರಪಂಚದಲ್ಲಿ ಇಲ್ಲದೆ ಇಲ್ಲ. ಇಂತಹ ಆಹೇತುಕ ಕೃಪಾಸಿಂಧುಗಳು ಜಗದ ಶ್ರೇಷ್ಠತಮ ವ್ಯಕ್ತಿಗಳು. "ಗುರುವೇ ನಾನು ಎಂದು ಅರಿ" ಎನ್ನುವನು ಶ್ರೀಕೃಷ್ಣ ಗೀತೆಯಲ್ಲಿ. ಪ್ರಪಂಚದಿಂದ ಎಂದು ಇಂಥಾ ವ್ಯಕ್ತಿಗಳು ಸಂಪೂರ್ಣ ಮಾಯವಾಗುವರೊ ಆಗ ಪ್ರಪಂಚ ಘೋರನರಕವಾಗುವುದು. ಸರ್ವನಾಶದಕಡೆಗೆ ಧಾವಿಸುವುದು.

ಸಾಧಾರಣ ಗುರುಗಳಿಂದ ಮೇಲಿನ ಮಟ್ಟದಲ್ಲಿರುವ ಭವ್ಯವ್ಯಕ್ತಿಗಳು ಒಂದು ಬಗೆಯ ಗುರುಗಳು. ಈಶ್ವರನ ಅವತಾರಗಳು ಅವರು. ಅವರು ಮತ್ತೊಂದು ಜೀವಿಗೆ ಆಧ್ಯಾತ್ಮಿಕಕೆಯನ್ನು ಕೇವಲ ಸ್ಪರ್ಶಮಾತ್ರದಿಂದ ಇಚ್ಛಾಮಾತ್ರದಿಂದ ಅನುಗ್ರಹಿಸಬಲ್ಲರು. ಅವರಾಣತಿಯಂತೆ ಕ್ಷಣ ಒಂದರಲ್ಲಿ ಮಹಾಪಾಪಿಗಳು ದುರಾಚಾರಿಗಳು ಸತ್ಪುರುಷರಾಗಬಲ್ಲರು. ಅವರೇ ಗುರುಗಳ ಗುರುಗಳು. ಮಾನವನ ಮೂಲಕ ವ್ಯಕ್ತವಾಗುತ್ತಿರುವ ಭಗವಂತನ ಆವಿರ್ಭಾವನೆ. ಇವರ ಮೂಲಕ ಅಲ್ಲದೆ ನಾವು ದೇವರನ್ನು ಅನ್ಯಥಾ ನೋಡಲಾರೆವು. ಅವರನ್ನು ಪೂಜಿಸದೆ ವಿಧಿಯಿಲ್ಲ. ನಾವು ನಿಜವಾಗಿ ಗೌರವ ಸಲ್ಲಿಸಬೇಕಾದ ವ್ಯಕ್ತಿಗಳೇ ಅವರು.

ಯಾರೂ ದೇವರನ್ನು ಮಾನವನ ಮೂಲಕ ವ್ಯಕ್ತವಾಗುವ ಆವಿರ್ಭಾವನೆ ವಿನಃ ನೋಡಲಾರರು. ನಾವು ಬೇರೆ ವಿಧವಾಗಿ ಅವನನ್ನು

ನೋಡಲು ಯತ್ನಿಸಿದರೆ ನಾವು ಬೇರೊಂದು ಹಾಸ್ಯಾಸ್ಪದ ವಿಕಾರ ರೂಪನ್ನು ಕಲ್ಪಿಸಿಕೊಳ್ಳುವೆವು. ಅದು ಮೂಲಕ್ಕಿಂತ ಮೇಲಲ್ಲ. ಒಂದು ಕಥೆ ಇದೆ. ಅಲ್ಲಿ ಒಬ್ಬಮೂಢನಿಗೆ ಶಿವನ ವಿಗ್ರಹ ಮಾಡೆಂದು ಹೇಳುವರು. ಅವನು ಬಹಳ ದಿನ ಶ್ರಮಪಟ್ಟಮೇಲೆ ಒಂದು ಕೋತಿಯ ವಿಗ್ರಹವನ್ನು ಮಾಡಿದನು. ಭಗವಂತನ ಕೇವಲ ಪೂರ್ಣಸ್ಥಿತಿಯನ್ನು ನಾವು ಎಂದು ಆಲೋಚಿಸುವುದಕ್ಕೆ ಪ್ರಯತ್ನಿಸಿದರೂ ನಿಸ್ಸಂದೇಹವಾಗಿ ದಾರುಣ ನಿರಾಶೆಯನ್ನು ಎದುರಿಸಬೇಕಾಗುವುದು. ನಾವು ಎಲ್ಲಿಯವರೆಗೆ ಮಾನವರಾಗಿರುವೆವೊ ಅಲ್ಲಿಯವರೆಗೆ ದೇವರನ್ನು ಮಾನವನಂತೆ ಅಲ್ಲದೆ ಅನ್ಯಥಾ ಭಾವಿಸಲು ಸಾಧ್ಯವೇ ಇಲ್ಲ. ನಾವು ನಮ್ಮ ಮಾನವ ಸ್ವಭಾವವನ್ನು ಮೀರಿ ಹೋಗಿ ದೇವರನ್ನು ದೇವರಂತೆ ತಿಳಿಯುವ ಸಮಯ ಒಂದು ಬರುವುದು. ಆದರೆ ನಾವು ಎಲ್ಲಿಯವರೆಗೆ ಮನುಷ್ಯರಾಗಿರುವೆವೊ ಅಲ್ಲಿಯವರೆಗೆ ದೇವರನ್ನು ಮನುಷ್ಯನಲ್ಲಿ ಮತ್ತು ಮನುಷ್ಯನಂತೆ ಮಾತ್ರ ನೋಡಲು ಸಾಧ್ಯ. ನೀವು ಎಷ್ಟುಬೇಕಾದರೂ ಮಾತನಾಡಿ, ಎಷ್ಟು ಬೇಕಾದರೂ ಪ್ರಯತ್ನಪಡಿ, ದೇವರನ್ನು ಮಾನವನಂತೆ ಅಲ್ಲದೆ ಅನ್ಯಥಾ ಭಾವಿಸಲಾರಿರಿ. ನೀವು ದೇವರಮೇಲೆ ಮತ್ತು ಪ್ರಪಂಚದಲ್ಲಿ ಇರುವ ವಸ್ತುಗಳ ಮೇಲೆಲ್ಲ ಪಾಂಡಿತ್ಯದಿಂದ ಕೂಡಿದ ಉಪನ್ಯಾಸಗಳನ್ನು ಕೊಡಬಹುದು. ದೊಡ್ಡ ವಿಚಾರವಂತರಾಗಿ ಮಾನವನಂತೆ ಇರುವ ದೇವರ ಅವತಾರವನ್ನೆಲ್ಲ ಹುರುಳಿಲ್ಲ ಎಂದು ಯುಕ್ತಿಪೂರಿತವಾಗಿ ಹಳಿಯಬಹುದು. ಆದರೆ ಅನುಷ್ಠಾನ ಸಾಧ್ಯವಾದ ವ್ಯವಹಾರ ಜ್ಞಾನಕ್ಕೆ ಕ್ಷಣಕಾಲ ಬರುವ. ಇಂತಹ ಅದ್ಭುತ ಪಾಂಡಿತ್ಯದ ಹಿಂದೆ ಇರುವುದೇನು? ಏನೂ ಇಲ್ಲ ಬರೀ ಸೊನ್ನೆ, ಹುರುಳಿಲ್ಲದ ನೊರೆ. ಮತ್ತೊಮ್ಮೆ ನೀವು ಅವತಾರಾರಾಧನೆಯನ್ನು ದೂರಿ ಚಮತ್ಕಾರವಾಗಿ ಮಾತನಾಡುತ್ತಿರುವವನನ್ನು ಕೇಳಿದಾಗ ಅವನನ್ನು ತನ್ನ ದೇವರ ಭಾವನೆ ಏನೆಂದು ಕೇಳಿ. ಸರ್ವಶಕ್ತ ಸರ್ವಜ್ಞ ಮುಂತಾದ ಪದಗಳಿಗೆ ಅವುಗಳ ಅಕ್ಷರ ಸಂಯೋಜನೆಗಿಂತ ಹೆಚ್ಚಾಗಿ ಏನಾದರೂ ಆತನಿಗೆ ತಿಳಿದಿದೆಯೆ ಪ್ರಶ್ನಿಸಿ. ಅವನಿಗೆ ನಿಜವಾಗಿ ಇದೇನೂ ಅರ್ಥವೇ ಆಗುವುದಿಲ್ಲ. ತನ್ನ ಮಾನವ ಸಹಜವಾದ ಭಾವನೆಗಿಂತ ಬೇರೆಯಾಗಿರುವ ಯಾವ ಅರ್ಥವನ್ನೂ ಅವನು ಕೊಡಲಾರ. ಒಂದು ಪುಸ್ತಕವನ್ನೂ ಓದದ ದಾರಿಹೋಕನಿಗಿಂತ ಇವನೇನೂ ಮೇಲಲ್ಲ ಈ ವಿಷಯದಲ್ಲಿ. ದಾರಿಹೋಕ ಹೇಗೊ ಮೌನವಾಗಿ

ರುವ, ಪ್ರಪಂಚದ ಶಾಂತಿಗೆ ಭಂಗತರುವುದಿಲ್ಲ. ಆದರೆ ಈ ದೊಡ್ಡ ಮಾತಾಳಿಯಾದರೊ ಜನರಿಗೆ ಬುದ್ಧಿ ಭ್ರಮಣೆ ಹುಟ್ಟಿಸುವನು, ಜನರಿಗೆ ದುಃಖವನ್ನು ತರುವನು. ಅಂತೂ ಕೊನೆಗೆ ಧರ್ಮ ಎಂದರೆ ಸಾಕ್ಷಾತ್ಕಾರ; ಮಾತಿಗೂ ಅನುಭವಕ್ಕೂ ಬಹಳ ಅಂತರವಿದೆ ಎಂಬುದನ್ನು ನಾವು ಅರಿಯಬೇಕು. ನಮ್ಮ ಹೃದಯಂತರಾಳದಲ್ಲಿ ನಾವು ಏನನ್ನು ಅನುಭವಿಸುವೆವೊ ಅದೇ ಸಾಕ್ಷಾತ್ಕಾರ. ಜನರಿಗೆ ಈ ವಿಷಯದಲ್ಲಿ ಇರುವಷ್ಟು ವ್ಯವಹಾರ ಜ್ಞಾನದ ಅಭಾವ ಮತ್ತೆಲ್ಲಿಯೂ ಇಲ್ಲ ಎನ್ನಬಹುದು.

ನಾವು ಈಗಿರುವ ಸ್ಥಿತಿಯಲ್ಲಿ ಬದ್ಧರಾಗಿರುವುದರಿಂದ, ಮಿತವಾಗಿರುವುದರಿಂದ, ದೇವರನ್ನು ಮಾನವನಂತೆ ನೋಡದೆ ವಿಧಿಯಿಲ್ಲ. ಎಮ್ಮೆ ದೇವರನ್ನು ಪೂಜಿಸಬೇಕಾದರೆ ತನ್ನ ಸ್ವಭಾವಕ್ಕೆ ಅನುಗುಣವಾಗಿ ದೇವರನ್ನು ದೊಡ್ಡ ಎಮ್ಮೆ ಎಂತಲೇ ಭಾವಿಸಬೇಕಾಗಿದೆ. ಮೀನು ದೇವರನ್ನು ಪೂಜಿಸಬೇಕಾದರೆ ದೇವರನ್ನು ದೊಡ್ಡ ಮೀನು ಎಂದು ಭಾವಿಸಲೇಬೇಕಾಗಿದೆ; ಮನುಷ್ಯ ದೇವರನ್ನು ಮನುಷ್ಯನೆಂತಲೇ ಭಾವಿಸಬೇಕಾಗಿದೆ. ಇಂತಹ ಹಲವು ಭಾವನೆಗಳು ಅಸ್ವಾಭಾವಿಕ ಮನೋಕಲ್ಪನೆಯ ಪರಿಣಾಮವಲ್ಲ. ಮನುಷ್ಯ ಎಮ್ಮೆ ಮೀನು ಇವೆಲ್ಲ ಬೇರೆ ಬೇರೆ ಪಾತ್ರೆಗಳಂತೆ. ಈ ಪಾತ್ರೆಗಳೆಲ್ಲಾ ಭಗವಂತನೆಂಬ ಸಾಗರಕ್ಕೆ ತಮ್ಮ ಸ್ವಭಾವ ಮತ್ತು ಯೋಗ್ಯತೆಗೆ ತಕ್ಕಂತೆ ನೀರನ್ನು ತರಲುಹೋಗುತ್ತವೆ. ಮನುಷ್ಯನಲ್ಲಿ ನೀರು ಮನುಷ್ಯನ ರೂಪವನ್ನು ಧರಿಸುವುದು. ಎಮ್ಮೆಯಲ್ಲಿ ಎಮ್ಮೆಯ ರೂಪವನ್ನು ಧರಿಸುವುದು. ಮೀನಿನಲ್ಲಿ ಮೀನಿನ ರೂಪವನ್ನು ಧರಿಸುವುದು. ಪ್ರತಿಯೊಂದು ಪಾತ್ರೆಯಲ್ಲಿರುವುದೂ ಭಗವಂತನೆಂಬ ಕಡಲಿನ ನೀರೆ. ಮನುಷ್ಯರು ಅವನನ್ನು ಮನುಷ್ಯನೆಂದು ಭಾವಿಸುವರು. ಪ್ರಾಣಿಗಳಿಗೆ ಭಗವಂತನ ಭಾವನೆ ಸಾಧ್ಯವಾದರೆ ಅವು ಅವನನ್ನು ಪ್ರಾಣಿಯಂತೆಯೇ ಭಾವಿಸಬೇಕಾಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಆದರ್ಶಕ್ಕೆ ತಕ್ಕಂತೆ ಭಾವಿಸಬೇಕಾಗಿದೆ. ಆದಕಾರಣ ನಾವು ದೇವರನ್ನು ಮಾನವನಂತೆ ನೋಡದೆ ವಿಧಿಯಿಲ್ಲ. ನಾವು ಹಾಗೆಯೇ ದೇವರನ್ನು ಪೂಜಿಸಲೂ ಬೇಕಾಗಿದೆ; ಬೇರೆ ಮಾರ್ಗವೇ ಇಲ್ಲ.

ಎರಡು ಬಗೆ ಮನುಷ್ಯರು ದೇವರನ್ನು ಮನುಷ್ಯನಂತೆ ಪೂಜಿಸುವುದಿಲ್ಲ. ಯಾವ ಧರ್ಮವೂ ಇಲ್ಲದ ಮಾನವ ಮೂರ್ಖನೊಬ್ಬ, ಮಾನವನ ಸಕಲದುರ್ಬಲತೆಗಳಿಂದಲೂ ಪಾರಾಗಿ ತನ್ನ ಸ್ವಭಾವವನ್ನೂ ಮೀರಿ

ಹೋಗಿರುವ ಪರಮಹಂಸನೊಬ್ಬ. ಪರಮಹಂಸನಿಗೆ ಪ್ರಪಂಚವೆಲ್ಲ ತನ್ನ ಆತ್ಮಮಯವಾಗಿದೆ. ಅವನು ಮಾತ್ರ ದೇವರನ್ನು ಅವನ ನೈಜಸ್ಥಿತಿಯಲ್ಲಿ ಆರಾಧಿಸಬಲ್ಲ. ಇಲ್ಲಿಯೂ ಕೂಡ ಎಲ್ಲೆಡೆಯಂತೆ ಎರಡು ಅತಿರೇಕಗಳೂ ಸಂಧಿಸುವುವು. ಅಜ್ಞಾನದ ಪರಮಾವಧಿಯಲ್ಲಿರುವವನು, ಜ್ಞಾನದ ಪರಮಾವಧಿಯಲ್ಲಿರುವವನು ಇಬ್ಬರಿಗೂ ಉಪಾಸನೆ ಬೇಕಿಲ್ಲ. ಮಾನವ ಮೂರ್ಖ ತನ್ನ ಅಜ್ಞಾನದ ದೆಸೆಯಿಂದ ಪೂಜಿಸುವುದಿಲ್ಲ. ಜೀವನ್ಮುಕ್ತ ದೇವರನ್ನು ತನ್ನಲ್ಲಿಯೇ ಅರಿತಿರುವುದರಿಂದ ಪೂಜಿಸುವುದಿಲ್ಲ. ಈ ಎರಡು ಅಂತರಗಳ ಮಧ್ಯೆ ಇರುವವರಲ್ಲಿ ಯಾರಾದರೂ ನಾವು ದೇವರನ್ನು ಮನುಷ್ಯನಂತೆ ಪೂಜಿಸುವುದಿಲ್ಲ ಎಂದರೆ ಅವನನ್ನು ಸ್ವಲ್ಪ ಎಚ್ಚರಿಕೆ ಯಿಂದ ಗಮನಿಸಿ. ಹೆಚ್ಚು ಕಟುವಾಕ್ಯವನ್ನು ಉಪಯೋಗಿಸಬೇಕಾಗಿಲ್ಲ; ಅವನೊಬ್ಬ ಜವಾಬ್ದಾರಿಯನ್ನು ಅರಿಯದ ಮಾತಾಳಿ. ಅವನ ಮಾತು ಅವಿವೇಕಿಗಳಿಗೆ ಮತ್ತು ಮೂಢರಿಗೆ.

ದೇವರಿಗೆ ಮಾನವನ ದುರ್ಬಲತೆ ಗೊತ್ತಿದೆ. ಮಾನವಕೋಟಿಯ ಹಿತಕ್ಕಾಗಿ ಅವನು ಮಾನವ ಜನ್ಮಧಾರಣೆಮಾಡುವನು. "ಎಂದು ಧರ್ಮಗ್ಲಾನಿಯಾಗುವುದೊ ಅಧರ್ಮವೃದ್ಧಿಯಾಗುವುದೊ ಆಗ ಧರ್ಮ ಸಂಸ್ಥಾಪನೆಗೆ ದುಷ್ಟನಿಗ್ರಹಕ್ಕೆ ಶಿಷ್ಟರಕ್ಷಣೆಗೆ ಪ್ರತಿಯೊಂದು ಯುಗ ದಲ್ಲಿಯೂ ನಾನು ಜನ್ಮವೆತ್ತುವೆನು." "ಮೂಢರು ನಾನು ಸರ್ವೇಶ್ವರ ಈ ಮಾನವ ದೇಹದಲ್ಲಿರುವೆನು ಎಂಬುದನ್ನು ಅರಿಯದೆ ಜರಿಯುವರು." ಶ್ರೀಕೃಷ್ಣ ಅವತಾರದಮೇಲೆ ಭಗವದ್ಗೀತೆಯಲ್ಲಿ ಹೀಗೆ ಹೇಳಿರುವನು. ಭಗವಾನ್ ಶ್ರೀರಾಮಕೃಷ್ಣರು ಹೀಗೆ ಹೇಳುವರು: "ಸಾಗರದಿಂದ ಪ್ರಚಂಡ ಅಲೆಯೊಂದು ಬಂತೆಂದರೆ ಹತ್ತಿರವಿರುವ ಸಣ್ಣಪುಟ್ಟ ಹಳ್ಳ ಕೊಳ್ಳಗಳೆಲ್ಲ ತಾವು ಪ್ರಯತ್ನಿಸದೆ ಇದ್ದರೂ ತುಂಬಿತುಳುಕಾಡುವುವು. ಇದರಂತೆಯೆ ಒಂದು ಅವತಾರ ಜನ್ಮವೆತ್ತಿದಾಗ ಪ್ರಚಂಡ ಆಧ್ಯಾತ್ಮಿಕ ತರಂಗ ಒಂದು ಜಗದಮೇಲೆ ಬೀಳುವುದು. ಸುತ್ತುಮುತ್ತಲೂ ಆಧ್ಯಾತ್ಮಿಕತೆ ಅನುರಣಿತವಾಗುತ್ತಿರುವುದನ್ನು ಜನ ನೋಡುವರು."

ಮಂತ್ರ : ಓಂಕಾರ : ಶಬ್ದ ಮತ್ತು ಜ್ಞಾನ

ನಾವೀಗ ಮಹಾಪುರುಷರು ಮತ್ತು ಅವತಾರಗಳನ್ನು ಕುರಿತು ಮಾತನಾಡುತ್ತಿಲ್ಲ. ಸಿದ್ಧಗುರುಗಳನ್ನು ಮಾತ್ರ ಕುರಿತು ಹೇಳುತ್ತಿರುವೆವು. ಅವರು ಧ್ಯಾನಯೋಗ್ಯ ಮಂತ್ರದ ಮೂಲಕ ಆಧ್ಯಾತ್ಮಿಕ ಬೀಜವನ್ನು ಶಿಷ್ಯರಿಗೆ ಅನುಗ್ರಹಿಸಬೇಕಾಗಿದೆ. ಈ ಮಂತ್ರಗಳೇನು ? ಹಿಂದೂದರ್ಶನದ ಪ್ರಕಾರ ಇಡೀ ಪ್ರಪಂಚ ನಾಮರೂಪಗಳಿಂದ ಆಗಿದೆ. ವ್ಯಷ್ಟಿಮಾನವನಲ್ಲಿ ಯಾವ ಚಿತ್ತವೃತ್ತಿಯೂ ನಾಮರೂಪಗಳ ಪ್ರಭಾವಕ್ಕೆ ಒಳಗಾಗದೆ ಇಲ್ಲ. ಇದೇ ಯೋಜನೆ ಮೇರೆ ಸಮಷ್ಟಿಬ್ರಹ್ಮಾಂಡವೂ ರಚನೆ ಆಗಿದ್ದರೆ ಅಲ್ಲಿಯೂ ನಾಮರೂಪಗಳೇ ಇರಬೇಕಾಗುವುದು. "ಒಂದು ಹಿಡಿ ಮೃತ್ಪಿಂಡವನ್ನು ತಿಳಿದರೆ ಮೃತ್ಪಿಂಡ ರಾಶಿಯನ್ನೆಲ್ಲಾ ತಿಳಿದಂತೆ." ವ್ಯಷ್ಟಿಯನ್ನು ತಿಳಿದುಕೊಂಡರೆ ಸಮಷ್ಟಿಯನ್ನೂ ತಿಳಿದುಕೊಂಡಂತೆ. ರೂಪ ಹೊರಗಿನ ಕರಟ. ಅದರೊಳಗಿರುವ ನಾಮ, ಅದರ ಅರ್ಥವೇ ತಿರುಳು ಸಾರ. ದೇಹವೆ ರೂಪು, ಮನಸ್ಸು ಅಥವಾ ಅಂತಃಕರಣವೆ ನಾಮ. ನಾಮ ಯಾವಾಗಲೂ ಶಬ್ದದೊಂದಿಗೆ ಸಂಬಂಧವನ್ನು ಪಡೆದಿದೆ. ಎಲ್ಲ ವಸ್ತುಗಳಲ್ಲಿರುವ ನಾಮಕ್ಕೂ ಶಬ್ದ ಶಕ್ತಿ ಇದೆ. ವ್ಯಷ್ಟಿಯಲ್ಲಿ ಏಳುವ ಚಿತ್ತವೃತ್ತಿಗಳು ಮೊದಲು ಶಬ್ದದಂತೆ ಮಾರ್ಪಾಡಾಗಿ ಅನಂತರ ಮತ್ತೂ ಸ್ಥೂಲವಾಗಿ ರೂಪಿನಂತೆ ತೋರುವುದು.

ಬ್ರಹ್ಮ ಹಿರಣ್ಯಗರ್ಭ ಅಥವಾ ಮಹತ್ ಆದಿಯಲ್ಲಿ ಮೊದಲು ನಾಮದಂತೆ ವ್ಯಕ್ತವಾಗಿ ಅನಂತರ ವಿಶ್ವದ ಆಕಾರ ಧರಿಸಿದನು. ವ್ಯಕ್ತವಾಗಿರುವ ಸ್ಥೂಲಪ್ರಪಂಚವೆಲ್ಲ ರೂಪ. ಆದರೆ ಹಿಂದೆ ಸನಾತನ ಅವ್ಯಕ್ತ ಸ್ಫೋಟ ಅಥವಾ ಅದನ್ನು ಹೊರಗೆಡಹುವ ಶಬ್ದಬ್ರಹ್ಮವಿದೆ (Logos). ನಿತ್ಯವಾದ ಸ್ಫೋಟವೆ ಎಲ್ಲ ನಾಮಗಳ ಮುಖ್ಯವಾದ ಅಂತ್ಯವಿಲ್ಲದ ಮೂಲವಸ್ತು. ಈ ಶಕ್ತಿಯ ಮೂಲಕವಾಗಿಯೆ ಈಶ್ವರನು ಪ್ರಪಂಚವನ್ನು ರಚಿಸುವನು. ಇಲ್ಲಿ ಮೊದಲು ಈಶ್ವರನೇ ಸ್ಫೋಟವಾಗಿ ಅನಂತರ ಮತ್ತೂ ಸ್ಥೂಲವಾದ ಇಂದ್ರಿಯಗಳಿಗೆ ಗೋಚರವಾದ ವಿಶ್ವದಂತೆ ಬದಲಾವಣೆ ಹೊಂದುವನು. ಸ್ಫೋಟಕ್ಕೆ ಒಂದೇ ಒಂದು ಶಬ್ದ ಚಿಹ್ನೆ ಇದೆ. ಅದೇ "ಓಂ". ಶಬ್ದವನ್ನು ಅದಕ್ಕೆ ಸಂಬಂಧಪಟ್ಟ ಭಾವದಿಂದ ನಾವು ಯಾವ ರೀತಿಯಾದರೂ ವಿಭಜಿಸಲು ಅಸಾಧ್ಯವೊ

ಇದರಂತೆಯೆ 'ಓಂ' ಮತ್ತು ಸ್ಫೋಟವನ್ನು ಕೂಡ ನಾವು ಬೇರ್ಪಡಿಸಲಾರೆವು. ಆದಕಾರಣ ಇಂಥ ಪವಿತ್ರತಮವಾದ ಮಂತ್ರದಿಂದ ಎಲ್ಲ ನಾಮರೂಪಗಳ ಜನನಿಯಂತಿರುವ ಸನಾತನವಾದ "ಓಂ" ಎಂಬ ಪದದಿಂದ ಈ ಸೃಷ್ಟಿಯೆಲ್ಲ ರಚಿತವಾಗಿದೆ ಎಂದು ಊಹಿಸಬೇಕಾಗಿದೆ. ಭಾವ ಮತ್ತು ಶಬ್ದವನ್ನು ನಾವು ಬೇರ್ಪಡಿಸಲು ಸಾಧ್ಯವಿಲ್ಲದೆ ಇದ್ದರೂ ಒಂದೇ ಭಾವವನ್ನು ಸೂಚಿಸುವುದಕ್ಕೆ ಹಲವು ಶಬ್ದಗಳು ಇರಬಹುದು. ಇದರಂತೆಯೆ ಯಾವುದರ ಮೂಲಕ ವಿಶ್ವ ವ್ಯಕ್ತವಾಗಿದೆಯೊ ಅದು "ಓಂ" ಎಂಬ ಶಬ್ದವಲ್ಲದೆ ಇರಬಹುದು ಎನ್ನಬಹುದು. ಈ ಆಕ್ಷೇಪಣೆಗೆ ನಮ್ಮ ಉತ್ತರ ಇದು : "ಓಂ" ಮಂತ್ರ ಪ್ರಪಂಚವನ್ನೆಲ್ಲಾ ವ್ಯಾಪಿಸುವಂತಹ ಶಬ್ದ ಚಿಹ್ನೆ. ಮತ್ತಾವುದೂ ಅದಕ್ಕೆ ಸಮಾನವಿಲ್ಲ. ಸ್ಫೋಟವೇ ಎಲ್ಲ ಪದಗಳ ಮೂಲವಸ್ತು. ಆದರೂ ಅದನ್ನು ಸ್ಪಷ್ಟವಾದ ಒಂದು ನಿರ್ದಿಷ್ಟ ಪದ ಎಂದು ಹೇಳಲಾರೆವು. ಒಂದು ಶಬ್ದವನ್ನು ಮತ್ತೊಂದು ಶಬ್ದದಿಂದ ಬೇರ್ಪಡಿಸುವ ವ್ಯತ್ಯಾಸಗಳನ್ನೆಲ್ಲಾ ತೆಗೆದುಹಾಕಿದರೆ ಕೊನೆಗೆ ಉಳಿಯುವುದೆ ಸ್ಫೋಟ. ಆದಕಾರಣವೆ ಈ ಸ್ಫೋಟವನ್ನು ನಾದಬ್ರಹ್ಮ ಎನ್ನುವುದು. ನಿರ್ದಿಷ್ಟವಾಗಿ ಇದು ಹೀಗೆ ಎಂದು ಹೇಳುವುದಕ್ಕೆ ಆಗದ ಈ ಸ್ಫೋಟಕ್ಕೆ ಯಾವ ಶಬ್ದವನ್ನು ವಾಚಕವಾಗಿ ಇಟ್ಟುಕೊಂಡರೂ ಅದರಲ್ಲಿ ಯಾವುದಾದರೊಂದು ವಿಶೇಷವನ್ನು ಕಲ್ಪಿಸಿದಂತೆ ಆಗುವುದರಿಂದ ಅದು ಸ್ಫೋಟವಲ್ಲದೆ ಹೋಗುವುದು. ಆದಕಾರಣ ಯಾವ ಶಬ್ದ ಆದಷ್ಟು ಕಡಿಮೆ ವಿಶೇಷವನ್ನು ಕಲ್ಪಿಸುವುದೊ ಮತ್ತು ಅದರ ಸ್ವರೂಪವನ್ನು ಆದಷ್ಟು ಮಟ್ಟಿಗೆ ಕುರುಹಿಟ್ಟು ತಿಳಿಸುವುದೊ ಅದೇ ಈ ಸ್ಫೋಟಕ್ಕೆ ಉತ್ತಮವಾಚಕವೆಂದು ಹೇಳಬೇಕಾಯಿತು. ಇದೇ ಓಂಕಾರ. ಓಂಕಾರವೊಂದೇ ಇದು. "ಅ, ಉ, ಮ," ಎಂಬ ಅಕ್ಷರವನ್ನು ನಾವು ಒಟ್ಟಿಗೆ ಓಂಕಾರದಂತೆ ಉಚ್ಚಾರಮಾಡಿದರೆ ಇದೇ ಸಾಧ್ಯವಾದ ಎಲ್ಲ ಶಬ್ದಗಳಿಗೂ ಚಿಹ್ನೆಯಾಯಿತು. 'ಅ' ಕಾರದಲ್ಲಿ ಎಲ್ಲಕ್ಕಿಂತ ಕಡಿಮೆ ವಿಶೇಷಣವಿದೆ. ಆದಕಾರಣವೆ ಶ್ರೀಕೃಷ್ಣ ಗೀತೆಯಲ್ಲಿ ಅಕ್ಷರಗಳಲ್ಲಿ 'ಅ' ಕಾರ ನಾನೆ ಎನ್ನುವನು. ಉಚ್ಚರಿಸುವುದಕ್ಕೆ ಸಾಧ್ಯವಾದ ಶಬ್ದವೆಲ್ಲಾ ನಾಲಿಗೆಯ ಆದಿಯಿಂದ ಹಿಡಿದು ತುಟಿಯ ಕೊನೆಯವರೆಗೆ ಇರುವ ಅಂತರದಲ್ಲಿ ಜನಿಸುತ್ತವೆ. 'ಅ'ಕಾರ ಗಂಟಲಿನ ಒಳಗಿನಿಂದ ಬರುವುದು, 'ಮ'ಕಾರ ಕೊನೆಗೆ ತುಟಿಯಮೂಲಕ ಬರುವುದು.

ನಾಲಿಗೆಯ ಆದಿಯಲ್ಲಿ ಪ್ರಾರಂಭವಾಗಿ ತುಟಿಯಲ್ಲಿ ಕೊನೆಗಾಣುವವರೆಗೆ ಮುಂದೆ ಸಾಗುವ ಶಬ್ದಸ್ಪಂದನವೇ ' ಉ 'ಕಾರ. ಸರಿಯಾಗಿ ಉಚ್ಚರಿಸಿದರೆ ಓಂಕಾರದಲ್ಲಿ ವರ್ಣೋತ್ಪತ್ತಿಯ ಸ್ವರವೆಲ್ಲ ಅಡಕವಾಗಿದೆ. ಮತ್ತಾವ ಶಬ್ದವೂ ಇದನ್ನು ಮಾಡಲಾರದು. ಆದಕಾರಣ ಇದೊಂದೆ ಸ್ಫೋಟಕ್ಕೆ ಅತಿಯೋಗ್ಯವಾದ ಚಿಹ್ನೆ. ಇದೇ ಓಂಕಾರದ ನಿಜವಾದ ಅರ್ಥ. ವಾಚಕ ವನ್ನು ವಾಚ್ಯದಿಂದ ನಾವು ಹೇಗೆ ಬೇರ್ಪಡಿಸಲಾರೆವೊ ಓಂಕಾರ ಮತ್ತು ಸ್ಫೋಟ ಕೂಡ ಒಂದೆ ಎಂದು ಭಾವಿಸಬೇಕು. ಸ್ಫೋಟ ವ್ಯಕ್ತಪ್ರಪಂಚದ ಸೂಕ್ಷ್ಮಸ್ಥಿತಿಯಾಗಿರುವುದರಿಂದ ಅದು ಈಶ್ವರನಿಗೆ ಸಮೀಪದಲ್ಲಿದೆ. ಇದೇ ಈಶ್ವರನ ಪ್ರಥಮ ಆವಿರ್ಭಾವನೆ. ಓಂಕಾರ ನಿಜವಾಗಿ ಈಶ್ವರನ ಚಿಹ್ನೆ ಯೆಂದೇ ಆಯಿತು. ಅಖಂಡ ಸಚ್ಚಿದಾನಂದ ಸ್ವರೂಪನಾಗಿಯೂ ಅದ್ವಿ ತೀಯನಾಗಿಯೂ ಇರುವ ಪರಬ್ರಹ್ಮನನ್ನು ಅಪೂರ್ಣ ಜೀವಿಗಳು, ಕೆಲವು ದೃಷ್ಟಿ ವಿಶೇಷಣಗಳ ಮೂಲಕ, ಕೆಲವು ಗುಣಗಳ ಮೂಲಕ ಮಾತ್ರ ಭಾವಿಸಲು ಸಾಧ್ಯವಾಗಿರುವಂತೆ, ಅವನ ದೇಹದಂತೆ ಇರುವ ಈ ವಿಶ್ವವನ್ನು ಕೂಡ ಪ್ರತಿಯೊಬ್ಬರೂ ತಮ್ಮ ಸ್ಥಿತಿಗನುಸಾರವಾಗಿಯೆ ಅರಿಯ ಬೇಕಾಗಿರುವುದು.

ಉಪಾಸಕನ ಮನಸ್ಥಿತಿ ಅದರಲ್ಲಿ ಪ್ರಧಾನವಾಗಿರುವ ಗುಣವಿಶೇಷ ಗಳನ್ನು ಅವಲಂಬಿಸಿದೆ. ಇದರ ಪರಿಣಾಮವಾಗಿಯೇ ಒಂದೇ ದೇವರು ಹಲವು ಬಗೆಯಲ್ಲಿ ಗೋಚರಿಸುತ್ತಾನೆ. ಒಂದೊಂದು ರೂಪಿನಲ್ಲಿ ಒಂದೊಂದು ಗುಣ ಪ್ರಧಾನವಾಗಿರುವಂತೆ ಕಾಣುತ್ತಾನೆ. ಇದರಂತೆಯೇ ಒಂದೇ ಪ್ರಪಂಚ ಹಲವರಿಗೆ ಹಲವುರೀತಿ ಕಾಣುತ್ತದೆ. ಇದರಂತೆಯೆ ಅತ್ಯಲ್ಪ ವಿಶೇಷಣಕ್ಕೆ ಒಳಗಾದ, ಸರ್ವಸಾಮಾನ್ಯವಾದ ಓಂಕಾರ ಚಿಹ್ನೆ ಕೂಡ. ಶಬ್ದ ಮತ್ತು ಅದರ ಅರ್ಥ ಬೇರ್ಪಡಿಸುವುದಕ್ಕೆ ಅಸಾಧ್ಯವೆಂಬಂತೆ ಇದೆ. ಇದೇ ನಿಯಮವೇ ಭಗವಂತ ಹಲವು ರೀತಿ ನಮಗೆ ತೋರುವುದು, ವಿಶ್ವ ಹಲವು ರೀತಿ ನಮಗೆ ತೋರುವುದು, ಇವುಗಳ ಹಿಂದುಗಡೆಯೂ ಇರು ವುದು. ಪ್ರತಿಯೊಂದಕ್ಕೂ ಅದನ್ನು ವ್ಯಕ್ತಪಡಿಸುವ ಒಂದು ವಾಚಕವೂ ಇದ್ದೇತೀರಬೇಕು. ಮಂತ್ರಗಳು ಋಷಿಗಳ ಗಾಢ ಧ್ಯಾನಾಂತರಾಳದಿಂದ ಹೊರಹೊಮ್ಮಿದುವು. ಸಾಧ್ಯವಾದಷ್ಟು ತೃಪ್ತಿಕರವಾಗಿ ಆಯಾ ದೃಷ್ಟಿ ಯಿಂದ ಭಗವಂತನನ್ನು ಮತ್ತು ಪ್ರಪಂಚವನ್ನು ವಿವರಿಸುವ ವಾಚಕ ಗಳಾಗಿವೆ ಅವು. ಓಂಕಾರ ಅಖಂಡ ಬ್ರಹ್ಮನನ್ನು ಹೇಳುವಂತೆ, ಇತರ

ಮಂತ್ರಗಳು ಖಂಡಬ್ರಹ್ಮಕ್ಕೆ ಸೂಚಕಗಳಾಗಿವೆ. ಇವೆಲ್ಲ ಭಗವಧ್ಯಾನಕ್ಕೆ ಮತ್ತು ಜ್ಞಾನಸಂಪಾದನೆಗೆ ಸಹಕಾರಿಗಳು.

ಪ್ರತೀಕ ಮತ್ತು ಪ್ರತಿಮಾಪೂಜೆ

ಇನ್ನು ಪ್ರತೀಕ ಮತ್ತು ಪ್ರತಿಮಾಪೂಜೆಯನ್ನು ವಿಚಾರಿಸೋಣ. ಪ್ರತೀಕ ಎಂದರೆ ಈಶ್ವರನ ಬದಲು ಅವನ ಸ್ಥಾನದಲ್ಲಿ ಇಟ್ಟು ಪೂಜಿಸುವ ಇತರ ವಸ್ತುಗಳು. ಇದು ಅವನಷ್ಟೆ ಹೆಚ್ಚು ಕಡಿಮೆ ಸತ್ಯ. ಪ್ರತಿಮಾ ಅಂದರೆ ವಿಗ್ರಹಾರಾಧನೆ. ಪ್ರತೀಕದ ಮೂಲಕ ಪೂಜೆ ಎಂದರೇನು? "ಯಾವುದು ಬ್ರಹ್ಮವಲ್ಲವೋ ಅದನ್ನು ಬ್ರಹ್ಮನೆಂದು ಭಾವಿಸಿ ಧ್ಯಾನಿಸುವುದು" ಎಂದು ಭಗವಾನ್ ರಾಮಾನುಜಾಚಾರ್ಯರು ಶ್ರೀ ಭಾಷ್ಯದಲ್ಲಿ ಹೇಳುವರು. "ಮನಸ್ಸನ್ನು ಬ್ರಹ್ಮವೆಂದು ಧ್ಯಾನಮಾಡು, ಇದು ಆಂತರ್ಯದಲ್ಲಿರುವುದು. ಆಕಾಶವೆ ಬ್ರಹ್ಮ. ಇದು ಅಧಿದೈವತೆಗೆ ಸಂಬಂಧಪಟ್ಟದ್ದು." ಮನಸ್ಸು ಆಂತರಿಕ ಪ್ರತೀಕ, ಆಕಾಶ ಬಾಹ್ಯ ಪ್ರತೀಕ. ಇವೆರಡನ್ನೂ ಈಶ್ವರನ ದೃಷ್ಟಿಯಿಂದ ಉಪಾಸನೆ ಮಾಡಬೇಕು. ಇದರಂತೆಯೆ, "ಸೂರ್ಯನೆ ಬ್ರಹ್ಮ—ಇದೇ ವಿಧಿ" "ಯಾರು ನಾಮವನ್ನು ಬ್ರಹ್ಮನೆಂದು ಆರಾಧಿಸುವರೊ ಮುಂತಾದ ಶ್ರುತಿವಚನಗಳಲ್ಲಿ ಪ್ರತೀಕೋಪಾಸನೆಯ ವಿಷಯದಲ್ಲಿ ಸಂದೇಹ ಉಂಟಾಗುವುದು" ಎಂದು ಶಂಕರಾಚಾರ್ಯರು ಹೇಳುವರು. 'ಪ್ರತೀಕ' ಎಂದರೆ ಕುರಿತು ಹೋಗುವುದು ಎಂಬುದು ಅಕ್ಷರಾರ್ಥ. ಪ್ರತೀಕೋಪಾಸನೆ ಎಂದರೆ ಒಂದೆರಡೊ ಅಥವಾ ಹೆಚ್ಚು ಸಾಮ್ಯಗಳಲ್ಲಿ ಬ್ರಹ್ಮನಂತೆ ಇದ್ದು ಆದರೆ ನಿಜವಾಗಿ ಬ್ರಹ್ಮನಲ್ಲದೆ ಇರುವುದನ್ನು ಬ್ರಹ್ಮನೆಂದು ಭಾವಿಸಿ ಉಪಾಸನೆ ಮಾಡುವುದು. ಶ್ರುತಿಯಲ್ಲಿ ಬರುವ ಪ್ರತೀಕಗಳಲ್ಲದೆ ಪುರಾಣ ಮತ್ತು ತಂತ್ರಶಾಸ್ತ್ರಗಳಲ್ಲಿ ಹಲವು ಪ್ರತೀಕಗಳಿವೆ. ಹಲವು ಬಗೆಯ ಪಿತೃಪೂಜೆ ಮತ್ತು ದೇವತಾರಾಧನೆಯೂ ಇದರಲ್ಲಿ ಬರುವುದು.

ಆದರೆ ಈಶ್ವರೋಪಾಸನೆ ಒಂದು ಮಾತ್ರ ಭಕ್ತಿ. ದೇವ ಪಿತೃ ಅಥವಾ ಮತ್ತಾವುದನ್ನಾದರೂ ಪೂಜಿಸುವುದು ಭಕ್ತಿಯಾಗಲಾರದು. ಹಲವು ಬಗೆಯ ದೇವದೇವತೆಗಳ ಪೂಜೆಯೆಲ್ಲ ಒಂದು ಬಗೆಯ ಕರ್ಮ.

ಇದರಿಂದ ಉಪಾಸಕನಿಗೆ ಸ್ವರ್ಗಲೋಕಗಳಲ್ಲಿ ಭೋಗ ದೊರೆತರೂ ಭಕ್ತಿ ಅಥವಾ ಮುಕ್ತಿ ದೊರಕಲಾರದು. ಆದಕಾರಣ ನಾವು ಒಂದು ವಿಷಯ ವನ್ನು ಚೆನ್ನಾಗಿ ನೆನಪಿನಲ್ಲಿಡಬೇಕು. ಪರಬ್ರಹ್ಮನೆಂಬ ಪರಮತಾತ್ತ್ವಿಕ ಭಾವನೆಯನ್ನು ಪ್ರತೀಕೋಪಾಸನೆಯ ನೆವದಿಂದ ಅದನ್ನು ಪ್ರತೀಕದಂತೆ ಮಾಡಿ ಕೊನೆಗೆ ಪ್ರತೀಕವೇ ಉಪಾಸಕನ ಅಂತರಾತ್ಮದಂತೆ ಹಲವುವೇಳೆ ಆಗುವ ಸಂಭವ ಉಂಟು. ಇದರಿಂದ ಉಪಾಸಕ ಸಂಪೂರ್ಣ ತಪ್ಪು ದಾರಿಯನ್ನು ಹಿಡಿಯುವನು. ಏಕೆಂದರೆ ಯಾವ ಪ್ರತೀಕವೂ ಉಪಾಸ ಕನ ಅಂತರಾತ್ಮನಾಗಲಾರದು. ಆದರೆ ಉಪಾಸನೆಗೆ ಬ್ರಹ್ಮನೇ ವಿಷಯ ನಾಗಿದ್ದು, ಪ್ರತೀಕವೆಂಬುದು ಅದನ್ನು ಸೂಚಿಸೇವ ಒಂದು ಸಂಕೇತ ವಾಗಿದ್ದರೆ, ಎಂದರೆ ಪ್ರತೀಕದ ಮೂಲಕ ಸರ್ವವ್ಯಾಪಿಯಾದ ಬ್ರಹ್ಮನನ್ನು ಉಪಾಸನೆ ಮಾಡುತ್ತಿದ್ದರೆ, ಪ್ರತೀಕವನ್ನು ಸರ್ವಕಾರಣ ಮೂಲವಾದ ಬ್ರಹ್ಮನೆಂದು ಭಾವಿಸಿದರೆ ಇಂಥಾ ಉಪಾಸನೆಯಿಂದ ಶ್ರೇಯಸ್ಸಾಗು ವುದು. ಉಪಾಸನಾ ಕ್ಷೇತ್ರದಲ್ಲಿ ಮಾನವಕೋಟಿ ಪ್ರಾರಂಭ ದೆಸೆಯನ್ನು ದಾಟಿ ಹೋಗುವವರೆಗೆ ಎಲ್ಲರಿಗೂ ಇದು ಅತ್ಯಾವಶ್ಯಕ. ಆದಕಾರಣ ದೇವತೆಗಳಾಗಲಿ ಅಥವಾ ಇನ್ನು ಯಾರನ್ನಾದರೂ ಆಗಲಿ ಕೇವಲ ಅವಕ್ಕೆ ಸಂಬಂಧಪಟ್ಟ (ಮಿತ) ದೃಷ್ಟಿಯಿಂದ ಮಾತ್ರ ಉಪಾಸನೆ ಮಾಡಿದರೆ ಅದೊಂದು ಬಗೆಯ ಕರ್ಮವಾಗುವುದು. ಇಂಥಾ ಉಪಾಸನಾರೂಪ ವಾದ ವಿದ್ಯೆಯಿಂದ ಇದಕ್ಕೆ ಸಂಬಂಧಪಟ್ಟ ಪ್ರತಿಫಲ ಮಾತ್ರ ದೊರಕು ತ್ತದೆ. ಆದರೆ ದೇವತೆಗಳು ಅಥವಾ ಇನ್ನು ಯಾರನ್ನಾದರೂ ಆಗಲಿ ಬ್ರಹ್ಮದೃಷ್ಟಿಯಿಂದ ಆರಾಧಿಸಿದರೆ ಈಶ್ವರೋಪಾಸನೆಯ ಪ್ರತಿಫಲವೇ ದೊರಕುತ್ತದೆ. ಹಲವು ವೇಳೆ ಶ್ರುತಿ ಮತ್ತು ಸ್ಮೃತಿಗಳಲ್ಲಿ ಯಾವು ದಾದರೂ ದೇವತೆಯನ್ನೊ ಋಷಿಯನ್ನೊ ಅಥವಾ ಮತ್ತಾವುದಾದರೂ ಒಂದು ಅಸಾಧಾರಣ ವ್ಯಕ್ತಿಯನ್ನೊ ಅವರ ಸ್ವಾಭಾವಿಕ ಸ್ಥಿತಿಯನ್ನು ಮರೆತು ಅದನ್ನು ಪರಬ್ರಹ್ಮ ಎಂದು ಉಪಾಸನೆ ಮಾಡುವಂತೆ ಹೇಳಿರು ವುದಕ್ಕೆ ಇದೇ ಕಾರಣ. ಪ್ರತಿಯೊಂದು ವಸ್ತುವಿನಿಂದಲೂ ನಾಮರೂಪ ಗಳನ್ನು ತೆಗೆದುಬಿಟ್ಟರೆ ಎಲ್ಲ ಬ್ರಹ್ಮಮಯವಲ್ಲವೆ ಎನ್ನುವನು ಅದ್ವೈತಿ. ಭಗವಂತನೇ ಎಲ್ಲರಲ್ಲಿಯೂ ಇರುವ ಅಂತರ್ಯಾಮಿಯಲ್ಲವೆ ಎನ್ನುವನು ವಿಶಿಷ್ಟಾದ್ವೈತಿ. "ಆದಿತ್ಯಾದಿ ದೇವತೆಗಳನ್ನು ಉಪಾಸನೆ ಮಾಡು ವಾಗಲೂ ಪರಮಾತ್ಮನೆ ಫಲವನ್ನು ಅನುಗ್ರಹಿಸುವನು. ಏಕೆಂದರೆ ಅವನೇ

ಸರ್ವಾಧ್ಯಕ್ಷ.” “ಈರೀತಿ ಬ್ರಹ್ಮ ಉಪಾಸನಾ ವಿಷಯವಾಗಿರುತ್ತದೆ. ವಿಗ್ರಹಗಳಲ್ಲಿ ವಿಷ್ಣುವೇ ಮುಂತಾದ ದೇವತೆಗಳನ್ನು ಆರೋಪಮಾಡು ವಂತೆ ಪ್ರತೀಕಗಳಲ್ಲಿ ಬ್ರಹ್ಮವನ್ನು ಆರೋಪಮಾಡಿರುವರು. (ಸೂತ್ರ. ಭಾಷ್ಯ)”.

ಪ್ರತೀಕಕ್ಕೆ ಅನ್ವಯಿಸುವ ಭಾವನೆಯೆ ಪ್ರತಿಮಾಗಳಿಗೂ ಅನ್ವಯಿ ಸುವುದು. ವಿಗ್ರಹ ಒಬ್ಬ ದೇವತೆ ಅಥವಾ ಮಹಾತ್ಮನದಾದರೆ ಅದಕ್ಕೆ ಮಾಡುವ ಪೂಜೆ ಭಕ್ತಿಯಿಂದ ಪ್ರೇರಿತವಾದುದಲ್ಲ, ಅದರಿಂದ ಮುಕ್ತಿ ಲಭಿಸುವುದಿಲ್ಲ. ಆದರೆ ಅದು ಸರ್ವೇಶ್ವರನಿಗೆ ಅನ್ವಯಿಸಿದರೆ ಭಕ್ತಿ ಮುಕ್ತಿ ಗಳೆರಡೂ ಪ್ರಾಪ್ತವಾಗುವುವು. ಪ್ರಪಂಚದ ಮುಖ್ಯ ಧರ್ಮಗಳಲ್ಲಿ ವೇದಾಂತ ಬೌದ್ಧ ಮತ್ತು ಕೆಲವು ಕ್ರೈಸ್ತ ಪಂಗಡಗಳು ವಿಗ್ರಹಗಳನ್ನು ಧಾರಾಳವಾಗಿ ಉಪಯೋಗಿಸುವರು. ಮಹಮ್ಮದೀಯರು ಮತ್ತು ಪ್ರಾಟೆ ಸ್ಟೆಂಟರೂ ಮಾತ್ರ ವಿಗ್ರಹಗಳನ್ನು ಅನುಮೋದಿಸುವುದಿಲ್ಲ. ಆದರೆ ವಿಗ್ರಹ ಗಳ ಸ್ಥಾನದಲ್ಲಿ ಮಹಮ್ಮದೀಯರು ತಮ್ಮ ಸಾಧು ಸಂತರ ಮತ್ತು ತಮ್ಮ ಧರ್ಮಕ್ಕಾಗಿ ಮಡಿದವರ ಗೋರಿಯನ್ನು ಪೂಜಿಸುತ್ತಾರೆ. ಬಾಹ್ಯ ಧಾರ್ಮಿಕ ಸಲಕರಣೆಗಳನ್ನೆಲ್ಲಾ ತ್ಯಜಿಸಿರುವ ಪ್ರಾಟೆಸ್ಟೆಂಟರಾದರೂ ಕ್ರಮೇಣ ಆಧ್ಯಾತ್ಮಿಕತೆಯಿಂದ ದೂರಸಾಗಿ ಹೋಗುತ್ತಿರುವರು. ಈಗ ಅವ ರಿಗೂ ಆಗಸ್ಟ್ ಕಾಂಟ್ಲೆ ಅನುಯಾಯಿಗಳಿಗೂ, ಕೇವಲ ನೀತಿಯೊಂದನ್ನೆ ಒತ್ತಿಹೇಳುವ ಅಜ್ಞಾನವಾದಿಗಳಿಗೂ ಯಾವ ವ್ಯತ್ಯಾಸವೂ ಇರುವಂತೆಯೇ ಕಾಣುವುದಿಲ್ಲ. ಕ್ರೈಸ್ತ ಮತ್ತು ಮಹಮ್ಮದೀಯರಲ್ಲಿ ಇನ್ನುಳಿದ ವಿಗ್ರಹಾರಾ ಧನೆಯೆಲ್ಲ ದೇವರನ್ನು ನೋಡುವುದಕ್ಕೆ ಸಹಾಯವಾಗದೆ ಪ್ರತೀಕ ಪ್ರತಿ ಮಾಗಳೇ ದೇವರಾಗಿವೆ. ಆದುದರಿಂದ ಹೆಚ್ಚು ಎಂದರೆ ಇದೊಂದು ಕರ್ಮವಾಯಿತು. ಇದರಿಂದ ಭಕ್ತಿ ಅಥವಾ ಮುಕ್ತಿ ಲಭಿಸದು. ಇಂಥ ಆರಾಧನೆಯಲ್ಲಿ ಭಕ್ತ ತೋರುವ ಗೌರವವೆಲ್ಲ ಈಶ್ವರನಲ್ಲದಿರುವ ವಸ್ತು ಗಳಿಗೆ. ಆದಕಾರಣ ವಿಗ್ರಹ, ಗೋರಿ, ದೇವಸ್ಥಾನ ಅಥವಾ ಸಮಾಧಿ ಮಂದಿರಗಳೇ ನಿಜವಾದ ಮೂರ್ತಿ ಪೂಜೆ. ಕೇವಲ ಮೂರ್ತಿ ಪೂಜೆಯೇ ಪಾಪವಲ್ಲ, ದೌರ್ಜನ್ಯವಲ್ಲ ಇದೊಂದು ಕರ್ಮ. ಆರಾಧಕರಿಗೆ ಇದರ ಪ್ರತಿಫಲ ದೊರಕಲೇ ಬೇಕು. ಅದು ಲಭಿಸಿಯೂ ಲಭಿಸುವುದು.

ಇಷ್ಟನಿಷ್ಠೆ

ನಂತರ ನಾವು ಗಮನಿಸಬೇಕಾದ ಭಾವನೆಯೆ ಇಷ್ಟನಿಷ್ಠೆ. ಅಂದರೆ ನಮ್ಮ ಇಷ್ಟದೇವತೆಯಲ್ಲಿ ನಿಷ್ಠಾವಂತನಾಗಿರುವುದು. ಭಕ್ತನಾಗಬೇಕೆಂದು ಬಯಸುವವನು "ಮತಗಳೆಷ್ಟೊ ಪಥಗಳಷ್ಟು" ಎಂಬುದನ್ನು ಅರಿತಿರಬೇಕು. ಹಲವು ಧರ್ಮದ ಉಪ ಪಂಗಡಗಳೆಲ್ಲ ಒಬ್ಬನೇ ಭಗವಂತನ ಮಹಿಮೆಯ ಆವಿರ್ಭಾವನೆ ಎಂಬುದನ್ನು ತಿಳಿದಿರಬೇಕು. "ಹಲವು ಹೆಸರಿನಿಂದ ನಿನ್ನನ್ನು ಕರೆಯುವರು. ಹಲವು ಹೆಸರಿನಿಂದ ನಿನ್ನನ್ನು ಪ್ರತ್ಯೇಕಿಸಿದಂತೆ ಮಾಡುವರು. ಇಂಥ ಪ್ರತಿಯೊಂದರಲ್ಲಿಯೂ ನಿನ್ನ ಸರ್ವಶಕ್ತಿ ನೆಲೆಸಿರುವುದು. ಅನಂತ ಹೆಸರಿನ ಮೂಲಕವಾಗಿ ನೀನು ಆರಾಧಕನೆಡೆಗೆ ಬರುವೆ. ಇಂಥ ಸಮಯದಲ್ಲೆ ನಿನ್ನನ್ನು ಪೂಜಿಸಬೇಕೆಂದು ನಿರ್ಬಂಧವಿಲ್ಲ, ನಿನ್ನಮೇಲೆ ಪರಮ ಪ್ರೇಮವಿದ್ದರೆ ಸಾಕು. ನಿನ್ನ ಬಳಿಗೆ ಬರುವುದು ಅಷ್ಟು ಸುಲಭ. ಆದರೂ ನಾನು ನಿನ್ನನ್ನು ಪ್ರೀತಿಸದೇ ಇರುವುದು ನನ್ನ ದೌರ್ಭಾಗ್ಯ". ಇದು ಮಾತ್ರವಲ್ಲ, ಹಲವು ಧರ್ಮಸ್ಥಾಪಕರಾದ ಭಗವದಂಶ ಸಂಭೂತರನ್ನು ಅಲ್ಲಗಳೆಯಕೂಡದು, ಅವರನ್ನು ದ್ವೇಷಿಸಕೂಡದು. ಇದರಲ್ಲಿ ಜೋಪಾನವಾಗಿರಬೇಕು. ಇತರರು ಅವರನ್ನು ದೂರಿದರೆ ಅದನ್ನು ಕೂಡ ಕೇಳಕೂಡದು. ಏಕಕಾಲದಲ್ಲೇ ಉದಾರವಾದ ಸಹಾನುಭೂತಿ ಮತ್ತು ಗುಣಗ್ರಹಣ ಶಕ್ತಿ ಜೊತೆಗೆ ಪ್ರೇಮಾಧಿಕ್ಯ ಇರುವ ವ್ಯಕ್ತಿಗಳು ಜಗದಲ್ಲಿ ಬಹಳ ಅಪರೂಪ. ಸಾಧಾರಣವಾಗಿ ಉದಾರವಾದ ಸಹಾನುಭೂತಿಯುಳ್ಳ ಪಂಗಡಗಳಲ್ಲಿ ಕ್ರಮೇಣ ಆಧ್ಯಾತ್ಮಿಕ ಭಾವನೆ ಕಡಿಮೆಯಾಗಿ ಧರ್ಮ ಇವರ ಕೈಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಯ ಒಂದು ಕೂಟವಾಗಿ ಪರಿಣಮಿಸುವುದನ್ನು ನೋಡುವೆವು. ಇದಕ್ಕೆ ಪ್ರತಿಯಾಗಿ ಕೆಲವು ಅತಿ ಸಂಕುಚಿತ ಮತಾನುಯಾಯಿಗಳಲ್ಲಿ ತಮ್ಮ ಮನಕ್ಕೆ ಸೇರಿದ ಆದರ್ಶಗಳ ಮೇಲೆ ಎಷ್ಟೇ ಭಕ್ತಿ ವಿಶ್ವಾಸತೋರಿದರೂ, ಅನ್ಯಧರ್ಮದ್ವೇಷಮಾಡಿ ಸ್ವಧರ್ಮ ಪ್ರೀತಿಯನ್ನು ಸಂಪಾದಿಸಿರುವರು. ದೇವರ ದಯೆಯಿಂದ ಪ್ರಪಂಚದಲ್ಲಿ ಭಕ್ತ್ಯಾಧಿಕ್ಯವಿರುವಷ್ಟೇ ಅಸೀಮ ಸಹಾನುಭೂತಿಯಿಂದ ಪ್ರೇರಿತರಾದ ಜನರೂ ಇದ್ದರೆ! ಆದರೆ ಜಗದಲ್ಲಿ ಇಂತಹವರು ಅತಿವಿರಳ. ಆದರೂ ಜನರಲ್ಲಿ ಪ್ರೇಮ ಉತ್ಕಟವಾಗಿರುವಂತೆ ವಿಶಾಲ

ವಾಗಿಯೂ ಆಗುವಂತೆ ಮಾಡುವುದು ಸಾಧ್ಯ ಎಂಬುದು ನಮಗೆಲ್ಲ ಗೊತ್ತಿದೆ. ಇದನ್ನು ಸಾಧಿಸುವುದಕ್ಕೆ ಮಾರ್ಗವೇ ಇಷ್ಟನಿಷ್ಠೆ. ಪ್ರತಿಯೊಂದು ಧರ್ಮದ ಪಂಗಡವೂ ತಮ್ಮ ಒಂದು ಆದರ್ಶವನ್ನು ಮಾನವ ಕೋಟಿಗೆ ಕೊಡುತ್ತದೆ. ಆದರೆ ಸನಾತನ ವೈದಿಕಧರ್ಮವಾದರೊ ಪರಂಜ್ಯೋತಿಯ ದೇವಾಲಯವನ್ನು ಪ್ರವೇಶಿಸುವುದಕ್ಕೆ ಹಲವು ದ್ವಾರಗಳನ್ನು ತೆರೆಯುವುದು. ಮಾನವನ ಮುಂದೆ ಅನಂತಾದರ್ಶಗಳನ್ನು ಇಡುತ್ತದೆ. ಅದರಲ್ಲಿ ಪ್ರತಿಯೊಂದರಲ್ಲಿಯೂ ಭಗವಂತ ಪ್ರಕಾಶಿಸುತ್ತಿರುವನು. ತೀವ್ರಕರುಣೆಯಿಂದ ಪ್ರೇರಿತರಾಗಿ, ಬಹಳ ಕಾಲದಿಂದಲೂ ಇಂದಿನವರೆಗೆ, ಭಗವಂತನ ಮಕ್ಕಳು ಅವನ ಅವತಾರಗಳು ಮಾನವ ಜೀವನವನ್ನು ಭೇದಿಸಿ ಮಾಡಿರುವ ಲೆಕ್ಕವಿಲ್ಲದಷ್ಟು ಮುಕ್ತಿಮಾರ್ಗವನ್ನು ಸ್ತ್ರೀಪುರುಷರಾದ ಮುಮುಕ್ಷುಗಳಿಗೆ ತೋರುವರು. ಈಗಿರುವ ಮುಂದೆ ಬರುವವರೆಲ್ಲ ಮಾಯಾಪಾಶದಿಂದ ಬಿಡುಗಡೆ ಹೊಂದಿ ಸಂಪೂರ್ಣ ಸ್ವಾತಂತ್ರ್ಯದಿಂದಲೂ ಆನಂದದಿಂದಲೂ ಕೂಡಿಕೊಂಡಿರಲಿ ಎಂಬ ಉದ್ದೇಶದಿಂದ, ಸತ್ಯದ ತೌರೂರು ಚಿದಾನಂದ ಸಾಗರವೂ ಆದ ಪರಮಾತ್ಮನ ಬಳಿಗೆ ಸಂತೋಷದಿಂದ ಸ್ವಾಗತಿಸುವುದಕ್ಕೆ ಚಾಚಿದ ಕರದಿಂದ ನಿಂತಿರುವರು.

ಮುಕ್ತಿಗೊಯ್ಯುವ ಹಲವು ಮಾರ್ಗಗಳಲ್ಲಿ ಯಾವುದೊಂದನ್ನೂ ದ್ವೇಷಿಸಕೂಡದೆಂಬ ಕಟ್ಟಪ್ಪಣೆಯನ್ನು ಭಕ್ತಿಯೋಗ ಕೊಡುವುದು. ಆದರೂ ಸಸಿ ಮರವಾಗಿ ಬೆಳೆಯುವತನಕ ಅದರ ರಕ್ಷಣೆಗೆ ಒಂದು ಬೇಲಿ ಆವಶ್ಯಕ. ಧ್ಯೇಯಗಳನ್ನು ಪುನಃ ಪುನಃ ಬದಲಾಯಿಸುತ್ತಿದ್ದರೆ ಆಧ್ಯಾತ್ಮಿಕ ಸಸಿ ಒಣಗಿ ಹೋಗುವುದು. ಧಾರ್ಮಿಕ ಔದಾರ್ಯತೆ ಎಂಬ ಹೆಸರಿನಲ್ಲಿ ಅನೇಕ ಜನ ತಮ್ಮ ಮನಸ್ಸಿನ ಕುತೂಹಲವನ್ನು ಬಗೆಬಗೆಯ ಆದರ್ಶಗಳಿಂದ ತೃಪ್ತಿಪಡಿಸಿಕೊಳ್ಳುತ್ತಿರಬಹುದು. ಅವರಿಗೆ ಹೊಸ ಹೊಸ ವಿಷಯವನ್ನು ಕೇಳಬೇಕೆಂಬುದು ಒಂದು ರೋಗವಾಗಿ ಪರಿಣಮಿಸುವುದು. ಅದೊಂದು ಬಗೆಯ ಧರ್ಮಮದ್ಯದ ಚಟವಾಗಿ ಬಿಡುವುದು. ತಾತ್ಕಾಲಿಕ ಉದ್ರೇಕಕ್ಕೋಸುಗ ಹೊಸ ಹೊಸ ವಿಷಯಗಳನ್ನು ಕೇಳಲಿಚ್ಛಿಸುವರು. ಒಂದರ ಉದ್ರೇಕದಿಂದ ಪಾರಾದರೆ ಮತ್ತೊಂದಕ್ಕೆ ಆಗಲೆ ಅಣಿಯಾಗಿರುವರು. ಧರ್ಮವೆಂದರೆ ಅವರಿಗೆ ಪಾಂಡಿತ್ಯವೆಂಬ ಅಫೀಮು ಸೇವನೆಯಂತೆ ಆಗುವುದು. ಅದು ಅಲ್ಲಿಗೇ ಕೊನೆಗಾಣುವುದು. ಶ್ರೀರಾಮ

ಕೃಷ್ಣರು ಹೀಗೆ ಹೇಳುತ್ತಿದ್ದರು: "ಮತ್ತೊಂದು ಬಗೆ ಮನುಷ್ಯರಿರುವರು. ಅವರು ಕಥೆಯಲ್ಲಿ ಬರುವ ಮುತ್ತಿನ ಚಿಪ್ಪಿನೊಳಗೆ ಇರುವ ಹುಳುವಿನಂತೆ. ಸ್ವಾತೀನಕ್ಷತ್ರ ಹುಟ್ಟಿದ ಕೂಡಲೆ ಆ ಹುಳು ಸಮುದ್ರದ ಅಡಿಯಿಂದ ಮೇಲೆ ಬಂದು ಬೀಳುವ ಒಂದು ಮಳೆಹನಿಗೆ ಕಾಯುತ್ತಿರುತ್ತದೆ. ಒಂದು ಮಳೆಹನಿ ಬೀಳುವವರೆಗೆ ಚಿಪ್ಪನ್ನು ತೆರೆದು ಸಮುದ್ರದಮೇಲೆ ತೇಲುತ್ತಿರುವುದು. ಬಿದ್ದೊಡನೆಯೇ ಕಡಲಡಿಗೆ ಹೋಗಿ ಅದೊಂದು ಸುಂದರ ಮುತ್ತಾಗುವವರೆಗೆ ಅದು ಅಲ್ಲೇ ಇರುವುದು.

ಇಷ್ಟನಿಷ್ಠದ ಸಿದ್ಧಾಂತವನ್ನು ಇಷ್ಟು ಚಮತ್ಕಾರವಾಗಿ ಮನಸ್ಸಿಗೆ ಹಿಡಿಯುವಂತೆ ಹೇಳಿರುವುದು ಅಪರೂಪ. ಸಾಧನೆ ಪ್ರಾರಂಭದಲ್ಲಿ ಇಷ್ಟ ದೇವರ ಮೇಲೆ ಏಕನಿಷ್ಠೆ ಅತಿಮುಖ್ಯ. ಆತ ರಾಮಾಯಣದಲ್ಲಿ ಬರುವ ಹನುಮಂತ "ಶ್ರೀನಾಥ ಮತ್ತು ಜಾನಕೀನಾಥ ಅಭೇದ ಎಂದು ಗೊತ್ತಿದ್ದರೂ ಕಮಲಲೋಚನನಾದ ರಾಮನೆ ನನ್ನ ಸರ್ವಸ್ವ" ಎಂದು ಹೇಳಬೇಕು. ಅಥವಾ ಸಾಧು ತುಳಸೀದಾಸ ಹೇಳುವಂತೆ "ಎಲ್ಲದರ ಸಾರವನ್ನೂ ಹೀರಿ, ಎಲ್ಲರೊಂದಿಗೂ ಬೆರೆಯಿರಿ, ಎಲ್ಲರ ಹೆಸರನ್ನೂ ಹೇಳಿ, ಎಲ್ಲರು ಹೇಳುವುದಕ್ಕೂ ಹೌದು ಹೌದು ಎನ್ನಿ. ಆದರೆ ಎಂದಿಗೂ ನಿಮ್ಮ ಇಷ್ಟವನ್ನು ಮರೆಯಬೇಡಿ." ಆಗ ಸಾಧಕ ಶ್ರದ್ಧಾವಂತನಾಗಿದ್ದರೆ, ಆ ಸಣ್ಣ ಬೀಜದಿಂದ ದೊಡ್ಡದೊಂದು ಅಲದ ಮರವಾಗಿ ದಿಕ್ಕುದಿಕ್ಕಿಗೆ ಬಿಳಲುಗಳನ್ನು ಚದುರಿಸಿ ನೆಲದಲ್ಲಿ ಬೇರುಗಳನ್ನು ಹರಡುತ್ತಾ ಧಾರ್ಮಿಕ ಕ್ಷೇತ್ರವನ್ನೆಲ್ಲಾ ವ್ಯಾಪಿಸುವವರೆಗೆ ಬೆಳೆಯುತ್ತಾ ಹೋಗುವುದು. ನಿಜವಾದ ಭಕ್ತ ಯಾರು ತನ್ನ ಇಷ್ಟದೈವವಾಗಿದ್ದಾನೊ ಆ ಪರಮಾತ್ಮನನ್ನೆ ಹಲವು ನಾಮರೂಪಗಳ ಮೂಲಕ ಇತರ ಧರ್ಮದವರು ತಮ್ಮ ತಮ್ಮ ಆದರ್ಶದಲ್ಲಿ ಆರಾಧಿಸುತ್ತಿರುವರೆಂಬುದನ್ನು ಅರಿಯುವನು.

ಮಾರ್ಗ ಮತ್ತು ಸಾಧನೆ

ಭಕ್ತಿ ಯೋಗದಲ್ಲಿ ಮಾರ್ಗ ಮತ್ತು ಸಾಧನೆ ವಿಚಾರವಾಗಿ ಶ್ರೀರಾಮಾನುಜಾಚಾರ್ಯರ ಶ್ರೀ ಭಾಷ್ಯದಲ್ಲಿ "ವಿವೇಕ ವಿಮೋಹ ಅಭ್ಯಾಸ ಕ್ರಿಯಾ ಕಲ್ಯಾಣ ಅನವಸಾರ ಅನುದ್ಧರ್ಶ ಇವುಗಳಿಂದ ಭಕ್ತಿ

ಲಭಿಸುವುದು" ಎಂದು ಬರೆದಿರುವರು. ವಿವೇಕ ಎಂದರೆ ರಾಮಾನುಜರ ಅಭಿಪ್ರಾಯದಲ್ಲಿ ಇತರ ವಸ್ತುಗಳ ವಿವೇಕದೊಂದಿಗೆ ಯಾವ ಆಹಾರವನ್ನು ತಿನ್ನಬೇಕು ಯಾವ ಆಹಾರವನ್ನು ತಿನ್ನಬಾರದು ಇವೂ ಸೇರಿವೆ. ಅವರ ದೃಷ್ಟಿಯಲ್ಲಿ ಆಹಾರ ಮೂರು ದೃಷ್ಟಿಯಿಂದ ಕೆಡುವುದು; (೧) ಕೆಲವು ಆಹಾರ ಸ್ವಭಾವತಃ ಅಶುದ್ಧ, ಉದಾ: ಈರುಳ್ಳಿ ಬೆಳ್ಳುಳ್ಳಿ ಇತ್ಯಾದಿ. (೨) ಆಶ್ರಯ, ದುಷ್ಟರ ಮತ್ತು ಪಾಪಿಗಳ ಸ್ಪರ್ಶದಿಂದ ಅಶುದ್ಧವಾಗುವುದು. (೩) ನಿಮಿತ್ತ, ಧೂಳು ಕೂದಲು ಮುಂತಾದ ಬಾಹ್ಯ ನಿಮಿತ್ತಗಳಿಂದ ಅಶುದ್ಧಿಯಾಗುವುದು. "ಆಹಾರ ಶುದ್ಧಿಯಾಗಿದ್ದರೆ ಸತ್ತ್ವ ಶುದ್ಧಿಯಾಗುವುದು, ಸತ್ತ್ವ ಶುದ್ಧಿಯಾದರೆ ಸ್ಮೃತಿ ಸ್ಥಿರವಾಗುವುದು" (ಛಾ. ಉ.) ಎಂದು ಶ್ರುತಿಯಲ್ಲಿ ಹೇಳಿದೆ. ಶ್ರೀರಾಮಾನುಜರು ಇದನ್ನು ಛಾಂದೋಗ್ಯ ಉಪನಿಷತ್ತಿನಿಂಥ ಉದಹರಿಸುವರು.

ಭಕ್ತರು ಯಾವಾಗಲೂ ಯಾವ ಆಹಾರವನ್ನು ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಕೆಲವು ಭಕ್ತಿ ಪಂಥಗಳು ಈ ಮಾರ್ಗದಲ್ಲಿ ಮಿತಿಮೀರಿ ಹೋಗಿದ್ದರೂ ಅವರ ಆಹಾರದ ಅಭಿಪ್ರಾಯದಲ್ಲಿ ಬಹಳ ಸತ್ಯಾಂಶವಿದೆಯೆಂದು ಭಾವಿಸಬೇಕಾಗಿದೆ. ಸಾಂಖ್ಯದರ್ಶನ ಪ್ರಕಾರ ಸತ್ತ್ವ ರಜಸ್ಸು ತಮಸ್ಸು ಈ ಮೂರು ಗುಣಗಳೂ ಸಮ ಪ್ರಮಾಣದಲ್ಲಿ ಸೇರಿದ್ದರೆ ಅದೇ ಪ್ರಕೃತಿಯಾಗುವುದು. ವಿಷಮ ಪ್ರಮಾಣದಲ್ಲಿ ಚಂಚಲವಾಗಿರುವಾಗ ಪ್ರಪಂಚವಾಗುವುದು. ಆದಕಾರಣ ಇವೆರಡೂ ಪ್ರಕೃತಿಯ ಗುಣ ಮತ್ತು ವಸ್ತುಗಳು. ಪ್ರತಿಯೊಂದು ಮಾನವಾಕಾರವಾಗಿರುವುದೂ ಈ ಗುಣಗಳಿಂದಲೆ. ಆಧ್ಯಾತ್ಮಿಕ ಜೀವನ ವಿಕಾಸಕ್ಕೆ ಬೇಕಾಗಿರುವುದು ಸತ್ತ್ವಗುಣ ಪ್ರಾಧಾನ್ಯ. ಆಹಾರದ ಮೂಲಕ ನಮ್ಮ ದೇಹಕ್ಕೆ ಹೋಗುವ ವಸ್ತುಗಳು ನಮ್ಮ ಮನಸ್ಸಿನ ರೀತಿಯನ್ನು ನಿರ್ಧರಿಸುವುದಕ್ಕೆ ಬಹಳ ಸಹಕಾರಿಯಾಗಿವೆ. ಆದಕಾರಣ ನಾವು ತಿನ್ನುವ ಆಹಾರವನ್ನು ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಇತರ ಕಡೆಗಳಂತೆ ಇಲ್ಲಿಯೂ ಅನುಯಾಯಿಗಳು ಆಹಾರದ ವಿಷಯದಲ್ಲಿ ಉದ್ರಿಕ್ತರಾಗಿ ಹೋಗುವುದಕ್ಕೆ ಆಯಾಧರ್ಮದ ಮೂಲಪುರುಷರಲ್ಲ ಕಾರಣ.

ಆಧ್ಯಾತ್ಮ ಜೀವನದ ದೃಷ್ಟಿಯಿಂದ ಆಹಾರದ ವಿಷಯದಲ್ಲಿ ವಿವೇಕ ಅಷ್ಟೇನೂ ಪ್ರಾಧಾನ್ಯವಲ್ಲ. ಮೇಲೆ ಹೇಳಿದ ವಿಷಯಕ್ಕೆ ಶಂಕರಾ

ಚಾರ್ಯರು ಭಾಷ್ಯ ಬರೆಯುವಾಗ ಸಾಧಾರಣವಾಗಿ ಆಹಾರ ಎಂದು ಭಾವಿಸಿರುವುದಕ್ಕೆ ಬೇರೆ ಅರ್ಥವನ್ನೇ ಕೊಡುವರು. ಇದು ಅವರ ಅಭಿಪ್ರಾಯ: "ನಾವು ಯಾವುದನ್ನು ಒಳಗೆ ತೆಗೆದುಕೊಳ್ಳುತ್ತೇವೆಯೊ ಅದು ಆಹಾರ. ಜೀವ ಅನುಭವಿಸುವುದಕ್ಕೋಸುಗ ಶ್ರವಣಾದಿ ವಿಷಯ ಗಳನ್ನು ಒಳಗೆ ಸೆಳೆದುಕೊಳ್ಳುವನು. ಪಂಚೇಂದ್ರಿಯಗಳಿಂದ ಬರುವ ಜ್ಞಾನವನ್ನು ಪರಿಶುದ್ಧಿಮಾಡುವುದೇ ಆಹಾರ ಶುದ್ಧಿ." ಆಹಾರ ಶುದ್ಧಿ ಎಂದರೆ ರಾಗ ದ್ವೇಷ ಮೋಹದ ಸೋಂಕು ಇಲ್ಲದೆ ಅರಿಯುವುದು ಎಂದು ಅರ್ಥ. ಆಹಾರ ಹೀಗೆ ಶುದ್ಧವಾದರೆ ಇದನ್ನು ಪಡೆದವನ ಸತ್ತ್ವ ಶುದ್ಧಿ ಯಾಗುವುದು. ಸತ್ತ್ವ ಶುದ್ಧಿಯಾದರೆ ಪರಿಚ್ಛೇದ ರಹಿತನಾದ ಆತ್ಮನ ಸ್ಮರಣೆ ಅನವರತವೂ ನಿಲ್ಲುವುದು."

ಈ ಎರಡು ವ್ಯಾಖ್ಯಾನಗಳೂ ತೋರಿಕೆಗೆ ಪರಸ್ಪರ ವಿರೋಧವಾಗಿ ಕಾಣುವುದು. ಆದರೂ ಎರಡೂ ಸತ್ಯ ಮತ್ತು ಆವಶ್ಯಕ. ಮನಸ್ಸೆಂಬ ಸೂಕ್ಷ್ಮ ದೇಹವನ್ನು ನಿಗ್ರಹಿಸುವುದು ಸ್ಥೂಲ ದೇಹವನ್ನು ನಿಗ್ರಹಿಸು ವುದಕ್ಕಿಂತ ಹೆಚ್ಚಿನ ಕೆಲಸವೇನೊ ನಿಜ. ಆದರೆ ಸೂಕ್ಷ್ಮವನ್ನು ನಿಗ್ರಹಿಸ ಬೇಕಾದರೆ ಸ್ಥೂಲವನ್ನು ನಿಗ್ರಹಿಸುವುದು ಅತ್ಯಾವಶಕ. ಆದಕಾರಣ ಪ್ರಾರಂಭ ಸ್ಥಿತಿಯಲ್ಲಿರುವವನು ಹಿಂದಿನಿಂದ ತಮ್ಮ ಆಚಾರ್ಯರು ಆಹಾರದ ವಿಷಯದಲ್ಲಿ ಹೇಳಿರುವ ಜಾಗ್ರತೆಯನ್ನೆಲ್ಲ ಗಮನಿಸುವುದು ಒಳ್ಳೆಯದು. ಆದರೆ ಮಿತಿಮೀರಿ ಅರ್ಥವಿಲ್ಲದೆ ಆಹಾರ ಶುದ್ಧಿಗೆ ಅತಿ ಪ್ರಾಮುಖ್ಯತೆ ಕೊಟ್ಟಪರಿಣಾಮವಾಗಿ ಧರ್ಮವನ್ನು ಅಡಿಗೆ ಕೋಣೆಗೆ ಮಾತ್ರ ನೂಕಿದೆ. ಇದನ್ನು ನಾವು ಹಲವು ಪಂಗಡಗಳಲ್ಲಿ ನೋಡುತ್ತೇವೆ. ಆ ಧರ್ಮದ ಜ್ಞಾನ ಜ್ಯೋತಿ ಬಹಿರಂಗವಾಗುವ ಹಾಗೆಯೆ ಇಲ್ಲ. ಇದೊಂದು ಬಗೆಯ ಶುದ್ಧ ಚಾರ್ವಾಕಮತವೇ ಸರಿ. ಇದು ಜ್ಞಾನವೂ ಅಲ್ಲ, ಭಕ್ತಿಯೂ ಅಲ್ಲ, ಕರ್ಮವೂ ಅಲ್ಲ. ಇದೊಂದು ಬಗೆಯ ಹುಚ್ಚು. ಯಾರು ಇದನ್ನೇ ನಂಬಿಕೊಂಡಿರುವರೊ ಅವರು ಯಾವ ಬ್ರಹ್ಮಲೋಕಕ್ಕೂ ಹೋಗದೆ ಹುಚ್ಚರ ಆಸ್ಪತ್ರೆಗೆ ಹೋಗುವುದೇ ಹೆಚ್ಚು. ಇತರ ರೀತಿಯಿಂದ ನಮಗೆ ಸುಲಭವಾಗಿ ದಕ್ಕದ ಮಾನಸಿಕ ಪರಿಶುದ್ಧತೆಯನ್ನು ಪಡೆಯಬೇಕಾದರೆ ಆಹಾರ ಶುದ್ಧಿ ಅತ್ಯಾವಶ್ಯಕ ಎಂಬುದು ಯುಕ್ತಿಪೂರಿತವಾಗಿದೆ.

ಇನ್ನು ಕಾಮವನ್ನು ನಿಗ್ರಹಿಸುವುದಕ್ಕೆ ಗಮನಕೊಡಬೇಕು, ವಿಷಯ ಗಳೆಡೆಗೆ ನಮ್ಮ ಇಂದ್ರಿಯ ಹೋಗದಂತೆ ಅದನ್ನು ನಿಗ್ರಹಿಸಿ ನಮ್ಮ

ಸ್ವಾಧೀನಕ್ಕೆ ತರುವುದೇ ಆಧ್ಯಾತ್ಮಿಕ ಜೀವನದ ತಿರುಳು. ಅನಂತರ ಆತ್ಮಸಂಯಮ ಮತ್ತು ಸ್ವಾರ್ಥತ್ಯಾಗದ ಅಭ್ಯಾಸ ಬರುವುದು. ಭಗವಂತನ ಸಾಕ್ಷಾತ್ಕಾರ ಎಷ್ಟೇ ಸಾಧ್ಯವಾದರೂ ಭಕ್ತ ಶ್ರಮಪಟ್ಟು ಸಾಧನೆಮಾಡದೆ ಇದ್ದರೆ ಯಾವುದೂ ಕೈಗೂಡುವುದಿಲ್ಲ. "ಮನಸ್ಸು ಯಾವಾಗಲೂ ಭಗವಂತನನ್ನು ಚಿಂತಿಸುತ್ತಿರಬೇಕು. ಪ್ರಾರಂಭದಲ್ಲಿ ಮನಸ್ಸನ್ನು ಯಾವಾಗಲೂ ಭಗವಂತನನ್ನು ಕುರಿತು ಚಿಂತಿಸುವಂತೆ ಮಾಡುವುದು ಬಹಳಕಷ್ಟ. ಆದರೆ ನಾವು ಸಾಧನೆ ಮಾಡಿದಷ್ಟೂ ಅವನನ್ನು ಕುರಿತು ಚಿಂತಿಸುವುದೂ ಹೆಚ್ಚಾಗುವುದು." "ಅಭ್ಯಾಸ ಮತ್ತು ವೈರಾಗ್ಯದಿಂದ ಮಾತ್ರ ಇದು ಲಭಿಸುತ್ತದೆ" ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳುವನು. ಕ್ರಿಯಾ ವಿಚಾರದಲ್ಲಿ ಎಂದಿನಂತೆ ಪಂಚ ಮಹಾಯಜ್ಞಗಳನ್ನು ಮಾಡುತ್ತಿರಬೇಕು.

ಪವಿತ್ರತೆಯನ್ನು ಸಂಪಾದಿಸುವುದೆ ಆದ್ಯಕರ್ತವ್ಯ. ಭಕ್ತಿಸೌಧವೆಲ್ಲ ನಿಂತಿರುವ ವಜ್ರ ತಳಹದಿಯೆ ಇದು. ಬಾಹ್ಯದೇಹವನ್ನು ಶುದ್ಧಿಮಾಡುವುದು, ಆಹಾರದಲ್ಲಿ ಯುಕ್ತ ಅಯುಕ್ತವನ್ನು ಅನುಸರಿಸುವುದು ಇವೆರಡೂ ಸುಲಭ. ಆದರೆ ಆಂತರಿಕ ಪರಿಶುದ್ಧಿ ಇಲ್ಲದೆ, ಮನೋನೈರ್ಮಲ್ಯವಿಲ್ಲದೆ ಇದರಿಂದ ಏನೂ ಪ್ರಯೋಜನವಿಲ್ಲ. ಶ್ರೀರಾಮಾನುಜರು ಪರಿಶುದ್ಧಿಗೆ ಅತ್ಯಾವಶ್ಯಕವಾದ ಕೆಲವು ಗುಣಗಳನ್ನು ಕೊಡುವರು: ಅವೇ ಸತ್ಯ ಆರ್ಜವ ದಯೆ ಅಹಿಂಸ ಅನಭಿಧ್ಯಾ (ಎಂದರೆ ಮತ್ತೊಬ್ಬರ ಸ್ವತ್ತಿಗೆ ಆಸೆ ಪಡದೆ ಇರುವುದು,) ಮತ್ತೊಬ್ಬರಿಂದ ಆದ ಅಪಕಾರವನ್ನು ಚಿಂತಿಸದೆ ಇರುವುದು, ಕೆಲಸಕ್ಕೆ ಬಾರದ ಆಲೋಚನೆ ಮಾಡದೆ ಇರುವುದು. ಇದರಲ್ಲಿ ಅಹಿಂಸೆಯನ್ನು ಕುರಿತು ವಿಶೇಷವಾಗಿ ವಿಚಾರಮಾಡುವುದು ಅವಶ್ಯಕ. ಅಹಿಂಸೆ ಎಲ್ಲಾ ಪ್ರಾಣಿಗಳಿಗೂ ಸಂಬಂಧಪಟ್ಟಿರಬೇಕು. ಕೆಲವರು ಹೇಳುವಂತೆ ಮಾನವನಿಗೆ ಮಾತ್ರ ದಯೆ, ಮಾನವೇತರ ಪ್ರಾಣಿಗಳಿಗೆ ಇಲ್ಲ ಎಂದು ಅಲ್ಲ, ಅಥವಾ ಮತ್ತೆ ಕೆಲವರು ನಾಯಿ ಬೆಕ್ಕುಗಳಿಗೆ ಅಭಯ ಕೊಟ್ಟು, ಇರುವೆಗೆ ಸಕ್ಕರೆ ಹಾಕಿ, ಸೋದರ ಮಾನವನನ್ನು ಮಾತ್ರ ಎಷ್ಟೇ ನಿರ್ದಯದಿಂದ ಬೇಕಾದರೂ ಪೀಡಿಸುವಂತೆಯೂ ಅಲ್ಲ. ಪ್ರಪಂಚದಲ್ಲಿ ಯಾವ ಒಂದು ಒಳ್ಳೆಯ ಭಾವನೆಯನ್ನಾದರೂ ಹಾಸ್ಯಾಸ್ಪದವಾಗುವಂತೆ ಒಂದು ಅತಿರೇಕಕ್ಕೆ ಒಯ್ಯುವುದು ವಿಶೇಷವಾಗಿದೆ. ಯಾವ ಸದಾಚಾರವನ್ನಾಗಲಿ ಒಂದು ಅತಿಗೆ ಒಯ್ದರೆ ಧರ್ಮಶಾಸ್ತ್ರದ ಅಕ್ಷರಾರ್ಥದಂತೆ ಅನುಸರಿಸಿದರೆ ಅದೊಂದು ದುರಾಚಾರವಾಗುವುದು. ಕೆಲವು ಪಂಗಡದಲ್ಲಿ

ದುರ್ವಾಸನೆಯಿಂದ ನಾರುತ್ತಿರುವ ಸಾಧುಗಳು ಸ್ನಾನವನ್ನು ಮಾಡುವುದಿಲ್ಲ. ಏಕೆಂದರೆ ಸ್ನಾನಮಾಡಿದರೆ ಅವರ ದೇಹದಮೇಲೆ ಇರುವ ಕ್ರಿಮಿಕೀಟಗಳು ನಾಶವಾಗುತ್ತವೆಯಂತೆ! ಆದರೆ ಇದರಿಂದ ಅವರ ಸಹೋದರ ಮಾನವರಿಗೆ ಎಷ್ಟು ಅಸೌಖ್ಯವಾಗುವುದು, ಇತರರಿಗೆ ಜಾಡ್ಯ ಹರಡುವುದು ಎಂಬುದನ್ನು ಕುರಿತು ಯೋಚಿಸುವುದೇ ಇಲ್ಲ. ಸದ್ಯಕ್ಕೆ ಇವರು ವೈದಿಕ ಪಂಗಡಗಳಿಗೆ ಸೇರಿದವರಲ್ಲ.

ಅಸೂಯೆ ಇಲ್ಲದಿರುವುದೆ ಅಹಿಂಸೆಗೆ ಸಾಕ್ಷಿ. ಯಾರಾದರೂ ತಾತ್ಕಾಲಿಕ ಉದ್ರೇಕಕ್ಕೆ ಒಳಗಾಗಿಯೊ, ಪುರೋಹಿತರ ಕಾಟಕ್ಕೆ ಅಥವಾ ಮೂಢ ನಂಬಿಕೆಯ ಬಲಾತ್ಕಾರದಿಂದಲೊ ಒಂದು ದಾನ ಮಾಡಬಹುದು. ಪರೋಪಕಾರ ಮಾಡಬಹುದು. ಆದರೆ ಯಾರ ಮೇಲೂ ಅಸೂಯೆ ಇಲ್ಲದವನೇ ನಿಜವಾದ ಮಾನವಪ್ರೇಮಿ. ಪ್ರಪಂಚದಲ್ಲಿ ಕೆಲವರು ದೊಡ್ಡ ಮನುಷ್ಯರೆಂದೆನಿಸಿಕೊಂಡವರು ಸ್ವಲ್ಪ ಕೀರ್ತಿಗೂ ಪದವಿಗೂ ದ್ರವ್ಯಕ್ಕೂ ಅಸೂಯೆ ಪಡುವುದನ್ನು ನೋಡುವೆವು. ಎಲ್ಲಿಯವರೆಗೆ ಒಬ್ಬನಲ್ಲಿ ಅಸೂಯೆ ಇರುವುದೊ ಅವನು ಅಲ್ಲಿಯವರೆಗೆ ಪೂರ್ಣ ಅಹಿಂಸಾದರ್ಶದಿಂದ ಬಹಳ ದೂರವಿರುವನು. ಹಸು, ಕುರಿ, ಮಾಂಸ ತಿನ್ನುವುದಿಲ್ಲ; ಆದರೆ ಅವು ದೊಡ್ಡ ಯೋಗಿಗಳೆ? ದೊಡ್ಡ ಅಹಿಂಸಾ ವ್ರತಿಗಳೆ? ಯಾವ ಮೂಢನಾದರೂ ಕೆಲವು ಆಹಾರವನ್ನು ತಿನ್ನದೆ ಇರಬಲ್ಲ. ಇದರಿಂದ ಅವನಿಗೆ ಪ್ರಾಣಿಗಿಂತ ಹೆಚ್ಚು ಗೌರವವೇನೂ ಬರುವುದಿಲ್ಲ. ಯಾರು ದಯಾದಾಕ್ಷಿಣ್ಯವಿಲ್ಲದೆ ಅನಾಥರು ವಿಧವೆಯರನ್ನು ಮೋಸಗೊಳಿಸಿ, ಹಣಕ್ಕೋಸುಗ ಮಾಡಬಾರದುದನ್ನೆಲ್ಲ ಮಾಡಿರುವರೊ ಅವರು ಬರೀ ಹುಲ್ಲನ್ನೇ ತಿಂದು ಜೀವಿಸಿದರೂ ಅತಿಹೀನ ನರಾಧಮನಿಗಿಂತಲೂ ಮೇಲಿಲ್ಲ. ಮತ್ತೊಬ್ಬರನ್ನು ನೋಯಿಸುವಂತಹ ಆಲೋಚನೆಯನ್ನು ಕೂಡ ಯಾರು ಮಾಡುವುದಿಲ್ಲವೊ, ಯಾರು ತನ್ನ ಪರಮಶತ್ರು ಅಭಿವೃದ್ಧಿಯಾಗುತ್ತಿದರೂ ಅದನ್ನು ಸಂತೋಷದಿಂದ ನೋಡುವನೊ ಅವನೇ ಭಕ್ತ. ಅವನು ಪ್ರತಿ ದಿನ ಹಂದಿ ಮಾಂಸವನ್ನು ತಿಂದರೂ ಅವನೇ ಯೋಗಿ, ಗುರುಗಳ ಗುರು. ಆದಕಾರಣ ಅಂತರಿಕ ಪರಿಶುದ್ಧಿಯಾಗುವುದಕ್ಕೆ ಮಾತ್ರ ಬಾಹ್ಯ ಪರಿಶುದ್ಧಿ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಬಾಹ್ಯಪರಿಶುದ್ಧಿಯನ್ನು ವಿವರವಾಗಿ ಗಮನಿಸುವುದಕ್ಕೆ ಆಗದೆ ಇರುವಾಗ ಕೇವಲ ಅಂತರಿಕ ಪರಿಶುದ್ಧಿಯನ್ನು ಮಾತ್ರ ಪಡೆಯುವುದು ಮೇಲು. ನಿಜವಾದ ಧರ್ಮದ ತಿರುಳನ್ನು

ಮರೆತು ಅರ್ಥವಿಲ್ಲದ ಬಾಹ್ಯ ಆಚಾರಗಳನ್ನೆಲ್ಲ, ಕಪಿಮುಷ್ಟಿಯಲ್ಲಿ ಹಿಡಿದು ಅದನ್ನು ಬಿಡದ ವ್ಯಕ್ತಿಗೆ ಧಿಃಖಾರ, ಅಂಥ ದೇಶಕ್ಕೆ ಧಿಃಕಾರ. ಆಂತರ್ಯ ದಲ್ಲಿರುವ ಚೇತನವನ್ನು ಪ್ರದರ್ಶಿಸುವುದಕ್ಕೆ ಮಾತ್ರ ಬಾಹ್ಯ ಆಚಾರ ಇರುವುದು. ಅವು ಚೇತನವನ್ನು ವ್ಯಕ್ತಗೊಳಿಸದೆ ಇದ್ದರೆ ನಿರ್ದಾಕ್ಷಿಣ್ಯ ದಿಂದ ಅದನ್ನು ಕಿತ್ತೊಗೆಯಿರಿ.

ಭಕ್ತಿಯೋಗಕ್ಕೆ ಮುಂದಿನ ಸಾಧನವೆ ಅನವಸಾದ ಎಂದರೆ ಶಕ್ತಿ. "ಆತ್ಮ ದುರ್ಬಲರಿಗೆ ದೊರಕುವುದಿಲ್ಲ" ಎಂದು ಶ್ರುತಿ ಸಾರುವುದು. ಇಲ್ಲಿ ದುರ್ಬಲತೆ ಎಂದರೆ ಶಾರೀರಕ ಮತ್ತು ಮಾನಸಿಕ ದೌರ್ಬಲ್ಯಗಳೆರಡನ್ನೂ ಹೇಳುವರು. ಆಶಿಷ್ಠ ಧೃಡಿಷ್ಠರೆ ತಕ್ಕ ಅಧಿಕಾರಿಗಳು. ಕೆಲಸಕ್ಕೆ ಬಾರದ ಕೃಶಾಂಗಿಗಳಿಂದ ಏನು ಆಗುವುದು ? ಯಾವುದಾದರೂ ಯೋಗ ದಿಂದ ಸ್ವಲ್ಪ ದೈಹಿಕ ಮತ್ತು ಮಾನಸಿಕಶಕ್ತಿ ಜಾಗ್ರತವಾದರೂ ಸಾಕು, ಇದನ್ನು ಸಹಿಸಲಾರದೆ ನುಚ್ಚುನೂರಾಗಿ ಹೋಗುವರು. ಆಶಿಷ್ಠರೂ ಧೃಡಿಷ್ಠರೂ ಬಲಿಷ್ಠರೇ ಜಯಶಾಲಿಗಳಾಗಬಲ್ಲರು. ಆದಕಾರಣ ದೈಹಿಕ ಶಕ್ತಿ ಅತ್ಯಾವಶ್ಯಕ. ಧೃಡಕಾಯರು ಮಾತ್ರ ಇಂದ್ರಿಯಗಳನ್ನು ನಿಗ್ರಹಿಸುವ ಪ್ರಯತ್ನದಿಂದ ಉಂಟಾಗುವ ಪ್ರತಿಘಾತವನ್ನು ಸಹಿಸ ಬಲ್ಲರು. ಯಾರು ಭಕ್ತನಾಗಬೇಕೆಂದು ಬಯಸುವನೊ, ಅವನು ಬಲಿಷ್ಠ ನಾಗಿರಬೇಕು, ಆರೋಗ್ಯವಂತನಾಗಿರಬೇಕು. ತೀರ ದುರ್ಬಲರಾದವರು ಯಾವುದಾದರೂ ಯೋಗಾಭ್ಯಾಸಕ್ಕೆ ಕೈಹಾಕಿದರೆ ಯಾವುದಾದರೂ ಸುಲಭವಾಗಿ ಗುಣವಾಗದ ರೋಗಕ್ಕೆ ಗುರಿಯಾಗುವರು, ಇಲ್ಲವೆ ಮನಸ್ಸಿನ ಸ್ವಾಸ್ಥ್ಯತೆ ಕೆಡಿಸಿಕೊಳ್ಳುವರು. ಬೇಕೆಂದು ಶರೀರವನ್ನು ದುರ್ಬಲಗೊಳಿಸಿ ಕೊಳ್ಳುವುದರಿಂದ ಯಾವ ಆಧ್ಯಾತ್ಮಿಕ ಸಿದ್ಧಿಯೂ ದೊರಕಲಾರದು.

ಮನೋದೌರ್ಬಲ್ಯವಿರುವವರು ಕೂಡ ಆತ್ಮನನ್ನು ಪಡೆಯಲಾರರು. ಭಕ್ತನಾಗಬೇಕೆಂದು ಬಯಸುವವನು ಸಂತೋಷಚಿತ್ತನಾಗಿರಬೇಕು. ಪಾಶ್ಚಾತ್ಯದೇಶದಲ್ಲಿ ಧಾರ್ಮಿಕವ್ಯಕ್ತಿ ಎಂದರೆ, ಅವನೆಂದಿಗೂ ನಗಕೂಡದು, ಯಾವಾಗಲೂ ಪೆಚ್ಚುಮುಖವಿರಬೇಕು, ಮುಖ ಸುಕ್ಕುಬಿದ್ದು ದವಡೆ ಅಂಟಿಕೊಂಡು ಹೋಗಿರುವಂತೆ ಇರಬೇಕು. ಇಂತಹ ಕೃಶದೇಹಿಗಳು, ಜೋಲುಮುಖದವರು, ವೈದ್ಯನ ಚಿಕಿತ್ಸೆಗೆ ಅರ್ಹರೇ ಹೊರತು ಯೋಗಿ ಗಳಲ್ಲ. ಪ್ರಸನ್ನಚಿತ್ತರು ಮಾತ್ರ ಬಿಡದೆ ಹೋರಾಡಬಲ್ಲರು. ಸಾವಿರಾರು ಕಷ್ಟನಷ್ಟಗಳು ಬಂದರೂ ಪ್ರಚಂಡ ಮನೋಶಕ್ತಿಯುಳ್ಳವನು ಮಾತ್ರ

ದಾರಿಯನ್ನು ಮಾಡಿಕೊಂಡು ಹೋಗಬಲ್ಲ. ಮಾಯಾಬಂಧನದಿಂದ ಪಾರಾಗಿ ಹೋಗುವುದು ಎಲ್ಲಕ್ಕಿಂತ ಮಿಗಿಲಾದ ಸಾಹಸ. ಪ್ರಚಂಡ ಇಚ್ಛಾಶಕ್ತಿಯುಳ್ಳವರಿಗೆ ಮಾತ್ರ ಇದು ಮೀಸಲು.

ಆದರೆ ಹರ್ಷಾಧಿಕ್ಯದಿಂದ ಉಬ್ಬಿಹೋಗದಂತೆಯೂ ನೋಡಿಕೊಳ್ಳಬೇಕು. ಅತಿವಿನೋದಪರರಾದರೆ ಗಂಭೀರ ವಿಷಯಗಳನ್ನು ಆಲೋಚನೆ ಮಾಡಲಾರೆವು. ಮನಸ್ಸಿನ ಶಕ್ತಿಯನ್ನು ಇದು ವೃಥಾ ವ್ಯರ್ಥಮಾಡುವುದು. ಇಚ್ಛೆ ಬಲವಾದಷ್ಟೂ ಉದ್ರೇಕಕ್ಕೆ ಆಸ್ಪದವಿರುವುದಿಲ್ಲ. ಅತಿವಿನೋದವೂ ಅತಿ ವ್ಯಾಕುಲತೆಯಷ್ಟೇ ಕೆಟ್ಟದ್ದು. ಮನಸ್ಸು ಒಂದೇ ಸಮನಾಗಿ ಧೃಡವಾಗಿ ಪ್ರಶಾಂತವಾಗಿದ್ದರೆ ಮಾತ್ರ ಆಧ್ಯಾತ್ಮಿಕ ಅನುಭವಗಳು ಸಾಧ್ಯ. ಭಗವಂತನನ್ನು ಹೇಗೆ ಪ್ರೀತಿಸಬೇಕೆಂದು ಕಲಿಯುವುದೇ ಹೀಗೆ.

ಪರಾಭಕ್ತಿ

ಪೂರ್ವಭಾವಿ ವೈರಾಗ್ಯ

ಗೌಣೀಭಕ್ತಿ ವಿಚಾರ ಮುಗಿದು ಈಗ ಪರಾಭಕ್ತಿಯನ್ನು ಪ್ರಾರಂಭ ಮಾಡುವೆವು. ಪರಾಭಕ್ತಿಯ ಅನುಷ್ಠಾನಕ್ಕೆ ಸಂಬಂಧಪಟ್ಟ ಕೆಲವು ಸಾಧನದ ವಿಷಯವನ್ನು ಮಾತನಾಡಬೇಕಾಗಿದೆ. ಈ ಸಾಧನವೆಲ್ಲ ಚಿತ್ತ ಶುದ್ಧಿಗೆ ಮಾತ್ರ. ಜಪ ಪೂಜೆ ಪ್ರತೀಕ ಪ್ರತಿಮಾದಿಗಳೆಲ್ಲ ಚಿತ್ತಶುದ್ಧಿಗಾಗಿ. ಚಿತ್ತಶುದ್ಧಿಗಳಲ್ಲೆಲ್ಲಾ ಶ್ರೇಷ್ಠತಮವಾಗಿರುವುದೆ, ಯಾವುದಿಲ್ಲದೆ ನಾವು ಪರಾಭಕ್ತಿಯ ಕ್ಷೇತ್ರವನ್ನು ಪ್ರವೇಶಮಾಡಲಾರೆವೊ ಅದೇ, ವೈರಾಗ್ಯ. ಅನೇಕರು ಇದನ್ನು ಕೇಳಿದರೆ ಸಾಕು, ಅಂಜುವರು. ಆದರೂ ಇದಿಲ್ಲದೆ ಯಾವ ಆಧ್ಯಾತ್ಮಿಕ ಜೀವನ ವಿಕಾಸವೂ ಸಾಧ್ಯವಿಲ್ಲ. ನಾಲ್ಕು ಯೋಗ ಗಳಲ್ಲೆಲ್ಲ ವೈರಾಗ್ಯ ಅತ್ಯಾವಶ್ಯಕ. ಇದು ಆಧ್ಯಾತ್ಮಿಕ ಜೀವನಕ್ಕೆ ಒಯ್ಯುವ ಸೋಪಾನ, ಆಧ್ಯಾತ್ಮಿಕ ಜೀವನದ ಕೇಂದ್ರ, ಜೀವಾಳ. ವೈರಾಗ್ಯವೇ ಧರ್ಮ. ಮಾನವ ಎಂದು ಬಾಹ್ಯಪ್ರಪಂಚದಿಂದ ವಿಮುಖ ನಾಗಿ ಅಂತರ್ಮುಖನಾಗಲು ಯತ್ನಿಸುವನೊ, ನಿಜವಾದ ಆತ್ಮನಾದ ಮಾನವ, ಸ್ಥೂಲವಾಗಿ ದೇಹಧಾರಿಯಾಗಿರುವಾಗ, ಸರ್ವನಾಶವಾಗಿ ಹುಡಿ ಮಣ್ಣಿನಲ್ಲಿ ಬೆರೆತುಹೋಗುವನೆಂದು ಪ್ರಪಂಚಕ್ಕೆ ವಿಮುಖನಾದಾಗ ವೈರಾಗ್ಯ ಪ್ರಾರಂಭವಾಗುವುದು. ಆಗಮಾತ್ರ ನಿಜವಾದ ಆಧ್ಯಾತ್ಮಿಕತೆ ವಿಕಾಸವಾಗುವುದು. ಕರ್ಮಯೋಗಿಯ ವೈರಾಗ್ಯವೆ ಅವನ ಕರ್ಮಫಲ ತ್ಯಾಗ; ಅವನು ತನ್ನ ಕರ್ಮಫಲಕ್ಕೆ ಆಸಕ್ತನಲ್ಲ. ಅವನು ಇಹ ಮತ್ತು ಪರಲೋಕದಿಂದ ಬರುವ ಯಾವ ಪ್ರತಿಫಲವನ್ನೂ ಲೆಕ್ಕಿಸುವುದಿಲ್ಲ. ರಾಜಯೋಗಿಗೆ ಪ್ರಕೃತಿ ಇರುವುದು ಪುರುಷನ ಅನುಭವಕ್ಕಾಗಿ, ಈ ಅನುಭವ ತಾನು ಪ್ರಕೃತಿಯಿಂದ ಯಾವಾಗಲೂ ಬೇರೆ ಎಂಬುದನ್ನು ಅರಿಯುವುದಕ್ಕೆ. ಅನಾದಿಕಾಲದಿಂದಲೂ ಮಾನವ ತಾನು ಆತ್ಮನಾಗಿದ್ದ, ಪ್ರಕೃತಿಯಲ್ಲ, ಈ ಪುರುಷ ಪ್ರಕೃತಿಯ ಸಂಯೋಗ ತಾತ್ಕಾಲಿಕ ಎಂಬು ದನ್ನು ಅರಿಯಬೇಕು, ಅನುಭವಿಸಬೇಕು. ರಾಜಯೋಗಿ ಪ್ರಕೃತಿ ಮೂಲಕ ಬರುವ ತನ್ನ ಸ್ವಂತ ಅನುಭವದಿಂದ ವೈರಾಗ್ಯದ ನೀತಿಯನ್ನು ಕಲಿಯುವನು. ಜ್ಞಾನಯೋಗಿಯ ವೈರಾಗ್ಯ ಎಲ್ಲಕ್ಕಿಂತಲೂ ಕಠಿಣ

ತನುವಾದುದು. ಏಕೆಂದರೆ ಪ್ರಾರಂಭದಿಂದಲೂ ಸತ್ಯಸ್ಯ ಸತ್ಯದಂತೆ ತೋರುವ ಪ್ರಕೃತಿಯೆಲ್ಲಾ ಮಾಯೆ ಎಂದು ತಿಳಿದಿರಬೇಕು. ಪ್ರಕೃತಿಯಲ್ಲಿ ಶಕ್ತಿ ಆವಿರ್ಭಾವನೆಯಂತೆ ತೋರುವುದೆಲ್ಲ ಆತ್ಮನಿಗೆ ಸೇರಿದುದು, ಪ್ರಕೃತಿಗಲ್ಲ ಎಂದು ತಿಳಿಯಬೇಕು. ಪ್ರಾರಂಭದಿಂದಲೆ ಅವನು ಎಲ್ಲಾ ಜ್ಞಾನ ಅನುಭವಗಳೆಲ್ಲ ಆತ್ಮನಲ್ಲಿದೆ ಪ್ರಕೃತಿಯಲ್ಲಿ ಇಲ್ಲ ಎಂಬುದನ್ನು ಅರಿಯಬೇಕು. ತಕ್ಷಣ ಕೇವಲ ವಿಚಾರಶಕ್ತಿಯ ಸಹಾಯದಮೂಲಕ ಪ್ರಕೃತಿಗೆ ತನ್ನನ್ನು ಬಿಗಿದ ಬಂಧನಗಳನ್ನೆಲ್ಲ ಕಿತ್ತೊಗೆಯಬೇಕು. ಅವನು ಪ್ರಕೃತಿ ಮತ್ತು ಅದಕ್ಕೆ ಸೇರಿದುದನ್ನೆಲ್ಲ ತ್ಯಜಿಸುವನು; ಅವು ಮಾಯವಾಗಿ ತಾನು ಮಾತ್ರ ನಿಲ್ಲಲು ಯತ್ನಿಸುವನು.

ವೈರಾಗ್ಯಗಳೆಲ್ಲಕ್ಕಿಂತ ಅತಿ ಸ್ವಾಭಾವಿಕವಾಗಿರುವುದೇ ಭಕ್ತನದು. ಇಲ್ಲಿ ಯಾವ ಬಲಾತ್ಕಾರವೂ ಇಲ್ಲ, ಯಾವುದನ್ನೂ ನಮ್ಮಿಂದ ತೆಗೆದು ಹಾಕಬೇಕಾಗಿಲ್ಲ. ಯಾವುದರಿಂದಲೂ ನಾವು ಬಲಾತ್ಕಾರವಾಗಿ ಬೇರಾಗಬೇಕಾಗಿಲ್ಲ. ಭಕ್ತನ ವೈರಾಗ್ಯ ಸ್ವಾಭಾವಿಕವಾದುದು. ಇತರ ವಸ್ತುಗಳಷ್ಟೆ ಸುಲಭವಾದುದು, ಮೃದುವಾದುದು, ಮೇಲೆ ತೇಲಿಕೊಂಡು ಹೋಗುವುದು. ಪ್ರಪಂಚದಲ್ಲಿ ನಾವು ಪ್ರತಿದಿನ ಇಂತಹ ಪ್ರೇಮದ ಚಿತ್ರವನ್ನು ನೋಡುವೆವು. ಆದರೆ ಅವು ವ್ಯಂಗ್ಯ ಚಿತ್ರದಂತೆ ಇರಬಹುದು. ಒಬ್ಬ ಪುರುಷ ಸ್ತ್ರೀಯನ್ನು ಪ್ರೀತಿಸುವನು. ಕೆಲವು ದಿನಗಳಾದಮೇಲೆ ಮತ್ತೊಬ್ಬಳನ್ನು ಪ್ರೀತಿಸುವನು. ಮೊದಲನೆ ಹೆಂಗಸು ಕ್ರಮೇಣ ಇವನ ಮನಸ್ಸಿನಿಂದ ಜಾರುವಳು. ಕ್ರಮೇಣ ಇವನ ಅರಿವಿಲ್ಲದೆ ಅವಳು ಮಾಯವಾಗುವಳು. ಅವಳ ಅಗತ್ಯವೇ ಇವನಿಗೆ ಅರಿವಾಗುವುದಿಲ್ಲ. ಸ್ತ್ರೀಯೊಬ್ಬಳು ಪುರುಷನನ್ನು ಪ್ರೀತಿಸುವಳು. ಅನಂತರ ಅವಳು ಮತ್ತೊಬ್ಬನನ್ನು ಪ್ರೀತಿಸುವಳು. ಮೊದಲನೆ ಪುರುಷ ಸ್ವಾಭಾವಿಕವಾಗಿ ಅವಳ ನೆನಪಿನಿಂದ ಕ್ರಮೇಣ ಮಾಯವಾಗುವನು. ಒಬ್ಬ ತನ್ನ ಊರನ್ನು ಪ್ರೀತಿಸುವನು, ಅನಂತರ ತನ್ನ ದೇಶವನ್ನು ಪ್ರೀತಿಸುವನು. ತನ್ನ ಹಳ್ಳಿಯ ಮೇಲಿದ್ದ ಉತ್ಕಟ ಅಭಿಮಾನ ಸ್ವಾಭಾವಿಕವಾಗಿ ಮೆಲ್ಲಗೆ ಕಡಿಮೆಯಾಗಿ ಹೋಗುವುದು. ಪುನಃ ಅವನು ಇಡೀ ವಿಶ್ವವನ್ನು ಪ್ರೀತಿಸುವನು. ಮೊದಲು ತನ್ನ ದೇಶದಮೇಲೆ ಇದ್ದ ಭಕ್ತಿ, ತೀವ್ರ ಅಭಿಮಾನ ಇವನಿಗೆ ಯಾವ ವ್ಯಥೆಯನ್ನೂ ಕೊಡದೆ, ಯಾವ ಬಲಾತ್ಕಾರದ ಚಿಹ್ನೆಯೂ ಇಲ್ಲದೆ ಮಾಯವಾಗುವುದು. ಅನಾಗರಿಕನು

ಇಂದ್ರಿಯಗಳ ಸುಖವನ್ನು ಅತಿ ತೀವ್ರವಾಗಿ ಇಚ್ಛಿಸುವನು. ಅವನು ಸುಸಂಸ್ಕೃತನಾದಂತೆ ಬುದ್ಧಿಗೆ ಸಂಬಂಧಪಟ್ಟ ಆನಂದವನ್ನು ಇಚ್ಛಿಸುವನು. ಅವನ ಇಂದ್ರಿಯಾಭಿಲಾಷೆ ಕಡಿಮೆಯಾಗಿ ಕುಗ್ಗುವುದು. ಯಾವ ಮನುಷ್ಯನೂ ತೋಳ ಅಥವಾ ನಾಯಿಯಷ್ಟು ಆನಂದ ಅಥವಾ ತೃಪ್ತಿಯಿಂದ ಊಟಮಾಡಲಾರ. ಆದರೆ ಆಲೋಚನೆಗೆ ಸಂಬಂಧಪಟ್ಟ ಅನುಭವ ಅಥವಾ ಜೈತ್ರಯಾತ್ರೆಗಳು ಪ್ರಾಣಿಗೆ ಅನುಭವವಾಗುವುದಿಲ್ಲ. ಮೊದಲು ಸುಖ ಮೃಗೀಯ ಆಶೆಗೆ ಸಂಬಂಧಪಟ್ಟಿರುವುದು. ಆದರೆ ಪ್ರಾಣಿ ಮೇಲಿನ ಮೆಟ್ಟಲಿಗೆ ಏರಿದಮೇಲೆ ಕೆಳಗಿನ ಕ್ಷೇತ್ರಕ್ಕೆ ಸೇರಿದ ಸುಖದ ಆಕರ್ಷಣೆ ಕಡಿಮೆಯಾಗುವುದು. ಮಾನವ ಸಮಾಜದಲ್ಲಿ ಮನುಷ್ಯ ಮೃಗಕ್ಕೆ ಸಮೀಪದಲ್ಲಿದ್ದಷ್ಟೂ ಅವನಿಗೆ ವಿಷಯವಸ್ತುಗಳ ಮೇಲೆ ಇರುವ ಬಯಕೆ ಉತ್ಕಟವಾಗಿರುವುದು. ಮನುಷ್ಯ ಮೇಲೇರಿ ಹೋದಷ್ಟೂ ಸುಸಂಸ್ಕೃತನಾದಷ್ಟೂ ಬುದ್ಧಿ ಮತ್ತು ಕಲೆಗೆ ಸೇರಿದ ಆನಂದದಮೇಲೆ ಆಸಕ್ತಿ ಹೆಚ್ಚುವುದು. ಬುದ್ಧಿಕ್ಷೇತ್ರವನ್ನು ಮೀರಿ, ಭಾವನಾಕ್ಷೇತ್ರವನ್ನು ಮೀರಿ, ಭಗವತ್ ಸ್ಫೂರ್ತಿ ದೊರಕುವ ಆಧ್ಯಾತ್ಮಿಕ ಕ್ಷೇತ್ರವನ್ನು ಸೇರಿದಾಗ ದೊರಕುವ ಆನಂದದೊಂದಿಗೆ ಬುದ್ಧಿ ಅಥವಾ ಇಂದ್ರಿಯಗಳಿಗೆ ಸಂಬಂಧಪಟ್ಟ ಸೂಕ್ಷ್ಮಸುಖವನ್ನು ಹೋಲಿಸಿ ನೋಡಿದರೆ ಇವು ಅತಿ ಹೇಯವಾಗಿ ಕಾಣುವುವು. ಬೆಳದಿಂಗಳಿನಲ್ಲಿ ತಾರೆಗಳು ಮ್ಲಾನವಾಗುವುವು, ಸೂರ್ಯೋದಯವಾದಮೇಲೆ ಚಂದ್ರನೂ ಮ್ಲಾನವಾಗುವನು. ಭಕ್ತಿಯನ್ನು ಪಡೆಯುವುದಕ್ಕೆ ಬೇಕಾದ ವೈರಾಗ್ಯ ಇತರ ಭಾವಗಳ ನಾಶದಿಂದ ಬರಬೇಕಾಗಿಲ್ಲ. ಹೆಚ್ಚು ಹೆಚ್ಚು ಪ್ರಕಾಶಮಾನವಾಗುತ್ತಿರುವ ದೀವಿಗೆ ಎದುರಿಗೆ ಕಡಿಮೆ ಪ್ರಕಾಶಮಾನವಾಗಿರುವುದು ಮೊಬ್ಬುಮೊಬ್ಬಾಗಿ ಕೊನೆಗೆ ಮಾಯವಾಗಿ ಹೋಗುವಂತೆ ಭಕ್ತಿ ಸ್ವಾಭಾವಿಕವಾಗಿ ವಿಕಾಸವಾಗುತ್ತ ಬರುವುದು. ವಿಷಯ ವಸ್ತುಗಳು ಮತ್ತು ಪಾಂಡಿತ್ಯದಿಂದ ಬರುವ ಸುಖದ ಮೇಲೆ ಅಭಿಲಾಷೆ ಪಕ್ಕಕ್ಕೆ ಸರಿದು ಭಗವಂತನ ಮೇಲಿರುವ ಪ್ರೇಮದಿಂದ ಇದೆಲ್ಲ ಮ್ಲಾನವಾಗಿ ಹೋಗುವುವು. ಭಗವದ್ಭಕ್ತಿ ವಿಕಾಸವಾಗಿ ಪರಾಭಕ್ತಿ ಎನಿಸಿಕೊಳ್ಳುವುದು. ಯಾರು ಈ ಭಗವತ್ಪ್ರೇಮವನ್ನು ಅನುಭವಿಸುವರೊ ಅವರಿಂದ ಆಕಾರಗಳು ಜಾರುವುವು, ಕರ್ಮಗಳು ಮಾಯವಾಗುವುವು, ಅವನು ಶಾಸ್ತ್ರಗಳನ್ನು ಅತಿಕ್ರಮಿಸಿ ಹೋಗುವನು. ವಿಗ್ರಹ ದೇವಸ್ಥಾನ ಚರ್ಚು ಧರ್ಮ ಪಂಗಡ

ದೇಶ ಜನಾಂಗಗಳೆಂಬ ಅಲ್ಪಭಾವನೆಗಳು ತಾವಾಗಿಯೇ ಅವನಿಂದ ಬಿದ್ದುಹೋಗುವುವು. ಅವನನ್ನು ಬಂಧಿಸುವುದಕ್ಕೆ ಅವನ ಸ್ವಾತಂತ್ರ್ಯಕ್ಕೆ ಚ್ಯುತಿ ತರುವುದಕ್ಕೆ ಮತ್ತೇನೂ ಇರುವುದಿಲ್ಲ. ಹಡಗು ಇದ್ದಕ್ಕೆ ಇದ್ದಂತೆಯೇ ಸಾಗರದ ಅಡಿಯಲ್ಲಿರುವ ಒಂದು ಆಯಃಕಾಂತ ಗುಡ್ಡದ ಹತ್ತಿರ ಬರುವುದು. ಅದರ ಕಬ್ಬಿಣದ ಮೊಳೆ ಪಟ್ಟಿಗಳೆಲ್ಲ ಆಯಃಕಾಂತದ ಆಕರ್ಷಣೆಗೆ ಒಳಗಾಗಿ ಹೊರಗೆ ಬರುವುವು. ಸೇರಿಸಿದ ಹಲಗೆಯೆಲ್ಲ ಸಡಿಲವಾಗಿ ಸ್ವಚ್ಛಂದದಿಂದ ನೀರಿನ ಮೇಲೆ ತೇಲುವುವು. ಭಗವಂತನ ಕೃಪೆ ಜೀವಿಯನ್ನು ಬಿಗಿದ ಬಂಧನಗಳನ್ನೆಲ್ಲ ಹೀಗೆ ಸಡಿಲಿಸುವುದು. ಜೀವಿ ಮುಕ್ತನಾಗಿ ತೇಲುವನು. ಪರಾಭಕ್ತಿಗೆ ಸಹಾಯಕವಾದ ಇಂಥ ವೈರಾಗ್ಯದಲ್ಲಿ ಯಾವ ಬಲಾತ್ಕಾರವೂ ಇಲ್ಲ, ಶುಷ್ಕತೆಯೂ ಇಲ್ಲ, ಯಾವ ಹೋರಾಟದ ಮನಸ್ತಾಪಗಳೂ ಇಲ್ಲ. ಭಕ್ತ ತನ್ನ ಯಾವ ಭಾವನೆಯನ್ನೂ ದಮನಮಾಡಬೇಕಾಗಿಲ್ಲ. ಅದನ್ನು ಇನ್ನೂ ತೀವ್ರಮಾಡಿ ಭಗವಂತನ ಕಡೆಗೆ ತಿರುಗಿಸುವನು.

ಭಕ್ತನ ವೈರಾಗ್ಯ ಪ್ರೇಮದ ಪರಿಣಾಮ

ಪ್ರಕೃತಿಯಲ್ಲೆಲ್ಲ ನಾವು ಪ್ರೇಮ ಪ್ರಭಾವವನ್ನು ನೋಡುತ್ತಿರುವೆವು. ಸಮಾಜದಲ್ಲಿ ಯಾವುದು ಒಳ್ಳೆಯದೊ ಶ್ರೇಷ್ಠವೊ ಭವ್ಯವೊ ಅದೆಲ್ಲ ಪ್ರೇಮದ ಪರಿಣಾಮ. ಸಮಾಜದಲ್ಲಿ ಯಾವುದು ಅತಿಹೇಯವಾಗಿದೆಯೊ, ಅಷ್ಟು ಮಾತ್ರವಲ್ಲ, ಯಾವುದು ರಾಕ್ಷಸ ಕೃತ್ಯವಾಗಿದೆಯೊ ಅದು ಕೂಡ ನೀಚಮಾರ್ಗಕ್ಕೆ ತಿರುಗಿದ ಪ್ರೇಮ ಪ್ರಭಾವವೆ. ಸತಿಪತಿಯರಲ್ಲಿ ಪರಿಶುದ್ಧವಾದ ಪ್ರೇಮ ಭಾವನೆಯಂತೆ ಇರುವುದೂ ಅದೇ ಮತ್ತು ಅತಿಹೀನ ಮೃಗೀಯ ತೃಷ್ಣೆಯನ್ನು ತೃಪ್ತಿಪಡಿಸಿಕೊಳ್ಳುವಂತೆ ಮಾಡುವುದೂ ಅದೇ. ಹಿಂದೆ ಇರುವ ಪ್ರೇಮವೆಲ್ಲ ಒಂದೆ, ಬೇರೆ ಬೇರೆ ಸಮಯದಲ್ಲಿ ಅದು ಭಿನ್ನ ಭಿನ್ನ ರೀತಿಯಲ್ಲಿ ವ್ಯಕ್ತವಾಗುತ್ತಿದೆ. ಪ್ರೇಮ ಭಾವನೆಯನ್ನೆ ಕೆಲವು ವೇಳೆ ಸರಿಯಾದ ರೀತಿಯಲ್ಲಿ ತಿರುಗಿಸಿದಾಗ ಒಬ್ಬನನ್ನು ಸನ್ಮಾರ್ಗದಲ್ಲಿ ಪ್ರವರ್ತನಾಗುವಂತೆ, ತನ್ನಲ್ಲಿರುವುದನ್ನೆಲ್ಲಾ ದೀನರಿಗೆ ದಾನಮಾಡುವಂತೆ ಪ್ರೇರೇಪಿಸುವುದು. ಅದನ್ನು ದುರ್ಮಾರ್ಗಕ್ಕೆ ತಿರುಗಿಸಿದಾಗ ಮತ್ತೊಬ್ಬನ

ತಲೆಯೊಡೆದು ಇರುವುದನ್ನೆಲ್ಲಾ ಅಪಹರಿಸುವಂತೆ ಮಾಡುವುದು. ಮೊದಲಿನವನು ಇತರರನ್ನು ಎಷ್ಟು ಪ್ರೀತಿಸುವನೊ, ಅಷ್ಟು ನಿಕಟವಾಗಿ ಎರಡನೆಯವನು ತನ್ನ ಸುಖದಲ್ಲೆ ಆಸಕ್ತನಾಗಿರುವನು. ತನ್ನ ಸುಖವನ್ನು ಮಾತ್ರ ಗಮನಿಸುವಂತೆ ಮಾಡಿದಾಗ ಅದು ಕೆಟ್ಟದ್ದು, ಅನ್ಯರ ಸುಖವನ್ನು ಗಮನಿಸುವಂತೆ ಮಾಡಿದಾಗ ಅದು ಸರಿ, ಯೋಗ್ಯವಾಗಿರುವುದು. ನಮ್ಮ ಅಡಿಗೆಗೆ ಸಹಾಯಕವಾದ ಬೆಂಕಿಯೆ ಮಗುವನ್ನು ಬೇಕಾದರೆ ಸುಡಬಲ್ಲದು. ಆದರೆ ಅದು ಬೆಂಕಿಯ ತಪ್ಪಲ್ಲ. ಅದನ್ನು ನಾವು ಉಪಯೋಗಿಸುವ ರೀತಿಯಲ್ಲಿದೆ. ಆದಕಾರಣ ಪ್ರೇಮ, ಮತ್ತೊಬ್ಬನಿಗಾಗಿ ನಾವು ಪಡುವ ತೀವ್ರಹಂಬಲ, ಎರಡು ಜೀವಿಗಳು ಒಂದಾಗಬೇಕೆಂದು ಬಯಸುವುದು, ಕೊನೆಗೆ ಎಲ್ಲರೂ ಒಂದರಲ್ಲಿ ಐಕ್ಯವಾಗುವರು. ಎಲ್ಲಾ ಕಡೆಯಲ್ಲಿಯೂ ಪ್ರೇಮ ಕೆಳಗಿನ ಮಟ್ಟದಲ್ಲಿ ಇಲ್ಲವೆ ಮೇಲಿನ ಮಟ್ಟದಲ್ಲಿ ವ್ಯಕ್ತವಾಗುತ್ತಿದೆ. ಪರಾಪ್ರೇಮ ಶಾಸ್ತ್ರವೇ ಭಕ್ತಿಯೋಗ. ಅದನ್ನುಯಾವ ರೀತಿ ತಿರುಗಿಸಬೇಕು, ಹೇಗೆ ನಿಗ್ರಹಿಸಬೇಕು ಅದನ್ನು ಹೇಗೆ ನೋಡಿಕೊಳ್ಳಬೇಕು, ಹೇಗೆ ಉಪಯೋಗಿಸಬೇಕು, ಅದಕ್ಕೆ ಬೇರೊಂದು ಗುರಿಯನ್ನು ಕೊಟ್ಟು, ಶ್ರೇಷ್ಠತಮವಾದ ಅತ್ಯದ್ಭುತವಾದ ಪ್ರತಿಫಲಗಳನ್ನು ಕೊಟ್ಟು ಆಧ್ಯಾತ್ಮಿಕ ಆನಂದಕ್ಕೆ ಹೇಗೆ ನಮ್ಮನ್ನು ಕರೆದುಕೊಂಡು ಹೋಗುವುದು ಎಂಬುದನ್ನು ಅದು ತೋರುವುದು. ಭಕ್ತಿಯೋಗ "ಬಿಡು" ಎನ್ನುವುದಿಲ್ಲ. "ಪ್ರೀತಿಸು, ಅತ್ಯುತ್ತಮವಾದುದನ್ನು ಪ್ರೀತಿಸು" ಎನ್ನುವುದು. ಯಾರು ಈ ಪರಾವಸ್ತುವನ್ನು ಪ್ರೀತಿಸುತ್ತಿರುವರೊ ಅವರಿಂದ ಹೀನ ವಿಷಯಗಳ ಮೇಲಿನ ಆಸಕ್ತಿಯೆಲ್ಲ ಸ್ವಭಾವತಃ ಮಾಯವಾಗುವುದು.

"ದೇವರೆ ನಿನ್ನ ವಿಷಯದಲ್ಲಿ ನೀನು ನನ್ನ ಪ್ರಿಯನೆಂದು ಮಾತ್ರ ಹೇಳಬಲ್ಲೆ ಮತ್ತೇನನ್ನೂ ಹೇಳಲಾರೆ. ಓ! ನೀನು ಸುಂದರನಾಗಿರುವೆ, ಅತಿ ಸುಂದರನಾಗಿರುವೆ, ಸಾಕ್ಷಾತ್ ಸೌಂದರ್ಯವೇ ಆಗಿರುವೆ." ಈ ಮಾರ್ಗದಲ್ಲಿ ನಮಗೆ ಬೇಕಾಗಿರುವುದೇನೆಂದರೆ ನಮ್ಮ ಸೌಂದರ್ಯಕಾಂಕ್ಷೆಯನ್ನು ಭಗವಂತನೆಡೆಗೆ ತಿರುಗಿಸಬೇಕು. ಮಾನವನ ಮೊಗದಲ್ಲಿ, ಆಗಸದಲ್ಲಿ, ನಕ್ಷತ್ರಾವಳಿಯಲ್ಲಿ, ಚಂದ್ರನಲ್ಲಿ ಸೌಂದರ್ಯವಾಗಿರುವುದೇನು? ಸರ್ವವ್ಯಾಪಿಯಾದ ಭಗವಂತನ ಸೌಂದರ್ಯಾಂಶ ಭಾವನೆಯ ಅರಿವು ಮಾತ್ರ. "ಅವನು ಬೆಳಗುವುದರಿಂದ ಎಲ್ಲಾ ಬೆಳಗುವುದು. ಅವನ

ಬೆಳಕಿನಿಂದ ಬೆಳಗುವುದೆಲ್ಲ.". ನಿಮ್ಮ ಅಲ್ಪವ್ಯಕ್ತಿತ್ವವನ್ನೆಲ್ಲಾ ತಕ್ಷಣ ಮರೆಯುವಂತೆ ಮಾಡುವ ಭಕ್ತಿಯ ಪರಮಪೀಠದ ಮೇಲೆ ನಿಲ್ಲಿ. ಅಲ್ಪ ಪ್ರಾಪಂಚಿಕ ಸ್ವಾರ್ಥತೆಗಳಿಂದ ಪಾರಾಗಿ. ಇಹ ಮತ್ತು ಪರಲೋಕದ ಅಭಿಮಾನಗಳೆಲ್ಲ ಮನುಷ್ಯನನ್ನು ಅವಲಂಬಿಸಿಕೊಳ್ಳದೆ ಇರಲಿ. ಸಾಕ್ಷಿಯಂತೆ ನಿಲ್ಲಿ. ತಿಳಿದುಕೊಳ್ಳಲೆತ್ನಿಸುತ್ತಿರುವ ವಿದ್ಯಾರ್ಥಿಯಂತೆ ಪ್ರಪಂಚದ ವ್ಯಾಪಾರವನ್ನು ಗಮನಿಸಿ. ಯಾರಲ್ಲಿಯೂ ಆಸಕ್ತರಾಗದೆ ಇರಿ. ಈ ಅದ್ಭುತ ಪ್ರೇಮ ಪ್ರಪಂಚದಲ್ಲಿ ಹೇಗೆ ಕೆಲಸಮಾಡುತ್ತಿದೆ ಎಂಬುದನ್ನು ಗಮನಿಸಿ. ಕೆಲವುವೇಳೆ ಸ್ವಲ್ಪ ಮನಸ್ತಾಪವಾಗುವುದು. ಆದರೆ ಅದು ಉತ್ತಮತರಕ್ಕೆ ಏರಿ ಹೋಗುವಾಗ ಆಗುವ ತಾತ್ಕಾಲಿಕ ಸ್ಥಿತಿ. ಕೆಲವುವೇಳೆ ಸ್ವಲ್ಪ ಹೋರಾಡಬೇಕಾಗುವುದು, ಕೆಲವುವೇಳೆ ಜಾರಬೇಕಾಗುವುದು. ಆದರೆ ಇವೆಲ್ಲ ಸಾಮಾನ್ಯ. ಒಂದು ಪಕ್ಕಕ್ಕೆ ನಿಲ್ಲಿ. ಈ ಗಲಿಬಿಲಿಯೆಲ್ಲ ಬರಲಿ. ನೀವು ಯಾವಾಗ ಪ್ರಕೃತಿ ವ್ಯಾಪಾರದಲ್ಲಿ ನಿರತರಾಗಿರುವಿರೊ ಆಗ ಮಾತ್ರ ನಿಮಗೆ ಆ ಉದ್ವೇಗ ತಾಕುವುದು. ಆದರೆ ನೀವೊಬ್ಬ ಸಾಕ್ಷಿಯಂತೆ ಮುಮುಕ್ಷುವಿನಂತೆ ನಿಂತರೆ ಭಗವಂತ ಕೋಟ್ಯಂತರ ರೀತಿಯಲ್ಲಿ ಪ್ರೇಮದಂತೆ ಪ್ರಕಟವಾಗುತ್ತಿರುವುದನ್ನು ನೀವು ನೋಡುವಿರಿ.

"ಎಲ್ಲಿಯಾದರೂ ಸ್ವಲ್ಪ ಆನಂದವಿದ್ದರೆ. ಅದು ಅತಿಹೀನ ಇಂದ್ರಿಯ ಸುಖದಲ್ಲಿ ಬೇಕಾದರೂ ಇರಬಹುದು, ಅದು ಸ್ವಯಂ ಭಗವಂತನೇ ಆದ ಅನಂತಾನಂದದ ಅಂಶವದು". ಅತಿ ಕೀಳುವರ್ಗಕ್ಕೆ ಸೇರಿದ ಅನ್ಯೋನ್ಯ ಆಕರ್ಷಣೆಯಲ್ಲಿಯೂ ಮುಂದೆ ವಿಕಾಸವಾಗುವ ಪರಮಾತ್ಮನ ಪ್ರೀತಿಯಿದೆ. ಸಂಸ್ಕೃತದಲ್ಲಿ ಭಗವಂತನಿಗೆ ಇರುವ ಹಲವು ಹೆಸರುಗಳಲ್ಲಿ ಹರಿಯೆಂಬುದೊಂದು. ಅಂದರೆ ಎಲ್ಲರನ್ನೂ ಯಾರು ತನ್ನೆಡೆಗೆ ಆಕರ್ಷಿಸುವನೊ ಅವರು ಎಂದು. ಸತ್ಯವಾಗಿ ಮಾನವನ ಆಕರ್ಷಣೆಗೆ ಯೋಗ್ಯವಾದ ವಸ್ತು ಅದೊಂದೆ. ನಿಜವಾಗಿ ಆತ್ಮನನ್ನು ಯಾರು ಆಕರ್ಷಿಸಬಲ್ಲರು? ಪರಮಾತ್ಮನು ಮಾತ್ರ! ಅಚೇತನವಾದ ಜಡವಸ್ತು ಆತ್ಮನನ್ನು ಆಕರ್ಷಿಸಬಲ್ಲದೆಂದು ತಿಳಿದಿರೇನು? ಅದೊಂದೂ ಹಿಂದೆ ಮಾಡಿಲ್ಲ, ಮುಂದೆ ಮಾಡುವಂತೆಯೂ ಇಲ್ಲ. ಒಬ್ಬ ಸುಂದರ ಯುವತಿಯನ್ನು ಹಿಂಬಾಲಿಸುತ್ತಿರುವಾಗ, ಆ ಆಕಾರದಲ್ಲಿರುವ ಕೆಲವು ವಸ್ತುಕಣಗಳು ಅವನನ್ನು ಆಕರ್ಷಿಸುವುದೆಂದು ಭಾವಿಸುವಿರೇನು? ಎಂದಿಗೂ ಇಲ್ಲ. ಆ ವಸ್ತುಕಣಗಳ ಹಿಂದೆ ಭಗವಂತನ ಆವಿರ್ಭಾವನೆಯಲೀಲೆ, ಭಗವಂತನ ಪ್ರೇಮ, ಇದ್ದೇ

ತೀರಬೇಕು, ಇದ್ದೇ ಇರುವುದು. ಅಜ್ಞಾನಿಗೆ ಇದು ತಿಳಿಯದು, ಆದರೂ ಅವನಿಗೆ ತಿಳಿದೊ ತಿಳಿಯದೆಯೊ ಅವನು ಅದರಿಂದ ಮಾತ್ರವೆ ಆಕರ್ಷಿಸಲ್ಪಡುತ್ತಿರುವನು. ಮಾನವ ವರ್ಗದ ಅತಿಕೀಳು ಆಕರ್ಷಣೆ ಕೂಡ ಭಗವಂತನ ಮೂಲದಿಂದಲೆ ಬರುವುದು. “ಪ್ರಿಯತಮಳೆ, ಪತಿಗೋಸುಗ ಪತಿಯನ್ನು ಯಾರೂ ಪ್ರಿತಿಸಲಿಲ್ಲ. ಆತ್ಮನಿಗಾಗಿ ಪ್ರೀತಿಸಿದರು, ಪತಿಯಲ್ಲಿರುವ ಭಗವಂತನಿಗಾಗಿ ಪತಿಯನ್ನು ಪ್ರೀತಿಸಿದರು.” (ಬೃ. ಉ.) ಪ್ರಿಯಸತಿಗೆ ಇದರ ಅರಿವಾಗಬಹುದು ಅಥವಾ ಇಲ್ಲದೆ ಇರಬಹುದು. “ಪ್ರಿಯತಮಳೆ, ಸತಿಯನ್ನು ಸತಿಗಾಗಿ ಯಾರೂ ಪ್ರೀತಿಸುವುದಿಲ್ಲ, ಆದರೆ ಸತಿಯಲ್ಲಿರುವ ಆತ್ಮನಿಗಾಗಿ.” ಇದರಂತೆಯೆ ಯಾರೂ ಸುತರು ಮತ್ತು ಇತರರನ್ನು ಅವರಲ್ಲಿರುವ ಭಗವಂತನಿಗಾಗಿ ಅಲ್ಲದೆ ಕೇವಲ ಅವರನ್ನೇ ಯಾರೂ ಪ್ರೀತಿಸುವುದಿಲ್ಲ. ಪರಮಾತ್ಮನೆ ಮಹಾ ಆಕರ್ಷಣ ಪರ್ವತ, ನಾವೆಲ್ಲ ಕಬ್ಬಿಣದ ಪುಡಿಯಂತೆ. ಯಾವಾಗಲೂ ಅವನ ಆಕರ್ಷಣೆಗೆ ನಾವು ಸಿಲುಕುವೆವು. ನಾವೆಲ್ಲ ಅವನನ್ನು ಪಡೆಯಲು ಹೋರಾಡುತ್ತಿರುವೆವು. ಈ ಪ್ರಪಂಚದಲ್ಲಿ ನಾವು ಹೋರಾಡುವುದಾವುದೂ ಸ್ವಾರ್ಥವಲ್ಲ. ಮೂರ್ಖರಿಗೆ ತಾವು ಏನು ಮಾಡುತ್ತಿರುವರೊ ಅದು ಗೊತ್ತಿಲ್ಲ. ಕೊನೆಗೆ ಅವರ ಜೀವನದ ಉದ್ದೇಶವೇ ಮಹಾ ಆಕರ್ಷಣಾಕೇಂದ್ರವನ್ನು ಸಮೀಪಿಸುವುದು. ಜೀವನದ ಸಾಧನೆಯೆಲ್ಲ, ಹೋರಾಟವೆಲ್ಲ, ಕೊನೆಗೆ ಅವನನ್ನು ಸೇರುವುದಕ್ಕೆ, ಅವನಲ್ಲಿ ಒಂದಾಗುವುದಕ್ಕೆ.

ಭಕ್ತಿಯೋಗಿಗೆ ಜೀವನದ ಹೋರಾಟದ ಅರ್ಥಗೊತ್ತಿದೆ. ಅವನು ಎಷ್ಟೋ ಇಂತಹ ಹೋರಾಟದ ಮೂಲಕ ಸಾಗಿಹೋಗಿರುವುದರಿಂದ ಅವನಿಗೆ ಇದರ ಅರ್ಥ ಚೆನ್ನಾಗಿ ಗೊತ್ತಾಗಿದೆ. ಅವುಗಳ ಘರ್ಷಣೆಯಿಂದ ಪಾರಾಗಿ ಎಲ್ಲ ಆಕರ್ಷಣದ ಕೇಂದ್ರವಾದ ಹರಿಯನ್ನು ಸೇರಬೇಕೆಂದು ಅವನು ಹೃತ್ಪೂರ್ವಕ ಬಯಸುವನು. ಇದೇ ಭಕ್ತನ ವೈರಾಗ್ಯ. ಭಗವಂತನ ಮಹಾ ಆಕರ್ಷಣೆ ಎದುರಿಗೆ ಉಳಿದೆಲ್ಲಾ ಆಕರ್ಷಣೆಗಳೂ ಮಾಯವಾಗುವುವು. ಅವನ ಹೃದಯಕ್ಕೆ ಅದ್ಭುತವಾದ ಭಗವಂತನ ಅನಂತ ಪ್ರೇಮ ಪ್ರವೇಶಿಸಿದಮೇಲೆ ಇತರ ಪ್ರೇಮಗಳಾವುವೂ ಅಲ್ಲಿ ಇರಲಾರವು. ಇದು ಮತ್ತೇನಾಗಬಲ್ಲದು ? ಭಕ್ತಿ ಸಾಕ್ಷಾತ್ ಭಗವಂತನೆ ಆದ ಪ್ರೇಮಾಮೃತ ಸಾಗರವನ್ನು ಅವನ ಹೃದಯದಲ್ಲಿ ತುಂಬುವುದು. ಇತರ ಕ್ಷುದ್ರ ಪ್ರೀತಿಗಳಿಗೆ ಅಲ್ಲಿ ಎಡೆ ಇಲ್ಲ. ಭಕ್ತನ ವೈರಾಗ್ಯ ಎಂದರೆ

ದೇವರಲ್ಲದ ವಸ್ತುಗಳಮೇಲೆ ಅನಾಸಕ್ತಿ: ಇದು ಅನುರಾಗದಿಂದ ಪ್ರಾಪ್ತ ವಾಗುವುದು.

ಪರಾಭಕ್ತಿಯನ್ನು ಪಡೆಯಲು ಇದು ಸರಿಯಾದ ಸಾಧನೆ. ಇಂತಹ ವೈರಾಗ್ಯ ಪ್ರಾಪ್ತವಾದಾಗ ಪರಾಭಕ್ತಿಯು ಪರಮಸಾನ್ನಿಧ್ಯವನ್ನು ಸೇರುವುದಕ್ಕೆ ದ್ವಾರ ತೆರೆಯುವುದು. ಆಗ ಮಾತ್ರ ಪರಾಭಕ್ತಿ ಎಂದರೇನೆಂಬುದು ಅರಿವಾಗುವುದು. ಪರಾಭಕ್ತಿಯ ಮೂಲಸ್ಥಾನಕ್ಕೆ ಹೋದವನಿಗೆ ಮಾತ್ರ ಆಧ್ಯಾತ್ಮಿಕ ಜೀವನಕ್ಕೆ ಸಹಕಾರಿಯಾದ ವಿಗ್ರಹ ಚಿಹ್ನೆಗಳಾವುವೂ ಪ್ರಯೋಜನವಿಲ್ಲವೆಂದು ಹೇಳುವ ಅಧಿಕಾರವಿದೆ. ಸಾಧಾರಣವಾಗಿ ಯಾವುದನ್ನು ವಿಶ್ವಸಹೋದರ ಭಾವನೆ ಎನ್ನುವೆವೊ ಅಂತಹ ಶ್ರೇಷ್ಠ ಸ್ಥಿತಿಯನ್ನು ಇವನು ಮಾತ್ರ ಪಡೆದಿರುವನು. ಉಳಿದವರು ಸುಮ್ಮನೆ ಮಾತನಾಡುವರು. ಅವನು ಯಾವ ವ್ಯತ್ಯಾಸವನ್ನೂ ನೋಡುವುದಿಲ್ಲ. ಪ್ರೇಮದ ಅದ್ಭುತ ಪ್ರವಾಹ ಅವನ ಹೃದಯವನ್ನು ಆವರಿಸಿದೆ. ಅವನು ಮಾನವನಲ್ಲಿ ಮಾನವನ್ನು ಕಾಣುವುದಿಲ್ಲ, ತನ್ನ ಪ್ರೇಮೇಶ್ವರನನ್ನು ಕಾಣುತ್ತಾನೆ. ಪ್ರತಿಯೊಬ್ಬರಲ್ಲಿಯೂ ಅವನಿಗೆ ತನ್ನ ಆರಾಧನೆಯ ಇಷ್ಟಮೂರ್ತಿಯಾದ ಹರಿಯೇ ಕಾಣುತ್ತಿರುವನು. ಸೂರ್ಯಚಂದ್ರರಲ್ಲಿರುವ ಕಾಂತಿಯೆಲ್ಲ ಅವನ ಆವಿರ್ಭಾವನೆಯೆ. ಎಲ್ಲಿ ಸೌಂದರ್ಯವಿದೆ, ಎಲ್ಲಿ ವಿಭೂತಿಯಿದೆ, ಅದೆಲ್ಲ ಅವನಿಗೆ ಪರಮಾತ್ಮನೆ ಆಗಿರುವನು. ಅಂತಹ ಭಕ್ತರು ಇನ್ನೂ ಜೀವಿಸಿರುವರು. ಪ್ರಪಂಚದಲ್ಲಿ ಎಂದಿಗೂ ಅವರಿಲ್ಲದೆ ಇಲ್ಲ. ಅಂತಹವರನ್ನು ಒಂದು ಹಾವು ಕಡಿದರೂ ತನ್ನ ಪ್ರಿಯತಮನಿಂದ ಒಬ್ಬ ಬೇಹುಗಾರ ಬಂದನೆಂದು ಹೇಳುವರು. ವಿಶ್ವಸಹೋದರತ್ವದ ವಿಷಯವಾಗಿ ಮಾತನಾಡುವುದಕ್ಕೆ ಇವರಿಗೆ ಮಾತ್ರ ಅಧಿಕಾರವಿದೆ. ಅವರಿಗೆ ಅಸಮಾಧಾನವಿಲ್ಲ, ದ್ವೇಷ ಅಸೂಯಾ ಭಾವನೆ ಅವರ ಹೃದಯದಲ್ಲಿ ಏಳುವುದೇ ಇಲ್ಲ. ಬಾಹ್ಯವಿಷಯ ವಸ್ತುಗಳು ಅವರಿಂದ ಒಂದೇ ಸಲ ಮಾಯವಾಗಿ ಹೋಗಿವೆ. ಅವರ ಪ್ರೇಮದ ಮೂಲಕ ದೃಶ್ಯದ ಹಿಂದೆಲ್ಲಾ ಪರಮಸತ್ಯವನ್ನು ಕಾಣುವಾಗ ಅವರು ಹೇಗೆ ಕೋಪಕೊಳ್ಳಬಲ್ಲರು?

ಭಕ್ತಿಯೋಗದ ಸ್ವಾಭಾವಿಕತೆ ಮತ್ತು ಅದರ ಮೂಲರಹಸ್ಯ

ಅರ್ಜುನ ಶ್ರೀ ಕೃಷ್ಣನನ್ನು "ಯಾರು ಯಾವಾಗಲೂ ನಿನ್ನಲ್ಲಿಯೆ ಚಿತ್ತವನ್ನಿಟ್ಟು ಉಪಾಸನೆ ಮಾಡುತ್ತಿರುವರೂ ಅವರು ದೊಡ್ಡ ಯೋಗಿಗಳೊ ಅಥವಾ ಅವ್ಯಕ್ತವಾದ ಅಕ್ಷರವನ್ನು ಉಪಾಸನೆ ಮಾಡುತ್ತಿರುವವರು ಶ್ರೇಷ್ಠಯೋಗಿಗಳೊ?" ಎಂದು ಪ್ರಶ್ನಿಸಿದನು. ಆದಕ್ಕೆ ಶ್ರೀಕೃಷ್ಣ ಹೀಗೆನ್ನುವನು: "ಯಾರು ನನ್ನನ್ನೇ ಉಪಾಸನೆ ಮಾಡುವರೊ ಅವರೇ ಉತ್ತಮ ಉಪಾಸಕರು, ಉತ್ತಮ ಯೋಗಿಗಳು. ಯಾರು ಇಂದ್ರಿಯ ವ್ಯಾಪಾರವನ್ನು ತಡೆದು, ಎಲ್ಲರಲ್ಲೂ ಸಮಬುದ್ಧಿಯುಳ್ಳವರಾಗಿ, ವರ್ಣನೆಗೆ ನಿಲುಕದ, ಅವ್ಯಕ್ತವಾಗಿರುವ, ಸರ್ವವ್ಯಾಪಿಯಾಗಿರುವ, ಆಲೋಚನೆಗೆ ನಿಲುಕದ, ಸರ್ವಜ್ಞನಾದ ಅಚಲನಾದ ಸನಾತನವಾದ ಬ್ರಹ್ಮನನ್ನು ಉಪಾಸಿಸುತ್ತಿರುವರೊ,ಸರ್ವಭೂತ ಹಿತರತರಾಗಿರುವರೊ ಅವರು ನನ್ನನ್ನೆ ಸೇರುವರು. ಆದರೆ ಅವ್ಯಕ್ತವಾದ ಅಕ್ಷರದಲ್ಲಿ ಆಸಕ್ತವಾದ ಮನಸ್ಸುಳ್ಳ ವರಿಗೆ ಮಾರ್ಗದಲ್ಲಿ ಕ್ಲೇಶ ಹೆಚ್ಚು. ದೇಹಧಾರಿಗಳಿಗೆ ಅವ್ಯಕ್ತ ಮಾರ್ಗ ದಲ್ಲಿ ಹೋಗುವುದು ಬಹಳ ಕಷ್ಟ. ಯಾರು ತಮ್ಮ ಸರ್ವಕರ್ಮಗಳನ್ನೂ ನನಗೆ ಅರ್ಪಣೆಮಾಡಿ, ನನ್ನಲ್ಲಿಯೇ ತತ್ಪರರಾಗಿ ಮತ್ತೇನನ್ನು ಆಶ್ರಯಿ ಸದೆ ನನ್ನನ್ನು ಧ್ಯಾನಿಸುತ್ತ ಉಪಾಸನೆ ಮಾಡುತ್ತಿರುವರೊ ಅವರನ್ನು ಜನನ ಮರಣ ರೂಪವಾದ ಸಂಸಾರಸಾಗರದಿಂದ ನಾನು ಪಾರು ಮಾಡುತ್ತೇನೆ."

ಜ್ಞಾನಯೋಗ ಭಕ್ತಿಯೋಗ ಎರಡನ್ನೂ ಇಲ್ಲಿ ಹೇಳುವರು. ಹಿಂದಿನ ವಾಕ್ಯದಲ್ಲಿ ಎರಡನ್ನೂ ವಿವರಿಸಿದೆ ಎಂದು ಹೇಳಬಹುದು. ಜ್ಞಾನಯೋಗ ವೇನೊ ಅದ್ಭುತವಾದುದು, ದೊಡ್ಡ ತತ್ತ್ವಶಾಸ್ತ್ರವೇ ಸರಿ. ಪ್ರತಿಯೊಬ್ಬನೂ ಅಲ್ಲಿ ಏನು ಹೇಳಿದೆಯೊ ಅದನ್ನೆಲ್ಲಾ ತಾನು ಮಾಡಬಲ್ಲೆ ಎಂದು ವಿಚಿತ್ರವಾಗಿ ಭಾವಿಸುವನು. ಆದರೆ ವೇದಾಂತಶಾಸ್ತ್ರದಲ್ಲಿ ಹೇಳಿರುವಂತೆ ಬಾಳುವುದು ನಿಜವಾಗಿ ಬಹಳ ಕಷ್ಟ. ತತ್ತ್ವದಲ್ಲಿ ಹೇಳಿರುವಂತೆ ನಮ್ಮ ಜೀವನವನ್ನು ನಿರೂಪಿಸಿಕೊಳ್ಳುವುದರಿಂದ ಅನೇಕವೇಳೆ ದೊಡ್ಡ ಅಪಾ ಯಕ್ಕೆ ಈಡಾಗಬೇಕಾಗುವುದು. ಪ್ರಪಂಚದಲ್ಲಿರುವ ಜನರನ್ನು ಎರಡು

ವಿಭಾಗಮಾಡಬಹುದು. ದೇಹಸಂರಕ್ಷಣೆಯೇ ಬಾಳಿನ ಆದಿ ಅಂತ್ಯ ಎಂದು ಭಾವಿಸುವ ಆಸುರೀ ಪ್ರವೃತ್ತಿಯವರು ಮತ್ತು ದೇಹ ಒಂದು ಗುರಿಯೆಡೆಗೆ ಹೋಗುವುದಕ್ಕೆ ಸಾಧನಮಾತ್ರ, ಆಧ್ಯಾತ್ಮಿಕ ಜೀವನ ವಿಕಾಸಕ್ಕೆ ಸಹಾಯಮಾಡುವ ಒಂದು ಯಂತ್ರ ಎಂದು ಭಾವಿಸುವ ದೈವೀಪ್ರಕೃತಿಯವರು. ಪಿಶಾಚಿ ತನ್ನ ಹಿತಸಾಧನೆಗೆ ಶಾಸ್ತ್ರವನ್ನು ಉದಹರಿಸಬಲ್ಲದು, ಉದಹರಿಸಿಯೂ ಉದಹರಿಸುವುದು. ಜ್ಞಾನ ಮಾರ್ಗದ ಸಹಾಯದಿಂದ ಸತ್ಕರ್ಮವನ್ನು ಸಮರ್ಥಿಸುವಂತೆ ದುಷ್ಕರ್ಮ ವನ್ನೂ ಸಮರ್ಥಿಸಬಹುದು. ಜ್ಞಾನಮಾರ್ಗದಲ್ಲಿರುವ ದೊಡ್ಡ ಅಪಾಯವೆ ಇದು. ಆದರೆ ಭಕ್ತಿಯೋಗ ಸ್ವಾಭಾವಿಕವಾದುದು, ಮಧುರವಾದುದು. ಜ್ಞಾನಯೋಗಿಯಂತೆ ಭಕ್ತ ಅತಿ ಮೇಲೇರಿ ಹೋಗುವುದಿಲ್ಲ, ಆದಕಾರಣ ಅವನು ಅಷ್ಟು ಕೆಳಕ್ಕೂ ಬೀಳುವುದಿಲ್ಲ. ಮುಮುಕ್ಷು ಯಾವ ಮಾರ್ಗ ವನ್ನಾದರೂ ಅನುಸರಿಸಲಿ, ಜೀವಿ ಮಾಯಾಬಂಧನದಿಂದ ಪಾರಾಗುವ ವರೆಗೆ ಮುಕ್ತನಾಗಲಾರ.

ಒಬ್ಬ ಧನ್ಯ ಗೋಪಿಯ ಜೀವನದಲ್ಲಿ ಅವಳನ್ನು ಬಂಧಿಸಿದ ಧರ್ಮ ಅಧರ್ಮಗಳ ಶೃಂಖಲೆ ಹೇಗೆ ಜಾರಿಹೋಗಿದೆ ಎಂಬುದನ್ನು ವಿವರಿಸುವ ಶ್ಲೋಕವೊಂದಿದೆ : "ಭಗವಧ್ಯಾನದಿಂದ ಬರುವ ಆನಂದಾತಿಶಯದಿಂದ ಸತ್ಕರ್ಮಫಲ ಹೋಯಿತು ; ಅನಂತರ ಅವನನ್ನು ಇನ್ನೂ ಪಡೆಯಲಿಲ್ಲ ಎಂಬ ದುಃಖಾತಿಶಯದಿಂದ ಅವರ ದುಸ್ವಭಾವವೆಲ್ಲ ನಾಶವಾಗಿ ಅವರು ಮುಕ್ತರಾದರು (ವಿಷ್ಣುಪುರಾಣ)." ಮಾನವನ ಹೃದಯದಲ್ಲಿ ಮಿಡಿ ಯುತ್ತಿರುವ ಕಾಮಕ್ರೋಧಾದಿ ವೇದನೆಗಳು ಉದ್ವೇಗ ಮತ್ತು ಭಾವನೆ ಗಳೇ ಕೆಟ್ಟವಲ್ಲ. ಅವನ್ನು ನಿಗ್ರಹಿಸಿ ಭವ್ಯಜೀವನವನ್ನು ಮುಟ್ಟುವವರೆಗೆ ಅವನ್ನು ಮೇಲೆ ಮೇಲಕ್ಕೆ ಒಯ್ಯಬೇಕು. ಯಾವುದು ನಮ್ಮನ್ನು ದೇವ ರೆಡೆಗೆ ಒಯ್ಯುವುದೋ ಅದೇ ಶ್ರೇಷ್ಠ, ಉಳಿದವೆಲ್ಲಾ ಅದಕ್ಕಿಂತ ಕೀಳು. ಸುಖದುಃಖಗಳು ಸರ್ವಸಾಮಾನ್ಯ, ನಮ್ಮೆಲ್ಲರಿಗೂ ಮತ್ತೆ ಮತ್ತೆ ಬರು ತ್ತಿರುವುದು. ದ್ರವ್ಯವೊ ಅಥವಾ ಮತ್ತಾವುದಾದರೂ ಪ್ರಾಪಂಚಿಕ ವಸ್ತು ಸಿಕ್ಕಲಿಲ್ಲವೆಂದು ಅವನು ದುಃಖಿತನಾದರೆ ಅವನು ಆ ದುಃಖಭಾವನೆ ಯನ್ನು ತಪ್ಪುಮಾರ್ಗದಲ್ಲಿ ತಿರುಗಿಸುತ್ತಿರುವನು. ಆದರೂ ದುಃಖಭಾವನೆ ಒಳ್ಳೆಯದು. ಜೀವನದ ಪರಮಗತಿಯನ್ನು ನಾನಿನ್ನೂ ಪಡೆಯಲಿಲ್ಲ, ದೇವರನ್ನು ನಾನಿನ್ನೂ ಸೇರಲಿಲ್ಲ ಎಂದು ವ್ಯಥೆಪಡಲಿ. ಈ ವ್ಯಥೆಯಿಂದ

ಅವನಿಗೆ ಮೋಕ್ಷ ಪ್ರಾಪ್ತವಾಗುವುದು. ಸ್ವಲ್ಪ ಕೈಯ್ಯಲ್ಲಿ ದುಡ್ಡಿದೆ ಎಂದು ಸಂತೋಷಪಟ್ಟರೆ, ಹಾಗೆ ಸಂತೋಷಪಡುವುದು ತಪ್ಪು. ಅದನ್ನು ಇನ್ನೂ ಮೇಲಿನ ಮಟ್ಟಕ್ಕೆ ತಿರುಗಿಸಬೇಕು, ಜೀವನದ ಶ್ರೇಷ್ಠತಮ ಆದರ್ಶವನ್ನು ಪಡೆಯುವುದಕ್ಕೆ ಇದು ಸಹಕಾರಿಯಾಗಬೇಕು. ಇಂತಹ ಆದರ್ಶದಲ್ಲಿ ಸಂತೋಷಪಡುವುದೆ ನಿಜವಾಗಿ ನಮ್ಮ ಉತ್ತಮೋತ್ತಮ ಆನಂದವಾಗಬೇಕು. ಉಳಿದೆಲ್ಲ ವೃತ್ತಿಗಳೂ ಕೂಡ ಇದರಂತೆಯೆ ಸತ್ಯ. ಇವಾವುವೂ ತಪ್ಪಲ್ಲ ಎನ್ನುವನು ಭಕ್ತ; ಇವುಗಳನ್ನೆಲ್ಲಾ ತನ್ನ ವಶಕ್ಕೆ ತೆಗೆದುಕೊಂಡು ತಪ್ಪದೆ ಭಗವಂತನ ಕಡೆಗೆ ಹೋಗುವಂತೆ ಮಾಡುವನು.

ಪ್ರೇಮ ಲಕ್ಷಣ

ಪ್ರೇಮ ವ್ಯಕ್ತವಾಗುವ ಕೆಲವು ಲಕ್ಷಣಗಳಿವೆ. ಮೊದಲನೆಯದೆ ಪೂಜ್ಯಬುದ್ಧಿ. ದೇವಸ್ಥಾನ ಮುಂತಾದ ಪವಿತ್ರ ಸ್ಥಳಗಳನ್ನು ಜನರು ಏಕೆ ಪೂಜ್ಯಬುದ್ಧಿಯಿಂದ ನೋಡುವರು. ಎಲ್ಲ ಪವಿತ್ರ ಸ್ಥಳದಲ್ಲಿಯೂ ಇಂತಹ ಭಾವನೆಯ ಸಂಬಂಧವಿದೆ. ಪ್ರತಿಯೊಂದು ದೇಶದಲ್ಲಿಯೂ ಜನ ಏತಕ್ಕೆ ಆಧ್ಯಾತ್ಮಿಕ ಗುರುಗಳನ್ನು ಪೂಜಿಸುವರು. ಹಾಗೆ ಮಾಡುವುದು ಮಾನವ ಸಹಜವಾದುದು. ಏಕೆಂದರೆ ಎಲ್ಲ ಗುರುಗಳೂ ಭಗವತ್ ತತ್ತ್ವವನ್ನೇ ಬೋಧಿಸುವರು. ಮೂಲದಲ್ಲಿ ವಿಚಾರಿಸಿದರೆ ಪೂಜ್ಯದೃಷ್ಟಿ ಪ್ರೇಮದಿಂದ ಉದಿಸುವುದು. ನಾವಾರೂ ಯಾರನ್ನು ಪ್ರೀತಿಸಲಾರೆವೊ ಅವರನ್ನು ಗೌರವಿಸಲಾರೆವು.

ಅನಂತರ ಪ್ರೀತಿ ಬರುವುದು. ಜನರಿಗೆ ವಿಷಯವಸ್ತುಗಳಮೇಲೆ ಎಷ್ಟೊಂದು ಪ್ರೀತಿಯಿದೆ! ತಾವು ಪ್ರೀತಿಸುವುದನ್ನು ಪಡೆಯುವುದಕ್ಕೆ, ತಮ್ಮ ಇಂದ್ರಿಯಗಳಿಗೆ ತೃಪ್ತಿಪಡಿಸುವ ವಸ್ತುಗಳನ್ನು ಪಡೆಯುವುದಕ್ಕೆ ಎಲ್ಲಿಗೆ ಬೇಕಾದರೂ ಹೋಗುವರು, ಯಾವ ಅಪಾಯವನ್ನು ಬೇಕಾದರೆ ಎದುರಿಸುವರು. ಇಂತಹ ತೀವ್ರಪ್ರೇಮವನ್ನೆ ಭಕ್ತ ದೇವರ ಕಡೆಗೆ ಹರಿಸಬೇಕಾಗಿದೆ.

ವಿರಹ ನಂತರ ಬರುವುದು. ಪ್ರಿಯವ್ಯಕ್ತಿಯ ಅಗಲಿಕೆಯಿಂದಾದ ಪರಮದುಃಖವೆಂಬ ಆಹ್ಲಾದಕರವಾದ ವೃತ್ತಿ. ಭಕ್ತ ತಾನು ದೇವರನ್ನು

ಇನ್ನೂ ಪಡೆದಿಲ್ಲ, ಯಾವುದು ಅರಿಯುವುದಕ್ಕೆ ಯೋಗ್ಯವಾದ ಏಕಮಾತ್ರ ವಸ್ತುವೋ ಅದನ್ನು ಇನ್ನೂ ತಾನು ಅರಿತಿಲ್ಲ ಎಂಬ ಪರಿಣಾಮದಿಂದ ತೀವ್ರ ಅತೃಪ್ತನಾಗಿ ಉನ್ಮತ್ತನಂತೆ ಇದ್ದರೆ ಅದೇ ವಿರಹ.

ಭಕ್ತ ತಾನು ಪ್ರೀತಿಸುವ ವಸ್ತು ಒಂದನ್ನು ಬಿಟ್ಟು ಮತ್ತಾವುದನ್ನು ಕಂಡರೂ ಸಮಾಧಾನವಿರುವುದಿಲ್ಲ. ಇದೇ ಏಕರತಿ ವಿಚಿಕಿತ್ಸಾ. ಪ್ರಾಪಂಚಿಕ ಪ್ರೇಮದಲ್ಲಿ ಹಲವುವೇಳೆ ಇಂತಹ ವಿರಹ ವ್ಯಕ್ತವಾಗುವುದು. ಪುರುಷರು ಸ್ತ್ರೀಯರಲ್ಲಿ, ಸ್ತ್ರೀಯರು ಪುರುಷರಲ್ಲಿ ನಿಜವಾಗಿ ತೀವ್ರವಾಗಿ ಅನುರಕ್ತರಾಗಿರುವಾಗ, ತಮಗೆ ಇಷ್ಟವಿಲ್ಲದವರು ಹತ್ತಿರ ಬಂದರೆ ಸ್ವಾಭಾವಿಕವಾಗಿ ಅಸಮಾಧಾನವಾಗುವುದು. ಪ್ರೀತಿಸದೆ ಇರುವ ವ್ಯಕ್ತಿ ಹತ್ತಿರ ಇದ್ದರೆ ಇದೇ ಬಗೆಯ ಮನೋವೃತ್ತಿ ಪರಾಭಕ್ತಿಗೆ ವಶವಾದವನಿಗೂ ಪ್ರಾಪ್ತವಾಗುವುದು. ದೇವರಲ್ಲದ ಮತ್ತಾವುದನ್ನು ಕುರಿತು ಮಾತನಾಡುವುದಕ್ಕೂ ಅವನಿಗೆ ಇಚ್ಛೆ ಇರುವುದಿಲ್ಲ. "ಆತನನ್ನು ನೆನೆಯಿರಿ, ಆತನನ್ನು ನೆನೆಯಿರಿ, ಇತರ ಮಾತನ್ನೆಲ್ಲ ತ್ಯಜಿಸಿ (ಮು.)" ಭಕ್ತನಿಗೆ ಪರಮಾತ್ಮನ ವಿಷಯ ಕುರಿತು ಮಾತನಾಡುತ್ತಿರುವವರು ಮಿತ್ರರಾಗುವರು, ಅನ್ಯವಿಷಯಗಳನ್ನು ಕುರಿತು ಮಾತನಾಡುವವರು ಶತೃಗಳಾಗುವರು.

ಪ್ರೇಮ "ತದರ್ಥ ಪ್ರಾಣಸ್ಥಾನ" ಎಂಬಲ್ಲಿ ಮತ್ತೂ ಉತ್ಕೃಷ್ಟ ಸ್ಥಿತಿಗೆ ಬರುವುದು. ಪ್ರೇಮಾದರ್ಶಕ್ಕೋಸುಗ ಅವನು ಬದುಕುವನು. ಆ ಪ್ರೇಮಕ್ಕಾಗಿ ಬಾಳುವುದು ಮನೋಹರವಾಗಿರುವುದು. ಯೋಗ್ಯವಾಗಿರುವುದು. ಅದಿಲ್ಲದೆ ಜೀವನ ಒಂದು ಕ್ಷಣಕಾಲವೂ ಇರಲಾರದು.

ಸಾಧಕ ಭಕ್ತಿಮಾರ್ಗದಲ್ಲಿ ಪರಿಪೂರ್ಣನಾಗಿ ಧನ್ಯನಾದಾಗ, ಭಗವಂತನನ್ನು ಪಡೆದಾಗ, ಅವನ ಚರಣಾರವಿಂದಗಳನ್ನು ಸ್ಪರ್ಶಿಸಿದಂತೆ ಆದಾಗ "ತದೀಯತೆ" ಎಂಬ ಸ್ಥಿತಿ ಪ್ರಾಪ್ತವಾಗುವುದು. ಆಗ ಅವನ ಇಡೀ ಜೀವನ ಪರಿಶುದ್ಧವಾಗಿ ಸಂಪೂರ್ಣ ಬದಲಾವಣೆಯಾಗುವುದು. ಆಗ ಅವನು ಕೃತಕೃತ್ಯನಾಗುವನು. ಆದರೂ ಹಲವು ಭಕ್ತರು ಅವನನ್ನು ಪೂಜಿಸುವುದಕ್ಕಾಯೆ ಬದುಕಿರುವರು. ಜೀವನದ ಏಕಮಾತ್ರ ಆನಂದವೇ ಅದು, ಅದನ್ನು ಭಕ್ತರು ತ್ಯಜಿಸಲಾರರು. "ಹೆ ದೊರೆಯೆ, ಯಾರು ನಿತ್ಯತೃಪ್ತರಾಗಿರುವರೊ, ಯಾರ ಹೃದಯ ಗ್ರಂಥಿಗಳು ಬಿದ್ದುಹೋಗಿವೆಯೊ ಅವರು ಕೂಡ ಹರಿಯನ್ನು ಪ್ರೀತಿಗೋಸುಗ ಪ್ರೀತಿಸುವರು. ಭಗವಂತನ ಕಲ್ಯಾಣಗುಣಗಳಿಂಥವು." (ಭಾಗವತ) "ಸರ್ವದೇವತೆಗಳು

ಮುಮುಕ್ಷುಗಳು ಜ್ಞಾನಿಗಳು ಆ ಭಗವಂತನನ್ನು ನಮಸ್ಕರಿಸುತ್ತಿರುವರು" (ನೃಸಿಂಹತಪನೀಯ ಉಪನಿಷತ್) ಪ್ರೇಮ ಶಕ್ತಿ ಇಂತಹದು. ಎಂದು ಭಕ್ತ ಸಂಪೂರ್ಣವಾಗಿ ತನ್ನನ್ನು ಮರೆತು, ಯಾವುದೂ ತನಗೆ ಸೇರಿಲ್ಲ ವೆಂದು ಭಾವಿಸುವನೊ ಆಗ ತದೀಯತೆಯ ಸ್ಥಿತಿಯನ್ನು ಪಡೆಯುವನು. ಈ ಪ್ರಪಂಚದಲ್ಲಿ ಸರ್ವವೂ ಭಗವಂತನಿಗೆ ಸೇರಿರುವುದರಿಂದ ಎಲ್ಲವೂ ಪವಿತ್ರವಾಗುವುದು. ಪ್ರಾಪಂಚಿಕ ಪ್ರೀತಿಯಲ್ಲಿ ಕೂಡ ಪ್ರಿಯತಮನಿಗೆ, ಪ್ರಿಯತಮಳಿಗೆ ಸೇರಿರುವುದೆಲ್ಲ ಪವಿತ್ರವಾಗಿ ಪರಮಪ್ರಿಯವಾಗಿ ಕಾಣು ವುದು. ತನ್ನ ಹೃದಯೇಶ್ವರಿಗೆ ಸೇರಿದ ಒಂದು ತುಂಡು ಬಟ್ಟೆಯನ್ನು ಕೂಡ ಅವನು ಪ್ರೀತಿಸುವನು. ಹೀಗೆ ಭಕ್ತ ಭಗವಂತನನ್ನು ಪ್ರೀತಿಸಿ ದಾಗ ಇಡೀ ಬ್ರಹ್ಮಾಂಡವೇ ಅವನಿಗೆ ಪ್ರಿಯವಾಗುವುದು. ಏಕೆಂದರೆ ಇದೆಲ್ಲ ಅವನದೆ.

ವಿಶ್ವಪ್ರೇಮ ಮತ್ತು ಅದು ಆತ್ಮನಿವೇದನಕ್ಕೆ ಒಯ್ಯುವ ರೀತಿ

ನಾವು ಮೊದಲು ಸಮಷ್ಟಿಯನ್ನು ಪ್ರೀತಿಸದೆ ವ್ಯಷ್ಟಿಯನ್ನು ಹೇಗೆ ಪ್ರೀತಿಸಬಲ್ಲೆವು? ದೇವರೆ ಸಮಷ್ಟಿ, ಎಲ್ಲವನ್ನು ತನ್ನಲ್ಲಿ ಅಳವಡಿಸಿ ಕೊಂಡಿರುವ ಸರ್ವಸಾಮಾನ್ಯವಾದ ಪೂರ್ಣ. ನಾವು ಕಣ್ಣೆದುರಿಗೆ ನೋಡುವ ವಿಶ್ವ ವ್ಯಷ್ಟಿ. ನಾವು ಸಮಷ್ಟಿಯನ್ನು ಪ್ರೀತಿಸುವುದರಮೂಲಕ ಮಾತ್ರ ಇಡೀ ಬ್ರಹ್ಮಾಂಡವನ್ನು ಪ್ರೀತಿಸಬಹುದು. ಕೋಟ್ಯಂತರ ವ್ಯಷ್ಟಿಗಳನ್ನೊಳಗೊಂಡ ಒಂದು ಸಮೂಹ ಸಮಷ್ಟಿ ಎನ್ನುವುದು. ಭರತ ಖಂಡದ ದಾರ್ಶನಿಕರು ವಿಶೇಷ ಗುಣಗಳಲ್ಲಿ ಕೊನೆಗಾಣುವುದಿಲ್ಲ. ವಿಶೇಷವನ್ನು ವಿಹಂಗಮ ದೃಷ್ಟಿಯಲ್ಲಿ ನೋಡಿ, ಎಲ್ಲ ವಿಶೇಷಣಗಳನ್ನು ಒಳಕೊಳ್ಳುವ ಸಾಮಾನ್ಯಗುಣವನ್ನು ಅರಸಲೆತ್ನಿಸುವರು. ಭರತಖಂಡದ ದರ್ಶನ ಮತ್ತು ಧರ್ಮದ ಏಕಮಾತ್ರ ಗುರಿಯೆ ವಿಶ್ವವ್ಯಾಪಿಯಾಗಿರುವ ಸಾಮಾನ್ಯ ತತ್ತ್ವವನ್ನು ಕಂಡುಹಿಡಿಯುವುದು. ಯಾವುದನ್ನು ಅರಿತರೆ ಎಲ್ಲವನ್ನೂ ಅರಿಯಬಹುದೊ, ಅಂತಹ ಅದ್ವಿತೀಯವಾದ ಸರ್ವಸಾಮಾನ್ಯ ವಾದ ಪೂರ್ಣತತ್ತ್ವವನ್ನು ಅರಿಯುವುದೇ ಜ್ಞಾನಯೋಗಿಯ ಗುರಿ.

ಯಾರನ್ನು ಪ್ರೀತಿಸಿದರೆ ಇಡೀ ವಿಶ್ವವನ್ನು ಪ್ರೀತಿಸಬಹುದೊ, ಅಂತಹ ಎಲ್ಲರ ಹೃದಯಾಂತರಾಳದಲ್ಲಿಯೂ ಇರುವ, ಚಿನ್ಮಾತ್ರಗೋಚರನಾದ ವ್ಯಕ್ತಿಯನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕೆಂದು ಭಕ್ತ ಬಯಸುವನು. ಯಾವ ಶಕ್ತಿ ಸರ್ವರಲ್ಲಿಯೂ ಸಾಮಾನ್ಯವಾಗಿರುವುದೊ, ಯಾವುದನ್ನು ನಿಗ್ರಹಿಸಿದರೆ ಇಡೀ ವಿಶ್ವವನ್ನು ನಿಗ್ರಹಿಸಬಹುದೊ ಅದನ್ನು ವಶಮಾಡಿಕೊಳ್ಳಬೇಕೆಂದು ಯೋಗಿ ಬಯಸುವನು. ಅನಾದಿಕಾಲದಿಂದಲೂ ಭಾರತೀಯರ ದೃಷ್ಟಿ ವಿಜ್ಞಾನಶಾಸ್ತ್ರದಲ್ಲಿ, ಮಾನಸಿಕಶಾಸ್ತ್ರದಲ್ಲಿ, ಪ್ರೀತಿಯಲ್ಲಿ, ತತ್ತ್ವದಲ್ಲಿ ಎಲ್ಲಾ ಕಡೆಯಲ್ಲಿಯೂ ಸರ್ವಸಾಮಾನ್ಯವಾಗಿರುವ ತತ್ತ್ವಾನ್ವೇಷಣವಾಗಿದೆ ಎಂದು ಕಂಡುಬರುವುದು.

ಒಬ್ಬೊಬ್ಬರನ್ನಾಗಿ ಅನಂತಕಾಲದವರೆಗೂ ನೀವು ಪ್ರೀತಿಸುತ್ತಾ ಹೋದರೂ ಇಡೀ ವಿಶ್ವವನ್ನು ನೀವು ಕೊಂಚವೂ ಪ್ರೀತಿಸಲು ಸಾಧ್ಯವಿಲ್ಲ ಎಂಬುದು ಭಕ್ತನ ನಿರ್ಣಯ. ಎಲ್ಲಾ ಪ್ರೇಮಗಳ ಮೊತ್ತವೇ ದೇವರು. ಜೀವಿಗಳು ಬದ್ಧರಾಗಲಿ ಸಾಧಕರಾಗಲಿ ಮುಕ್ತರಾಗಲಿ ಅವರ ಜೀವನಾಕಾಂಕ್ಷೆಯ ಸಾರಸಂಗ್ರಹವೇ ಭಗವಂತ ಎಂಬ ಮೂಲಭಾವನೆ ಅರಿವಾದಾಗ ಮಾತ್ರ ಒಬ್ಬ ವಿಶ್ವಪ್ರೇಮವನ್ನು ವ್ಯಕ್ತಪಡಿಸಲು ಸಾಧ್ಯ. ದೇವರೆ ಸಮಷ್ಟಿ. ನಮ್ಮೆದುರಿಗೆ ಕಾಣುವ ನಾಮರೂಪಗಳಿಂದ ಆಗಿರುವ ವಿಶ್ವವೇ ಆತನ ವ್ಯಷ್ಟಿಸ್ವರೂಪ. ನಾವು ಸಮಷ್ಟಿಯನ್ನು ಪ್ರೀತಿಸಿದರೆ ಸರ್ವವನ್ನೂ ಪ್ರೀತಿಸಿದಂತೆ ಆಯಿತು. ಆಗ ಮಾತ್ರ ವಿಶ್ವವನ್ನು ಪ್ರೀತಿಸುವುದು ಪರೋಪಕಾರಮಾಡುವುದು ಸುಲಭವಾಗಿ ಬರುವುದು. ಮೊದಲು ದೇವರನ್ನು ಪ್ರೀತಿಸಿ ಈ ಶಕ್ತಿಯನ್ನು ಸಂಪಾದಿಸಬೇಕು. ಇಲ್ಲದೆ ಇದ್ದರೆ ಜಗತ್ತಿಗೆ ಒಳ್ಳೆಯದನ್ನು ಮಾಡುವುದು ಸುಲಭವಲ್ಲ. "ಎಲ್ಲವೂ ಭಗವಂತನದು ಅವನೇ ನನ್ನ ಪ್ರೇಮೇಶ್ವರ. ನಾನು ಅವನನ್ನು ಪ್ರೀತಿಸುತ್ತೇನೆ," ಎನ್ನುವನು ಭಕ್ತ. ಎಲ್ಲವೂ ಭಗವಂತನಿಗೆ ಸೇರಿದುದರಿಂದ ಪವಿತ್ರವಾಗುವುದು ಭಕ್ತನಿಗೆ. ಎಲ್ಲರೂ ಅವನ ಮಕ್ಕಳೇ, ಅವನ ದೇಹವೆ ಅವನ ಆವಿರ್ಭಾವನೆಯೆ. ಹೀಗಿರುವಾಗ ನಾವು ಮತ್ತೊಬ್ಬರನ್ನು ಹಿಂಸಿಸುವುದು ಹೇಗೆ, ಮತ್ತೊಬ್ಬರನ್ನು ಪ್ರೀತಿಸದೆ ಇರುವುದು ಹೇಗೆ! ಭಗವತ್ಪ್ರೇಮದ ಪರಿಣಾಮವಾಗಿ ವಿಶ್ವಪ್ರೇಮ ಸಿದ್ಧಿಸಿಯೇ ಸಿದ್ಧಿಸುವುದು. ದೇವರ ಸಮೀಪಕ್ಕೆ ಹೋದಷ್ಟು ಎಲ್ಲವೂ ಅವನಲ್ಲಿವೆ ಎಂಬುದನ್ನು ಹೆಚ್ಚು ಹೆಚ್ಚು ಕಾಣುವೆವು. ಭಕ್ತ ಪರಮಪ್ರೇಮವನ್ನು ಸಂಪೂರ್ಣವಾಗಿ

ಅನುಭವಿಸಿದಮೇಲೆ ಎಲ್ಲರಲ್ಲಿಯೂ ಅವನನ್ನು ನೋಡುವನು. ನಮ್ಮ ಹೃದಯ ಎಂದಿಗೂ ಒತ್ತದ ಪ್ರೇಮಚಿಲುಮೆಯಾಗುವುದು. ಈ ಪ್ರೇಮದ ಉತ್ತುಂಗ ಶಿಖರಕ್ಕೆ ನಾವಿನ್ನೂ ಏರಿಹೋದರೆ ಪ್ರಪಂಚದಲ್ಲಿ ಒಂದು ವಸ್ತುವಿಗೂ ಮತ್ತೊಂದು ವಸುವಿಗೂ ಇರುವ ವ್ಯತ್ಯಾಸವೆಲ್ಲಾ ಸಂಪೂರ್ಣ ಮಾಯವಾಗುವುದು. ಮನುಷ್ಯ ಇನ್ನುಮೇಲೆ ಮನುಷ್ಯನಂತೆ ಕಾಣು ವುದಿಲ್ಲ, ದೇವರಂತೆ ಕಾಣುವನು. ಪ್ರಾಣಿ ಪ್ರಾಣಿಯಂತೆ ಇನ್ನುಮೇಲೆ ಕಾಣುವುದಿಲ್ಲ, ದೇವರಂತೆ ಕಾಣುವುದು. ಹುಲಿ ಕೂಡ ಹುಲಿಯಂತೆ ಕಾಣುವುದಿಲ್ಲ. ಅದೂ ದೇವರಂತೆ ಕಾಣುವುದು. ಭಕ್ತಿಯ ಇಂಥಾ ಶ್ರೇಷ್ಠ ಸ್ಥಿತಿಯಲ್ಲಿರುವಾಗ ಪ್ರತಿಯೊಬ್ಬರಿಗೂ ಪ್ರತಿಯೊಂದು ಪ್ರಾಣಿಗೂ ಪ್ರತಿಯೊಂದು ಜೀವಕ್ಕೂ ಪೂಜೆಯನ್ನೂ ಸಲ್ಲಿಸುವರು. “ಹರಿ ಸರ್ವ ಭೂತಗಳಲ್ಲಿಯೂ ಇರುವನೆಂದು ಅರಿತು ಜ್ಞಾನಿಗಳು ತಾರತಮ್ಯಭಾವ ವಿಲ್ಲದೆ ಎಲ್ಲರನ್ನೂ ಪ್ರೀತಿಸಬೇಕು.” (ವಿಷ್ಣುಪುರಾಣ). ನಿರತಿಶಯ ಪ್ರೇಮದಿಂದ ತನಗೆ ಏನಾದರೂ ಅಪ್ರತಿಕೂಲವಲ್ಲ ಎಂಬ ಆತ್ಮನಿವೇದನಾ ಭಾವನೆ ಪ್ರಾಪ್ತವಾಗುವುದು. ಆಗ ಪ್ರೀತಿಸುತ್ತಿರುವ ಭಕ್ತ ನೋವಾದರೆ ಆಗಲಿ, ಸಂತೋಷ ಎನ್ನುವನು. ದುಃಖಬಂದರೆ “ದುಃಖವೂ ಬರಲಿ, ನೀನೂ ಭಗವಂತನಿಂದಲೇ ಬಂದಿರುವೆ” ಎನ್ನುವನು. ಒಂದು ಸರ್ಪ ಬಂದರೆ “ಬಾ ಸರ್ಪವೇ” ಎನ್ನುವನು. ಮೃತ್ಯು ಬಂದು ನಿಂತರೂ ಭಕ್ತ ಹಸನ್ಮುಖದಿಂದ ಸ್ವೀಕರಿಸುವನು. “ನಾನೆ ಧನ್ಯ, ಇವರೆಲ್ಲ ನನ್ನ ಹತ್ತಿರ ಬರುತ್ತಿರುವರು ಎಲ್ಲರೂ ಬರಲಿ” ಎನ್ನುವನು. ಭಗವಂತ ಮತ್ತು ಆತನಿಗೆ ಸಂಬಂದಪಟ್ಟ ವಸ್ತುವನ್ನು ಅತಿ ಉತ್ಕಟವಾಗಿ ಪ್ರೀತಿಸುವ ಪರಿಣಾಮವಾಗಿ ಬರುವ ಸಂಪೂರ್ಣ ಶರಣಾಗತಿಯ ಪ್ರಭಾವದಿಂದ ಸುಖ ದುಃಖದಿಂದ ತನ್ನ ಮೇಲೆ ಆಗುವ ಪರಿಣಾಮವನ್ನು ಭೇದಭಾವದಿಂದ ನೋಡುವುದಿಲ್ಲ. ವ್ಯಥೆ ಮತ್ತು ದುಃಖ ಪ್ರಾಪ್ತವಾದಾಗ ಗೊಣಗಾಡು ವುದನ್ನೆ ಅರಿಯನವನು. ಸ್ವಲ್ಪವೂ ಗೊಣಗಾಡದೆ ಪ್ರೇಮಮಯನಾದ ಭಗವದಿಚ್ಛೆಗೆ ಬಾಗಿ ನಡೆಯುವುದು, ಅದ್ಭುತ ಸಾಹಸದಿಂದ ಗಳಿಸುವ ಕೀರ್ತಿಗಿಂತಲೂ ಮಿಗಿಲು.

ಮಾನವಕೋಟಿಯ ಬಹುಪಾಲು ಜನಕ್ಕೆ ದೇಹವೇ ಸರ್ವಸ್ವ, ದೇಹವೇ ಅವರ ವಿಶ್ವ, ದೇಹದ ಸೌಖ್ಯ ಒಂದೇ ಅವರ ಜೀವನದ ಗುರಿ. ದೇಹ ಮತ್ತು ದೇಹಕ್ಕೆ ಸಂಬಂಧಪಟ್ಟ ವಸ್ತುಗಳ ಉಪಾಸನೆ ಎಂಬ

ರಾಕ್ಷಸ ನಮ್ಮನ್ನೆಲ್ಲಾ ನೆಟ್ಟಿಕೊಂಡಿರುವುದು. ದೊಡ್ಡ ದೊಡ್ಡ ಮಾತುಗಳನ್ನು ಆಡುವೆವು, ಉದಾತ್ತವಿಷಯಗಳನ್ನು ಕುರಿತು ಯೋಚಿಸುವೆವು. ಆದರೂ ನಾವೆಲ್ಲಾ ರಣಹದ್ದಿನಂತೆ. ಮನಸ್ಸೆಲ್ಲಾ ಕೆಳಗೆ ಕೊಳೆತ ಹೆಣದ ಮೇಲೆ. ವ್ಯಾಘ್ರದ ಬಾಯಿಂದ ನಮ್ಮ ದೇಹವನ್ನು ಏತಕ್ಕೆ ಸಂರಕ್ಷಿಸಬೇಕು? ವ್ಯಾಘ್ರಕ್ಕೆ ನಾವೇತಕ್ಕೆ ದಾನ ಮಾಡಬಾರದು? ಇದರಿಂದ ವ್ಯಾಘ್ರಕ್ಕಾದರೂ ತೃಪ್ತಿಯಾಗುವುದು. ಹೀಗೆ ಮಾಡುವುದು ಸ್ವಾರ್ಥತ್ಯಾಗ ಮತ್ತು ಮಾಡಬಲ್ಲಂತಹ ಸ್ಥಿತಿಯನ್ನು ನೀನು ಪಡೆಯಬಲ್ಲೆಯಾ? ಭಕ್ತಿ ಶಿಖರದ ತುತ್ತತುದಿ ಇದು; ಅಲ್ಲಿಂದ ತಿರುಗಿ ನೋಡಿದರೆ ತಲೆತಿರುಗುವಂತೆ ಇರುವುದು. ಪ್ರಪಂಚದಲ್ಲಿ ಆ ತುತ್ತತುದಿಯನ್ನು ಮುಟ್ಟಿರುವವರು ಬಹಳ ವಿರಳ. ಆತ್ಮತ್ಯಾಗಕ್ಕೆ ಸರ್ವದಾ ಸಿದ್ಧವಾಗಿರುವಂತಹ ಶ್ರೇಷ್ಠ ಸ್ಥಿತಿಯನ್ನು ಮುಟ್ಟುವವರೆಗೆ ಅವನು ಪರಮಭಕ್ತನಾಗಲಾರ. ಈ ದೇಹವನ್ನೆ ನಾವೆಲ್ಲಾ ತಕ್ಕಮಟ್ಟಿಗೆ ಆರೋಗ್ಯ ಸ್ಥಿತಿಯಲ್ಲಿಟ್ಟಿರಬಹುದು, ಸ್ವಲ್ಪ ಹೆಚ್ಚು ವರುಷವೊ ಕಡಿಮೆಯೊ ಬದುಕಬಹುದು. ಆದರೂ ಅದು ನಾಶವಾಗಬೇಕಾಗಿದೆ. ಅದು ಸ್ಥಿರವಾಗಿರಲಾರದು. ಪರೋಪಕಾರದಲ್ಲಿ ತಮ್ಮ ದೇಹವನ್ನು ತೆರುವಂತವರು ಧನ್ಯರು. "ಐಶ್ವರ್ಯ ಮತ್ತು ಪ್ರಾಣವನ್ನು ಇತರರ ಉಪಕಾರಕ್ಕೆ ತೆರಲು ಮಹಾತ್ಮರು ಸದಾ ಸಿದ್ಧರಾಗಿರುವರು." ಈ ಪ್ರಪಂಚದಲ್ಲಿ ಮರಣ ಒಂದೇ ಸತ್ಯವಾಗಿರುವಾಗ ಈ ದೇಹ ಪಾಪಕಾರ್ಯಕ್ಕೆ ಆಹುತಿಯಾಗುವ ಬದಲು ಪುಣ್ಯಕಾರ್ಯಕ್ಕೆ ಅರ್ಪಿತವಾಗುವುದು ಮೇಲು. ನಾವು ಐವತ್ತು ವರುಷವೊ ನೂರು ವರುಷದವರೆಗೊ ಹೇಗೊ ಕಾಲ ತಳ್ಳುತ್ತಿರಬಹುದು. ಆದರೆ ಅನಂತರ ಏನಾಗುವುದು? ಸಂಯೋಗದಿಂದ ಆದ ಪ್ರತಿಯೊಂದು ವಸ್ತುವೂ ವಿಯೋಗವಾಗಲೇ ಬೇಕು, ನಾಶವಾಗಲೇ ಬೇಕು. ಅದು ನಾಶವಾಗುವ ಒಂದು ಸಮಯ ಬಂದೇ ತೀರುವುದು. ಜೀಸಸ್, ಮಹಮ್ಮದ್, ಬುದ್ಧ ಎಲ್ಲರೂ ಕಾಲವಾದರು. ಜಗದ ದೊಡ್ಡ ಮಹಾತ್ಮರು ಆಚಾರ್ಯರು ಎಲ್ಲರೂ ಸತ್ತರು. "ಪ್ರತಿಯೊಂದೂ ನಾಶವಾಗುತ್ತಿರುವ ಈ ಕ್ಷಣಿಕ ಪ್ರಪಂಚದಲ್ಲಿ ನಮ್ಮ ಪಾಲಿಗೆ ದೊರೆತ ಕಾಲದಿಂದ ಆದಷ್ಟು ಹೆಚ್ಚು ಉಪಯೋಗವನ್ನು ಪಡೆಯಬೇಕು" ಎನ್ನುವನು ಭಕ್ತ. ಬಹುಜನರ ಹಿತಕ್ಕಾಗಿ ನಮ್ಮ ಬಾಳನ್ನು ಅರ್ಪಿಸುವುದೇ ಶ್ರೇಷ್ಠತಮ ಉಪಯೋಗ. ಈ ಪ್ರಪಂಚದಲ್ಲಿ ಸ್ವಾರ್ಥತೆಗೆಲ್ಲ ಮೂಲಕಾರಣ ನಮ್ಮ

ದೇಹಾಭಿಮಾನವೆಂಬ ಘೋರಭಾವನೆ. ನಮಗೆ ಇರುವ ದೇಹವೆ ನಾವು, ಅದನ್ನು ಹೇಗಾದರೂ ಸಂರಕ್ಷಿಸಬೇಕು, ಅದಕ್ಕೆ ಸುಖವನ್ನು ಕೊಡಬೇಕು ಎಂಬ ಭಾವನೆ. ನೀನು ದೇಹಕ್ಕಿಂತ ಬೇರೆ ಎಂದು ಭಾವಿಸಿದರೆ ಆಗ ನೀನು ಯಾರ ಪರವಾಗಿ ಅಥವಾ ವಿರೋಧವಾಗಿ ಹೋರಾಡಬೇಕಾಗಿಲ್ಲ. ಎಲ್ಲಾ ಸ್ವಾರ್ಥಭಾವನೆಗೂ ನೀನು ಸತ್ತಂತಿರುವೆ. ಪ್ರಪಂಚಕ್ಕೆ ನಾವು ಸತ್ತಂತೆ ಇರಬೇಕು ಎನ್ನುವನು ಭಕ್ತ. ಅದೇ ನಿಜವಾದ ಆತ್ಮನಿವೇದನ. ಬಂದದ್ದೆಲ್ಲ ಬರಲಿ, "ನಿನ್ನ ಇಚ್ಛೆ ಇದ್ದಂತೆ ಆಗಲಿ" ಎನ್ನುವುದಕ್ಕೆ ಇದೇ ಅರ್ಥ. ನಮ್ಮ ದುರ್ಬಲತೆ ಆಸೆ ಆಕಾಂಕ್ಷೆಗಳನ್ನೆಲ್ಲಾ ದೇವರೇ ಪ್ರಚೋದಿಸುತ್ತಿರುವನು ಎಂದು ಭಾವಿಸಿ ಕಾದಾಡುವುದಲ್ಲ. ನಮ್ಮ ಸ್ವಾರ್ಥ ಹೋರಾಟದಿಂದಲೂ ಕಲ್ಯಾಣವಾಗಬಹುದು. ಆದರೆ ಅದು ದೈವೇಚ್ಛೆ. ಆದರೆ ನಿಜವಾದ ಭಕ್ತ ಏನನ್ನೂ ತನಗಾಗಿ ಆಶಿಸಕೂಡದು, ತನ್ನ ಸ್ವಾರ್ಥಕ್ಕಾಗಿ ಮಾಡಕೂಡದು. "ಹೇ ದೇವರೆ, ನಿನ್ನ ಹೆಸರಿನಲ್ಲಿ ಮುಗಿಲ ಚುಂಬಿಸುವ ದೇಗುಲವನ್ನು ಕಟ್ಟುವರು. ನಿನ್ನ ಹೆಸರಿನಲ್ಲಿ ದೊಡ್ಡ ದಾನಧರ್ಮ ಮಾಡುವರು. ನಾನು ದೀನ, ನನ್ನಲ್ಲಿ ಏನೂ ಇಲ್ಲ. ಆದಕಾರಣವೆ ನನ್ನ ದೇಹವನ್ನು ನಿನ್ನ ಪಾದಾರವಿಂದದಲ್ಲಿಡುವೆನು. ದೇವರೆ, ನನ್ನನ್ನು ತ್ಯಜಿಸಬೇಡ." ಭಕ್ತನ ಹೃದಯಾಂತರಾಳದಿಂದ ಏಳುವ ಪ್ರಾರ್ಥನೆ ಇದು. ತನ್ನ ಪ್ರಿಯಪರಮೇಶ್ವರನಿಗೆ ನಿತ್ಯ ಆತ್ಮಾರ್ಪಣ ಮಾಡಿಕೊಂಡಿರುವ ಅನುಭವ ಯಾರಿಗೆ ಆಗಿದೆಯೊ ಅದು ಎಲ್ಲಾ ಐಶ್ವರ್ಯ ಅಧಿಕಾರಕ್ಕಿಂತ, ಎಲ್ಲರೂ ಕೊಂಡಾಡುತ್ತಿರುವ ಕೀರ್ತಿಗಿಂತಲೂ ಭೋಗಕ್ಕಿಂತಲೂ ಮಿಗಿಲು. ಭಗವದಿಚ್ಛೆಗೆ ಅಧೀನವಾಗಿ ವರ್ತಿಸುವ ಭಕ್ತನ ಶಾಂತಿಯನ್ನು ಮಾತಿನಲ್ಲಿ ವಿವರಿಸಲು ಅಸದಳ. ಉಪಮಾತೀತವಾಗಿರುವುದು ಆ ಅನುಭವ. ಭಕ್ತನ ಅಪ್ರತಿಕೂಲ ಸ್ಥಿತಿಯಲ್ಲಿ ಯಾವ ಸ್ವಾರ್ಥಾಭಿಲಾಷೆಯೂ ಇರುವುದಿಲ್ಲ. ಆದಕಾರಣ ಯಾವುದೂ ಅವನಿಗೆ ವಿರೋಧವಾಗಿಲ್ಲ. ಪರಮ ಸ್ವಾರ್ಥತ್ಯಾಗದ ಇಂಥ ಸ್ಥಿತಿಯಲ್ಲಿ ಸ್ವಾರ್ಥತೆಯೆಲ್ಲ ಸಂಪೂರ್ಣ ಮಾಯವಾಗುವುದು. ಯಾರಲ್ಲಿ ಎಲ್ಲಾ ಭೂತಗಳೂ ಹುಟ್ಟಿ ಬೆಳೆದು ಲಯವಾಗುತ್ತಿದೆಯೊ ಅಂತಹ ಭಗವಂತನಮೇಲೆ ಅವಿಚ್ಛಿನ್ನಾನುರಾಗ ಒಂದೇ ಉಳಿದಿರುವುದು. ಭಗವಂತನಮೇಲೆ ಇರುವ ಪ್ರೇಮಾಸಕ್ತಿ ಜೀವಿಯನ್ನು ಬಂಧಿಸುವುದಿಲ್ಲ, ಉಳಿದ ಬಂಧನಗಳನ್ನೆಲ್ಲಾ ಸಂಪೂರ್ಣ ಖಂಡಿಸುವುದು.

ನಿಜವಾದ ಭಕ್ತನಿಗೆ ಪರಾಜ್ಞಾನ ಮತ್ತು ಪರಾಭಕ್ತಿ ಎರಡು ಒಂದೇ

ಉಪನಿಷತ್ತಿನಲ್ಲಿ ಪರಾ ಮತ್ತು ಅಪರಾ ವಿದ್ಯೆ ಎಂದು ವ್ಯತ್ಯಾಸ ವಿದೆ. ಆದರೆ ಭಕ್ತನಿಗೆ ಪರಾಜ್ಞಾನಕ್ಕೂ ಪರಾಭಕ್ತಿಗೂ ಯಾವ ವ್ಯತ್ಯಾಸವೂ ಇಲ್ಲ. ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳುವರು: "ಎರಡು ವಿದ್ಯೆಯನ್ನು ತಿಳಿಯತಕ್ಕದೆಂದು ಬ್ರಹ್ಮಜ್ಞಾನಿಗಳು ಹೇಳುವರು. ಪರಾ ವಿದ್ಯೆ ಮತ್ತು ಅಪರಾವಿದ್ಯೆ ಇವೇ ಎರಡು. ಅಪರಾವಿದ್ಯೆ ಎಂದರೆ ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದ ಶಿಕ್ಷಿಕಲ್ಪ ವ್ಯಾಕರಣ ನಿರುಕ್ತ ಛಂದಸ್ಸು, ಜ್ಯೋತಿಷ್ಯ ಇವು. ಪರಾವಿದ್ಯೆ ಎಂದರೆ ಯಾವುದರಿಂದ ನಾಶರಹಿತವಾದುದನ್ನು ಅರಿಯಬಹುದೋ ಅದು." ಬ್ರಹ್ಮಜ್ಞಾನವೇ ಪರಾವಿದ್ಯೆ ಎಂಬುದನ್ನು ತೋರಿದ ಹಾಗಾಯಿತು. ಪರಾಭಕ್ತಿಯ ವಿಷಯವಾಗಿ ದೇವೀಭಾಗವತ ಈ ವಿವರಣೆಯನ್ನು ಕೊಡುವುದು. "ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಎಣ್ಣೆಯನ್ನು ಸುರಿದಾಗ ಹೇಗೆ ಅವಿಚ್ಛಿನ್ನಧಾರೆಯಂತೆ ಇರುವುದೋ ಹಾಗೆ ಮನಸ್ಸು ನಿರಂತರವಾಗಿ ಭಗವಂತನನ್ನು ಚಿಂತಿಸುತ್ತಿದ್ದರೆ ಅದೇ ಪರಾಭಕ್ತಿ." ಅವಿಚ್ಛಿನ್ನವಾದ ನಿರಂತರವಾದ ಅಗಲಿಕೆ ಅರಿಯದ ಆಸಕ್ತಿಯಿಂದ ಮನೋಬುದ್ಧಿಗಳ ಮೂಲಕ ಭಗವಂತನನ್ನು ಚಿಂತಿಸುತ್ತಿರುವುದೇ ಭಕ್ತಿ; ಭಗವಂತನನ್ನೇ ಚಿಂತಿಸ.ತ್ತಿರುವ ಶ್ರೇಷ್ಠಪ್ರೇಮದ ಆವಿರ್ಭಾವನೆ. ಉಳಿದ ಭಕ್ತಿಯೆಲ್ಲ ಪರಾಭಕ್ತಿಯನ್ನು ಪಡೆಯುವುದಕ್ಕೆ ಸನ್ನಾಹ ಮಾತ್ರ. ಇದನ್ನೇ "ರಾಗಾನುಗ" ಭಕ್ತಿ ಎನ್ನುವರು. ಅಂದರೆ ಭಗವಂತನ ಮೇಲೆ ಅನುರಾಗನನ್ನು ಪಡೆದನಂತರ ಬರುವುದು ಎಂದು. ಒಮ್ಮೆ ಈ ಪರಾಭಕ್ತಿ ಮಾನವನಿಗೆ ಪ್ರಾಪ್ತವಾಯಿತೆಂದರೆ ಅವನ ಮನಸ್ಸು ಅನವರತವೂ ಭಗವಂತನನ್ನೆ ಕುರಿತು ಚಿಂತಿಸುತ್ತಿರುವುದು, ಮತ್ತಾವುದನ್ನೂ ಜ್ಞಾಪಿಸಿಕೊಳ್ಳುವುದೇ ಇಲ್ಲ. ಭಗವಂತನಿಲ್ಲದ ಅನ್ಯ ವಿಷಯಗಳಿಗೆ ಅವನ ಮನಸ್ಸಿನಲ್ಲಿ ಎಡೆಗೊಡುವುದಿಲ್ಲ. ಅವನ ಮನಸ್ಸು ಮತ್ತಾವ ಪ್ರಲೋಭನೆಗೂ ಒಳಗಾಗದೆ ಪರಿಶುದ್ಧವಾಗಿರುವುದು. ಇದೇ ಅವನ ಆಧ್ಯಾತ್ಮಿಕ ಮತ್ತು ಆದಿಭೌತಿಕ ಬಂಧನಗಳನ್ನೆಲ್ಲಾ ತೊಡೆದುಹಾಕುವುದು. ಅವನು

ಮಾತ್ರ ಭಗವಂತನನ್ನು ತನ್ನ ಹೃದಯ ಗಹ್ವರದಲ್ಲಿ ಪೂಜಿಸಬಲ್ಲ. ಅವನಿಗೆ ಆಕಾರ, ಚಿಹ್ನೆ, ಶಾಸ್ತ್ರ, ಸಿದ್ಧಾಂತಗಳೆಲ್ಲಾ ಅನಾವಶ್ಯಕ; ಯಾವ ವಿಧದಿಂದಲೂ ಅವನಿಗೆ ನೆರವಾಗಲಾರವು. ಭಗವಂತನನ್ನು ಹೀಗೆ ಆರಾಧಿಸುವುದು ಸುಲಭವಲ್ಲ. ಸಾಧಾರಣ ಪ್ರೀತಿ ಎಲ್ಲಿ ತನಗೆ ಪ್ರತಿಫಲ ದೊರಕುವುದೋ ಅಲ್ಲಿ ಮಾತ್ರ ವೃದ್ಧಿಯಾಗುವುದನ್ನು ನೋಡುವೆವು. ಎಲ್ಲಿ ಪ್ರೀತಿಗೆ ಪ್ರೀತಿ ದೊರಕುವುದಿಲ್ಲವೊ ಅಲ್ಲಿ ಬರೀ ಔದಾಸೀನ್ಯವೇ ಇರುವುದು. ಮರುಪ್ರೀತಿ ದೊರಕದಿದ್ದರೂ ಪ್ರೀತಿಸುತ್ತಿರುವ ಕೆಲವು ಅಪರೂಪ ನಿದರ್ಶನಗಳಿವೆ. ಪತಂಗಕ್ಕೆ ದೀಪದಮೇಲೆ ಇರುವ ಪ್ರೀತಿ ಯನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು. ಪತಂಗ ಉರಿಯನ್ನು ಪ್ರೀತಿಸುವುದು, ಅದರಲ್ಲಿ ಬಿದ್ದು ಪ್ರಾಣಬಿಡುವುದ. ಹೀಗೆ ಪ್ರೀತಿಸು ವುದೇ ಅದರ ಸ್ವಭಾವ. ಪ್ರೀತಿಯ ಸ್ವಭಾವವೇ ಪ್ರೀತಿಸುವುದೆಂದು ಅರಿತು ಪ್ರೀತಿಸುವುದೇ ಪ್ರಪಂಚದಲ್ಲಿ ನಮಗೆ ಕಾಣುವ ನಿಸ್ವಾರ್ಥಪ್ರೇಮದ ನಿರ್ವಿ ವಾದವಾದ ಶ್ರೇಷ್ಠ ಉದಾಹರಣೆ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರೇಮ ಹೀಗೆ ವ್ಯಕ್ತವಾದರೆ ಪರಾಭಕ್ತಿ ಲಭಿಸುವುದು.

ಪ್ರೇಮ ತ್ರಿಭುಜ

ಪ್ರೇಮವನ್ನು ನಾವು ಒಂದು ತ್ರಿಭುಜಕ್ಕೆಹೋಲಿಸಬಹುದು. ಅದರ ಒಂದೊಂದು ಕೋಣವೂ ಒಂದೊಂದು ಅಸಾಧಾರಣ ಗುಣಕ್ಕೆ ನಿದರ್ಶನ ವಾಗಿದೆ. ತ್ರಿಕೋಣವಿಲ್ಲದೆ ತ್ರಿಭುಜವಿರಲಾರದು. ಮುಂದೆ ಬರುವ ಮೂರು ಲಕ್ಷಣಗಳಿಲ್ಲದೆ ನಿಜವಾದ ಪ್ರೇಮವಿರಲಾರದು. ಪ್ರೇಮ ತ್ರಿಭು ಜದ ಪ್ರಥಮ ಕೋಣವೇ ಪ್ರೇಮಕ್ಕೆ ವ್ಯಾಪಾರ ದೃಷ್ಟಿ ಇಲ್ಲ ಎನ್ನುವುದು. ಪ್ರೇಮಕ್ಕೆ ಬದಲಾಗಿ ಮತ್ತೇನನ್ನಾದರೂ ನಿರೀಕ್ಷಿಸಿದರೆ ಅಲ್ಲಿ ನಿಜವಾದ ಪ್ರೇಮವಿರಲಾರದು. ಅದೊಂದು ವ್ಯಾಪಾರವಾಗುವುದು. ದೇವರಿಗೆ ನಾವು ತೋರುವ ಗೌರವ ಭಕ್ತಿಗಳಿಗೆ ಬದಲಾಗಿ ದೇವರಿಂದ ಯಾವು ದಾದರೂ ಸೌಲಭ್ಯಗಳನ್ನು ನಾವು ನಿರೀಕ್ಷಿಸುವ ಸ್ವಭಾವವಿದ್ದರೆ ಅಲ್ಲಿಯ ವರೆಗೂ ನಿಜವಾದ ಪ್ರೇಮ ನಮ್ಮ ಹೃದಯದಲ್ಲಿ ಇನ್ನೂ ಉದಿಸಿಲ್ಲ. ದೇವರು ತಮಗೆ ವರವನ್ನು ಅನುಗ್ರಹಿಸಬೇಕೆಂದು ಯಾರು ಅವನನ್ನು

ಪೂಜಿಸುವರೊ ಅವರು ಅವನಿಂದ ಆ ವರ ದೊರಕದೆ ಇದ್ದರೆ ಪೂಜಿಸುವುದಿಲ್ಲ. ದೇವರು ಪ್ರೀತಿಗೆ ಯೋಗ್ಯ ಎಂದು ಮಾತ್ರ ಭಕ್ತರು ಅವನನ್ನು ಪ್ರೀತಿಸುವರು. ನಿಜವಾದ ಭಕ್ತನ ಮನಸ್ಸಿನಲ್ಲಿ ಮತ್ತಾವ ಉದ್ದೇಶವೂ ಇರುವುದಿಲ್ಲ. ಪ್ರಖ್ಯಾತ ರಾಜನೊಬ್ಬ ಕಾಡಿಗೆ ಹೋದಾಗ ಒಬ್ಬ ಋಷಿಯನ್ನು ಕಂಡ ಪ್ರಸಂಗ ಒಂದಿದೆ. ರಾಜ ಋಷಿಯೊಡನೆ ಕೆಲವು ಕಾಲ ಮಾತನಾಡಿದಮೇಲೆ ಅವನ ಜ್ಞಾನ ಮತ್ತು ಪವಿತ್ರತೆಯನ್ನು ಕಂಡು ಮೆಚ್ಚಿದನು. ತನ್ನಿಂದ ಯಾವುದಾದರೂ ಬಹುಮಾನವನ್ನು ಸ್ವೀಕರಿಸಿ ಅನುಗ್ರಹಿಸಬೇಕೆಂದು ರಾಜ ಋಷಿಯನ್ನು ಬೇಡಿಕೊಂಡನು. ಋಷಿ ಇದಕ್ಕೆ ಗಮನಕೊಡಲಿಲ್ಲ. " ಕಾನನದ ಕಂದಮೂಲಗಳೆ ಸಾಕು ನನ್ನ ಆಹಾರಕ್ಕೆ. ಬೆಟ್ಟದಿಂದ ಹರಿಯುತ್ತಿರುವ ತಿಳಿನೀರಿನ ಹೊಳೆ ಕುಡಿಯಲು ಸಾಕಾದಷ್ಟು ನೀರನ್ನು ನನಗೆ ಒದಗಿಸುವುದು. ಮರದ ನಾರೇ ನನಗೆ ಬೇಕಾದ ಬಟ್ಟೆಬರೆಯನ್ನು ಒದಗಿಸುವುದು. ಬೆಟ್ಟದ ಗುಹೆಯೆ ನನ್ನ ವಾಸದ ಮನೆ. ನಿನ್ನಿಂದ ಅಥವಾ ಮತ್ತಾರಿಂದಲಾದರೂ ನಾನು ಬಹುಮಾನವನ್ನು ಏತಕ್ಕೆ ಸ್ವೀಕರಿಸಬೇಕು ? " ಎಂದನು. " ಕೇವಲ ನನ್ನನ್ನು ಅನುಗ್ರಹಿಸುವುದಕ್ಕೆ ಏನನ್ನಾದರೂ ನನ್ನ ಕೈಯಿಂದ ಸ್ವೀಕರಿಸಿ; ದಯವಿಟ್ಟು ನಗರದಲ್ಲಿರುವ ಅರಮನೆಗೆ ಬನ್ನಿ '' ಎಂದು ಕೇಳಿಕೊಂಡನು. ದೊರೆ ಬಹಳ ಒತ್ತಾಯಮಾಡಿದ ಮೇಲೆ ಋಷಿ ರಾಜನ ಇಚ್ಛೆಯನ್ನು ನೆರವೇರಿಸಲು ಒಪ್ಪಿಕೊಂಡು ಅವನೊಡನೆ ಅರಮನೆಗೆ ಹೋದನು. ಋಷಿಗೆ ಬಹುಮಾನವನ್ನು ಕೊಡುವುದಕ್ಕೆ ಮುಂಚೆ ರಾಜ ದೇವರನ್ನು ಹೀಗೆ ಪ್ರಾರ್ಥಿಸಿದನು: " ದೇವರೆ, ನನಗೆ ಮತ್ತೂ ಹೆಚ್ಚು ಪುತ್ರ ಸೌಭಾಗ್ಯವನ್ನು ಕರುಣಿಸು, ಐಶ್ವರ್ಯ ನೀಡು, ಹೆಚ್ಚು ರಾಜ್ಯವನ್ನು ವಿಸ್ತರಿಸು, ಉತ್ತಮವಾದ ಅರೋಗ್ಯಭಾಗ್ಯವನ್ನು ಅನುಗ್ರಹಿಸು " ಇತ್ಯಾದಿ ಬೇಡಿಕೆಗಳನ್ನು ದೇವರಿಗೆ ಸಲ್ಲಿಸಿದನು. ರಾಜ ಪ್ರಾರ್ಥನೆ ಮುಗಿಸುವುದಕ್ಕೆ ಮುಂಚೆ ಋಷಿ ಎದ್ದು ಕೋಣೆಯಿಂದ ನಿಶ್ಯಬ್ದವಾಗಿ ಹೊರಗೆ ಬಂದನು. ಇದನ್ನು ನೋಡಿ ರಾಜನಿಗೆ ವ್ಯಾಕುಲವಾಗಿ ಋಷಿಯನ್ನು ಅನುಸರಿಸಿ " ಪೂಜ್ಯರೆ, ಯಾವ ಬಹುಮಾನವನ್ನೂ ಸ್ವೀಕರಿಸದೆ ಆಗಲೆ ಹೊರಟು ಹೋಗುತ್ತಿರುವಿರಲ್ಲ ? '' ಎಂದು ಕೂಗಿಕೊಂಡನು. ಋಷಿ ಹಿಂತಿರುಗಿ ಹೀಗೆ ಹೇಳಿದನು : " ನಾನು ಭಿಕ್ಷುಕರನ್ನು ಬೇಡುವುದಿಲ್ಲ. ನೀನು ಭಿಕ್ಷುಕನಿಗಿಂತ ಮೇಲಲ್ಲ. ನೀನು ನನಗೆ ಏನನ್ನು ಕೊಡಬಲ್ಲೆ ? ನಿನ್ನಂಥ

ಭಿಕ್ಷುಕನಿಂದ ಬಹುಮಾನವನ್ನು ಸ್ವೀಕರಿಸುವಷ್ಟು ದಡ್ಡ ನಾನಲ್ಲ. ನೀನು ಹಿಂತಿರುಗು. ನನ್ನ ಹಿಂದೆ ಬರಬೇಡ."

ಬರೀ ಭಿಕ್ಷುಕರಿಗೂ ನಿಜವಾದ ಭಕ್ತರಿಗೂ ಇರುವ ವ್ಯತ್ಯಾಸವನ್ನು ಮೇಲಿನ ಕಥೆ ವಿವರಿಸುವುದು. ಬೇಡುವುದಲ್ಲ ಪ್ರೇಮದ ಭಾಷೆ. ದೇವರನ್ನು ಮುಕ್ತಿ ಅಥವಾ ಮತ್ತಾವುದಾದರೂ ವಸ್ತುಗಳನ್ನು ಬೇಡುವುದು ಕೂಡ ಅಷ್ಟೇ ಹೀನವಾದುದು. ಪ್ರೀತಿ ಯಾವ ಪ್ರತಿಫಲವನ್ನೂ ಆಶಿಸುವುದಿಲ್ಲ. ಪ್ರೀತಿಗಾಗಿ ಪ್ರೀತಿ. ಯಾವಾಗಲೂ ಭಕ್ತ ಪ್ರೀತಿಸುವನು, ಏಕೆಂದರೆ ಪ್ರೀತಿಸದೆ ಅವನಿಗೆ ವಿಧಿಯಿಲ್ಲ. ನೀನೊಂದು ಸುಂದರ ದೃಶ್ಯವನ್ನು ನೋಡಿ ಅದನ್ನು ಪ್ರೀತಿಸಿದರೆ ಆ ದೃಶ್ಯದಿಂದ ನೀನಾವ ಪ್ರತಿಫಲವನ್ನೂ ಕೇಳುವುದಿಲ್ಲ; ಅಥವಾ ದೃಶ್ಯ ನಿನ್ನಿಂದ ಏನನ್ನೂ ನಿರೀಕ್ಷಿಸುವುದೂ ಇಲ್ಲ. ಆದರೂ ದೃಶ್ಯ ನಿನ್ನನ್ನು ಒಂದು ಧನ್ಯತಾ ಸ್ಥಿತಿಗೆ ಒಯ್ಯುವುದು. ಮನಸ್ಸಿನ ಘರ್ಷಣವನ್ನು ತಗ್ಗಿಸುವುದು, ಶಾಂತಿ ನೀಡುವುದು, ತಾತ್ಕಾಲಿಕ ವಾಗಿ ಆದರೂ ನಿನ್ನನ್ನು ದೇಹಾಭಿಮಾನದಿಂದ ಮೇಲೆತ್ತಿ ಭಗವದಾ ನಂದದ ಸವಿಯನ್ನು ನೀಡುವುದು. ಈ ಬಗೆಯ ನಿಜವಾದ ಪ್ರೀತಿಯೆ ತ್ರಿಭುಜದ ಪ್ರಥಮ ಕೋಣ. ನಿಮ್ಮ ಪ್ರೇಮಕ್ಕೆ ಪ್ರತಿಯಾಗಿ ಏನನ್ನೂ ಕೋರಬೇಡಿ. ನಿಮ್ಮ ಸ್ಥಿತಿ ಯಾವಾಗಲೂ ಕೊಡುವವನದಾಗಿರಲಿ. ನಿಮ್ಮ ಪ್ರೀತಿಯನ್ನು ದೇವರಿಗೆ ಕೊಡಿ. ಆದರೆ ಅವನಿಂದಲೂ ಏನನ್ನೂ ಆಶಿಸಬೇಡಿ.

ಪ್ರೇಮ ತ್ರಿಭುಜದ ಎರಡನೆ ಕೋಣವೇ ಪ್ರೀತಿಗೆ ಅಂಜಿಕೆ ಇಲ್ಲ. ಅಂಜಿಕೆಯಿಂದ ದೇವರನ್ನು ಪ್ರೀತಿಸುವವರು ಅತಿ ಕೀಳುವರ್ಗದ ಮಾನ ವರು. ಅವರಿನ್ನೂ ನಿಜವಾದ ಮಾನವ ಸ್ಥಿತಿಗೆ ಬಂದಿಲ್ಲ. ದೇವರು ಎಲ್ಲಿ ನಮ್ಮನ್ನು ಶಿಕ್ಷಿಸುವನೋ ಎಂಬ ಅಂಜಿಕೆಯಿಂದ ಅವರು ದೇವರನ್ನು ಪ್ರೀತಿ ಸುವರು. ಅವರ ಪಾಲಿಗೆ ದೇವರೊಬ್ಬ ದೊಡ್ಡ ಅಧಿಕಾರಿ. ಒಂದು ಕೈಯಲ್ಲಿ ಶಿಕ್ಷಿಸುವುದಕ್ಕೆ ಚಾವಟಿ ಮತ್ತೊಂದು ಕೈಯಲ್ಲಿ ರಾಜದಂಡವಿದೆ. ಅವನ ಮಾತನ್ನು ಕೇಳದೆ ಇದ್ದರೆ ಅವನೆಲ್ಲಿ ಶಿಕ್ಷಿಸುವನೋ ಎಂಬ ಭಯ ಅವರಿಗಿದೆ. ಶಿಕ್ಷೆಯ ಭಯದಿಂದ ದೇವರನ್ನು ಪ್ರೀತಿಸುವುದು ಅತಿ ಹೀನವಾದುದು. ಇದನ್ನೇನಾದರೂ ಪೂಜೆ ಎನ್ನಬೇಕಾದರೆ ಕನಿಷ್ಟತಮಪ್ರೇಮಕ್ಕೆ ಉದಾ ಹರಣೆ ಇದು. ಎಲ್ಲಿಯವರೆಗೆ ಅಂಜಿಕೆ ಎಂಬುದಿದೆಯೊ ಅಲ್ಲಿಯವರೆಗೆ ಪ್ರೀತಿ ಕೂಡ ಹೇಗೆ ಇರಬಲ್ಲದು? ಪ್ರೇಮ ಎಲ್ಲಾ ಅಂಜಿಕೆಯನ್ನೂ

ಜಯಿಸುವುದು ದಾರಿಯಲ್ಲಿ ಹೋಗುತ್ತಿರುವ ಚಿಕ್ಕ ತಾಯನ್ನು ನೋಡಿ. ಒಂದು ನಾಯಿ ಬಗುಳಿದರೂ ಅಂಜುವಳವಳು. ಹತ್ತಿರವಿರುವ ಮನೆಗೆ ಓಡುವಳು. ಮಾರನೆದಿನ ಅವಳು ಅದೇ ಬೀದಿಯಲ್ಲಿ ತನ್ನ ಮಗುವಿನೊಂದಿಗೆ ಹೋಗುತ್ತಿರುವಾಗ ಸಿಂಹ ಬಂದು ಅವಳ ಮಗುವಿನಮೇಲೆ ಬಿದ್ದಿತೆಂದು ಭಾವಿಸಿ. ಈಗ ಅವಳು ಎಲ್ಲಿರುವಳು ಎಂದು ತಿಳಿದಿರಿ. ಮಗುವನ್ನು ಸಂರಕ್ಷಿಸುವುದಕ್ಕಾಗಿ ಸಿಂಹದ ಬಾಯಿಯಲ್ಲಿ ಹೋರಾಡುತ್ತಿರುವಳು. ಪ್ರೇಮ ಅಂಜಿಕೆಯನ್ನೆಲ್ಲಾ ಜಯಿಸುವುದು. ವಿಶ್ವದಿಂದ ತಾನೇ ಬೇರೆ ಎಂಬ ಸ್ವಾರ್ಥ ಭಾವನೆ ಕಲ್ಪಿಸಿಕೊಳ್ಳುವುದರಿಂದ ಅಂಜಿಕೆ ಬರುವುದು. ನಾನು ಹೆಚ್ಚು ಸ್ವಾರ್ಥಿಯಾದಷ್ಟೂ, ಅಲ್ಪನಾದಷ್ಟೂ ನನ್ನ ಅಂಜಿಕೆಯೂ ಹೆಚ್ಚು. ಮನುಷ್ಯ ತಾನು ಅಲ್ಪ, ಕೆಲಸಕ್ಕೆ ಬಾರದವನು ಎಂದು ಭಾವಿಸಿದರೆ ನಿಜವಾಗಿಯೂ ಅಂಜಿಕೆ ಅವನಿಗೆ ಬರುವುದು. ನಾನು ಅಯೋಗ್ಯ ಎಂದು ನೀನು ಎಷ್ಟು ಕಡಿಮೆ ಭಾವಿಸುವೆಯೋ ಅಷ್ಟು ಅಂಜಿಕೆ ನಿನ್ನಲ್ಲಿ ಕಡಿಮೆ ಇರುವುದು. ನಿನ್ನಲ್ಲಿ ಅಂಜಿಕೆ ಲವಲೇಶವಿದ್ದರೂ ಅಲ್ಲಿ ಪ್ರೇಮವಿರಲಾರದು. ಪ್ರೇಮ ಮತ್ತು ಅಂಜಿಕೆ ಎರಡೂ ಏಕಕಾಲದಲ್ಲಿ ಇರಲಾರದು. ಯಾರು ದೇವರನ್ನು ಪ್ರೀತಿಸುವರೋ ಅವರು ಎಂದಿಗೂ ದೇವರಿಗೆ ಅಂಜುವುದಿಲ್ಲ. "ವೃಥಾ ದೇವರ ಹೆಸರನ್ನು ಉಚ್ಚರಿಸಬೇಡ" ಎಂಬ ಶಾಸ್ತ್ರ ನಿಷೇಧವನ್ನು ನೋಡಿ ನಿಜವಾದ ಭಕ್ತ ನಗುವನು. ಪ್ರೇಮ ಧರ್ಮದಲ್ಲಿ ದೇವದೂಷಣೆ ಎಲ್ಲಿರುವುದು. ನೀನು ಎಷ್ಟು ದೇವರ ಚಿಂತನೆ ಮಾಡಿದರೆ ಅಷ್ಟು ಒಳ್ಳೆಯದು. ನೀನು ಅದನ್ನು ಯಾವ ರೀತಿ ಬೇಕಾದರೂ ಮಾಡಬಹುದು. ನೀನು ಅವನನ್ನು ಪ್ರೀತಿಸುತ್ತಿರುವುದರಿಂದ ಮಾತ್ರ ಅವನ ನಾಮವನ್ನು ಉಚ್ಚರಿಸುತ್ತಿವೆ.

ಪ್ರೇಮ ತ್ರಿಭುಜದ ಮೂರನೆ ಕೋಣವೆ ಪ್ರೇಮಕ್ಕೆ ಪ್ರತಿಕಕ್ಷಿ ಇಲ್ಲ ಎಂಬುದು. ಏಕೆಂದರೆ ಭಕ್ತನ ಆರಾಧನೆಯ ಮೂರ್ತಿಯಲ್ಲಿ ಅವನ ಶ್ರೇಷ್ಠತಮ ಆದರ್ಶ ನೆಲಸಿದೆ. ನಮ್ಮ ಪ್ರೇಮದ ಆದರ್ಶವೆ ಶ್ರೇಷ್ಠತಮವಾಗುವವರೆಗೆ ನಿಜವಾದ ಪ್ರೇಮ ಬರುವುದಿಲ್ಲ. ಮಾನವ ಪ್ರೇಮ ಅನೇಕವೇಳೆ ತಪ್ಪುದಾರಿಗೆ ಹೋಗಿ ಅಯೋಗ್ಯವಸ್ತುಗಳಮೇಲೆ ನೆಲಸುವುದೂ ಉಂಟು. ಆದರೆ ಪ್ರೀತಿಸುವವನಿಗೆ ಅವನು ಪ್ರೀತಿಸುವ ವಸ್ತುವೇ ಶ್ರೇಷ್ಠತಮ ಆದರ್ಶವಾಗಿರುವುದು. ಒಬ್ಬನಿಗೆ ತನ್ನ ಆದರ್ಶ ಅತಿ ನೀಚನಲ್ಲಿ ತೋರಬಹುದು. ಏನಾದರೂ ಆಗಲಿ, ಪ್ರತಿಯೊಂದು ಕಡೆಯೂ

ಆದರ್ಶವನ್ನು ಮಾತ್ರ ನಿಜವಾಗಿ ಉತ್ಕಟವಾಗಿ ಪ್ರೀತಿಸಬಹುದು. ಪ್ರತಿಯೊಂದು ಜೀವಿಯ ಶ್ರೇಷ್ಠತಮ ಆದರ್ಶವನ್ನೇ ದೇವರು ಎನ್ನುವುದು. ದಡ್ಡನಾಗಲಿ, ಬುದ್ಧಿವಂತನಾಗಲಿ, ಯತಿಯಾಗಲಿ, ಪಾಪಿಯಾಗಲಿ, ಸ್ತ್ರೀಯಾಗಲಿ, ಪುರುಷನಾಗಲಿ, ಅಕ್ಷರಸ್ತನಾಗಿರಲಿ, ಅನಕ್ಷರಸ್ತನಾಗಿರಲಿ, ಸುಂಸ್ಕೃತನಾಗಿರಲಿ, ಅಸಂಸ್ಕೃತನಾಗಿರಲಿ ಪ್ರತಿಯೊಬ್ಬರಿಗೂ ಶ್ರೇಷ್ಠತಮ ಆದರ್ಶವೇ ದೇವರು. ಸೌಂದರ್ಯ ಭವ್ಯತೆ ಶಕ್ತಿಯ ಆದರ್ಶದ ಪರಾಕಾಷ್ಠತೆಯೆಲ್ಲ ಎಲ್ಲಿ ಒಂದೆಡೆ ಸೇರಿದೆಯೋ ಅದೇ ನಮ್ಮನ್ನು ಪ್ರೀತಿಸುವ ಮತ್ತು ನಾವು ಪ್ರೀತಿಸುವುದಕ್ಕೆ ಯೋಗ್ಯನಾದ ದೇವರ ಪೂರ್ಣ ಆದರ್ಶವನ್ನು ನೀಡಬಲ್ಲುದು. ಸ್ವಾಭಾವಿಕವಾಗಿ ಪ್ರತಿಯೊಬ್ಬರಲ್ಲಿಯೂ ಯಾವುದಾದರೂ ಒಂದು ರೀತಿಯಲ್ಲಿ ಈ ಆದರ್ಶ ಇದ್ದೇ ಇರುವುದು. ಇದು ನಮ್ಮೆಲ್ಲರ ಮನಸ್ಸಿನ ಒಂದು ಅಂಶವಾಗಿರುವುದು. ಮನುಷ್ಯನಲ್ಲಿ ವ್ಯಕ್ತವಾಗುವ ಪ್ರವೃತ್ತಿ ಈ ಆದರ್ಶವನ್ನು ವ್ಯವಹಾರದ ಅನುಭವಕ್ಕೆ ತರುವ ಉದ್ದೇಶದಿಂದ ಪ್ರೇರಿತವಾದ ಪ್ರಯತ್ನಗಳ. ಸಮಾಜದಲ್ಲಿ ನಮಗೆ ಕಾಣುವ ಚಲನವಲನಗಳ ಹಿಂದೆಯೂ ಹಲವು ಜೀವಿಗಳಲ್ಲಿ ಹಲವು ಆದರ್ಶಗಳು ವ್ಯಕ್ತವಾಗಿ ಕಾರ್ಯಕಾರಿಯಾಗುವ ಪ್ರಯತ್ನಗಳು. ಯಾವುದು ಅಂತರಾಳದಲ್ಲಿದೆಯೋ ಅದೇ ಹೊರಗೆ ಬರುವುದಕ್ಕೆ ನೂಕುತ್ತಿರುತ್ತದೆ. ಎಂದಿಗೂ ಬತ್ತದ ಆದರ್ಶದ ಮುಖ್ಯ ಪ್ರಭಾವ, ಅದರ ಶಕ್ತಿ ಮತ್ತು ಪ್ರೇರಣೆಯೆ, ಮಾನವನಲ್ಲಿ ಸದಾ ಕೆಲಸಮಾಡುತ್ತಿರುವುದು. ನೂರಾರು ಜನ್ಮಗಳಾದಮೇಲೆ, ಸಹಸ್ರಾರು ಜನ್ಮಗಳು ಹೋರಾಡಿದಮೇಲೆ, ನಮ್ಮ ಹೃದಯಾಂತರಾಳದಲ್ಲಿರುವ ಆದರ್ಶದಿಂದ ಬಾಹ್ಯ ವಾತಾವರಣವನ್ನು ಬದಲಾಯಿಸಿ ನಮಗೆ ತಕ್ಕಂತೆ ಅದನ್ನು ಹೊಂದಿಸಿಕೊಳ್ಳುವಂತೆ ಮಾಡುವುದು ಸಾಧ್ಯವಿಲ್ಲ ಎಂಬುದನ್ನು ಅರಿಯುವನು. ಇದನ್ನು ಅರಿತಮೇಲೆ ತನ್ನ ಆದರ್ಶವನ್ನು ಬಾಹ್ಯ ಜಗತ್ತಿನಮೇಲೆ ಆರೋಪಿಸುವುದನ್ನು ಬಿಟ್ಟು ಪರಾಪ್ರೇಮದ ದೃಷ್ಟಿಯಿಂದ ಆದರ್ಶವನ್ನು ಆದರ್ಶದಂತೆಯೇ ಪ್ರೀತಿಸುವನು.

ಪರಿಪೂರ್ಣ ಆದರ್ಶದಲ್ಲಿ ಉಳಿದ ಸಣ್ಣ ಸಣ್ಣ ಆದರ್ಶಗಳೆಲ್ಲಾ ಸೇರಿರುತ್ತವೆ. ಪ್ರಣಯಿ ತನ್ನ ಪ್ರಿಯಳು ಎಷ್ಟೇ ಕುರೂಪಿಯಾಗಿದ್ದರೂ ಅವಳನ್ನು ರತಿಯಂತೆ ಭಾವಿಸುವನೆನ್ನುವ ಸತ್ಯವನ್ನು ಎಲ್ಲರೂ ಒಪ್ಪುವರು. ಸಾಕ್ಷಿಯಂತೆ ಅನಾಸಕ್ತಿಯಿಂದ ನಿಂತು ನೋಡುತ್ತಿರುವವನು, ಪ್ರಣಯಿ

ತನ್ನ ಪ್ರೇಮವನ್ನು ಅಯೋಗ್ಯವಸ್ತುವಿನಮೇಲೆ ಇಟ್ಟಿರುವನೆಂಬುದನ್ನು ಅರಿಯುವನು. ಆದರೆ ಪ್ರಣಯಿಗೆ ಅಲ್ಲಿ ಸಾಕ್ಷಾತ್ ರತಿಯೆ ಕಾಣುವುದು. ಕುರೂಪ ವಸ್ತು ಅಲ್ಲ. ಅವಳೇನು ಕುರೂಪಿಯೋ ಅಥವಾ ಲಾವಣ್ಯದ ಖನಿಯೋ ಏನಾದರೂ ಆಗಲಿ ನಾವು ಪ್ರೀತಿಸುವ ವಸ್ತುವೇ ನಮ್ಮ ಆದರ್ಶ ರೂಪುಗೊಳ್ಳುವುದಕ್ಕೆ ಕೇಂದ್ರ. ಸಾಧಾರಣವಾಗಿ ಪ್ರಪಂಚ ಪೂಜಿಸುವುದು, ಪರಮ ಭಕ್ತನ ಪರಮಪ್ರೇಮಿಯ ಸರ್ವವ್ಯಾಪಿಯಾದ ಪರಿಪೂರ್ಣ ಆದರ್ಶವನ್ನು ನಿಜವಾಗಿ ಅಲ್ಲ. ಪ್ರತಿಯೊಬ್ಬ ಸ್ತ್ರೀ ಪುರುಷರೂ ಪೂಜಿಸುವ ಆದರ್ಶವೇ ಯಾವುದು ತಮ್ಮ ಮನಸ್ಸಿನಲ್ಲಿದೆಯೋ ಅದು. ಪ್ರತಿಯೊಬ್ಬರೂ ತಮ್ಮಲ್ಲಿರುವ ಆದರ್ಶವನ್ನು ಹೊರಗೆ ಆರೋಪ ಮಾಡಿ ಅದರೆದುರಿಗೆ ಮಣಿಯುವರು. ಯಾರು ಕ್ರೂರಿಗಳೊ ಹಿಂಸಾಪರರೋ ಅವರು ಹಿಂಸಕನಾದ ದೇವರನ್ನೇ ಕಲ್ಪಿಸಿಕೊಳ್ಳುವರು. ಏಕೆಂದರೆ ಅವರು ತಮ್ಮ ದೃಷ್ಟಿಯಲ್ಲಿ ಯಾವುದು ಶ್ರೇಷ್ಠ ಆದರ್ಶವೋ ಅದನ್ನು ಮಾತ್ರ ಪ್ರೀತಿಸಬಲ್ಲರು. ಅವರ ಆದರ್ಶಕ್ಕೂ, ಇತರರ ಆದರ್ಶಕ್ಕೂ ಎಷ್ಟೋ ಅಂತರ ಉಂಟು.

ಪ್ರೇಮೇಶ್ವರನು ಸ್ವತಃ ಸಿದ್ಧನು

ಸ್ವಾರ್ಥತೆ ವ್ಯಾಪಾರದೃಷ್ಟಿ ಮತ್ತು ಅಂಜಿಕೆಯಿಂದ ಪಾರಾದ ಭಕ್ತನ ಆದರ್ಶವೆಂತಹುದು? ಇಂತಹ ಭಕ್ತ ದೇವರಿಗೆ ಕೂಡ "ನನ್ನ ಸರ್ವಸ್ವವನ್ನೂ ನಿನಗೆ ತೆರುವೆನು. ನಿನ್ನಿಂದ ನನಗೆ ಏನೂ ಬೇಕಾಗಿಲ್ಲ. ನನ್ನದು ಎಂದು ಹೇಳಿಕೊಳ್ಳುವುದಕ್ಕೆ ನಿಜವಾಗಿ ನನ್ನಲ್ಲಿ ಏನೂ ಇಲ್ಲ" ಎನ್ನುವನು. ಒಬ್ಬನಿಗೆ ಇದು ದೃಢಪಟ್ಟಿದ್ದರೆ ಅವನ ಆದರ್ಶ ಪರಮ ಪ್ರೇಮವಾಗುವುದು, ಸ್ವಲ್ಪವೂ ಅಂಜಿಕೆಯಿಲ್ಲದ ಪ್ರೇಮವಾಗುವುದು. ಇಂತಹ ಭಕ್ತನ ಪರಮಾದರ್ಶದಲ್ಲಿ ಒಂದನ್ನು ಕಂಡರೆ ಹೆಚ್ಚು ಪ್ರೀತಿ ಮತ್ತೊಂದನ್ನು ಅದಕ್ಕೆ ಕಡಿಮೆ ಎನ್ನುವ ಅಲ್ಪತೆ ಇರುವುದಿಲ್ಲ. ಇದು ವಿಶ್ವವ್ಯಾಪಿಯಾದ ಪ್ರೇಮ. ಅಸೀಮ ಅನಿರ್ಬಂಧ ಪ್ರೇಮ, ಪ್ರೀತಿ ನಿರುಪಾಧಿಕ ಪ್ರೀತಿಯೆ ಆಗಿರುವುದು. ಈ ಪ್ರೇಮದ ಪರಮಾದರ್ಶವನ್ನು ಯಾವ ವಿಗ್ರಹ ಅಥವಾ ಊಹೆಯ ಆಧಾರವಿಲ್ಲವೆ ನಿರುಪಾಧಿಕವಾಗಿ

ಭಕ್ತ ಪ್ರೀತಿಸುವನು ಮತ್ತು ಆರಾಧಿಸುವನು. ಇದೇ ಪರಾಭಕ್ತಿಯ ಪರಾಕಾಷ್ಠತೆ. ಎಲ್ಲವನ್ನೂ ಒಳಗೊಂಡಿರುವ ಆದರ್ಶವನ್ನು ಆದರ್ಶದಂತೆ ಪ್ರೀತಿಸುವುದು. ಇತರ ಭಕ್ತಿಗಳೆಲ್ಲಾ ಆದಕ್ಕೆ ಒಯ್ಯುವ ಮೆಟ್ಟಿಲಂತೆ. ಈ ಪ್ರೇಮಾದರ್ಶವನ್ನು ಅನುಸರಿಸುವಾಗ ಬರುವ ಸೋಲುಗೆಲುವುಗಳೆಲ್ಲ ಆ ಪರಮಾದರ್ಶವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೆ ಸಹಕಾರಿಯಾಗಿದೆ. ಒಂದು ವಿಷಯವಾದ ಮೇಲೆ ಮತ್ತೊಂದು ವಿಷಯವನ್ನು ತೆಗೆದುಕೊಂಡು ನಮ್ಮ ಮನದೊಳಗೆ ಇರುವ ಆದರ್ಶವನ್ನು ಒಂದಾದ ಮೇಲೆ ಒಂದನ್ನು ಅದರ ಮೇಲೆ ಆರೋಪಮಾಡುವೆವು. ಬಾಹ್ಯವಸ್ತುಗಳೆಲ್ಲ ಅನವರತ ವಿಸ್ತಾರವಾಗುತ್ತಿರುವ ಆಂತರಿಕ ಆದರ್ಶವನ್ನು ವ್ಯಕ್ತಗೊಳಿಸುವುದಕ್ಕೆ ಅಸಮರ್ಪಕವಾಗಿ ಅದನ್ನು ಒಂದಾದ ಮೇಲೊಂದನ್ನು ತಿರಸ್ಕರಿಸುವೆವು. ಕೊನೆಗೆ ಸಾಧಕ ಬಾಹ್ಯವಸ್ತುವಿನಲ್ಲಿ ತನ್ನ ಆದರ್ಶವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಅಸಾಧ್ಯವೆಂದು ಅರಿಯುವನು. ಆದರ್ಶದೊಂದಿಗೆ ಹೋಲಿಸಿದಾಗ ಬಾಹ್ಯವಸ್ತುಗಳಿಗೆ ಬೆಲೆಯೇ ಇರುವುದಿಲ್ಲ. ಕೊನೆಗೆ ಸರ್ವವ್ಯಾಪಿಯಾದ ಶ್ರೇಷ್ಠವಾದ ನಿರುಪಾಧಿಕ ಆದರ್ಶವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಶಕ್ತಿಯನ್ನು ಪಡೆಯುವನು. ಆದರ್ಶ ಅವನ ಪಾಲಿಗೆ ಸಜೀತನವಾಗಿರುವುದು, ಸತ್ಯವಾಗಿರುವುದು. ಭಕ್ತ ಈ ಸ್ಥಿತಿಗೆ ಬಂದಾಗ ದೇವರನ್ನು ತೋರಬಹುದೆ ಇಲ್ಲವೆ, ಅವನು ಸರ್ವಜ್ಞ ಸರ್ವಶಕ್ತ ಹೌದೆ ಅಲ್ಲವೆ ಎಂಬ ಪ್ರಶ್ನೆಯನ್ನು ಕೇಳುವುದಿಲ್ಲ. ಭಕ್ತನಿಗೆ ದೇವರು ಪ್ರೇಮೇಶ್ವರ. ದೇವರೇ ಪ್ರೇಮದ ಪರಮಾದರ್ಶ. ಭಕ್ತನಿಗೆ ಇಷ್ಟುಸಾಕು. ದೇವರು ಪ್ರೇಮದಂತೆ ಸ್ವತಃ ಸಿದ್ಧನಾಗಿರುವನು. ಭಕ್ತನಿಗೆ ಭಗವಂತನಿರುವನು ಎಂಬುದನ್ನು ತೋರುವುದಕ್ಕೆ ಯಾವ ಪ್ರಮಾಣವೂ ಬೇಕಾಗಿಲ್ಲ. ಇತರ ಧರ್ಮದಲ್ಲಿರುವ ನ್ಯಾಯಾಧಿಪತಿಯಂತೆ ಇರುವ ದೇವರನ್ನು ಸಮರ್ಥಿಸುವುದಕ್ಕೆ ಸಾಕಾದಷ್ಟು ಪ್ರಮಾಣಬೇಕು. ಆದರೆ ಭಕ್ತ ಅಂತಹ ದೇವರನ್ನು ಕುರಿತು ಯೋಚಿಸುವುದಿಲ್ಲ ಮತ್ತು ಯೋಚಿಸಲೂ ಆರ. ಅವನಿಗೆ ದೇವರು ಪ್ರೇಮವೇ ಆಗಿರುವನು. "ಪ್ರಿಯತಮೆ, ಆರೂ ಪತಿಯನ್ನು ಪತಿಗೋಸುಗ ಪ್ರೀತಿಸುವುದಿಲ್ಲ, ಪತಿಯಲ್ಲಿರುವ ಆತ್ಮನಿಗಾಗಿ ಪತಿಯನ್ನು ಪ್ರೀತಿಸುವರು. ಪ್ರಿಯತಮೆ, ಯಾರೂ ಸತಿಯನ್ನು ಸತಿಗೋಸುಗ ಪ್ರೀತಿಸುವುದಿಲ್ಲ, ಸತಿಯಲ್ಲಿರುವ ಆತ್ಮನಿಗಾಗಿ ಸತಿಯನ್ನು ಪ್ರೀತಿಸುವುದು." ಮಾನವನ ಕ್ರಿಯೆಗೆಲ್ಲ ಮೂಲಕಾರಣ ಸ್ವಾರ್ಥತೆ

ಎಂದು ಕೆಲವರು ಹೇಳುವರು. ಇದೂ ಕೂಡ ಅಧೋಗತಿಗೆ ಇಳಿದ ಸಂಕೋಚವಾದ ಪ್ರೇಮ. ನಾನೆ ಸಮಷ್ಟಿಯನ್ನು ಅರಿಯುತ್ತಿರುವೆ ಎಂದು ಭಾವಿಸಿದರೆ ಅಲ್ಲಿ ನಿಜವಾಗಿ ಯಾವ ಸ್ವಾರ್ಥತೆಯೂ ಇರಲಾರದು. ಆದರೆ ನಾನು ಭ್ರಾಂತಿಯಿಂದ ಅಲ್ಪಜೀವಿ ಎಂದು ಭಾವಿಸಿದರೆ ನನ್ನ ಪ್ರೇಮ ವಿಶೇಷವಾಗುವುದು, ಸಂಕೋಚವಾಗುವುದು. ನಮ್ಮ ಪ್ರೇಮ ವ್ಯಾಪಿಸುವ ಕ್ಷೇತ್ರವನ್ನು ಸಂಕೋಚಮಾಡಿ ಮಿತಿಮಾಡುವುದೇ ತಪ್ಪು. ವಿಶ್ವದಲ್ಲಿರುವ ಪ್ರತಿಯೊಂದು ವಸ್ತುವೂ ಭಗವಂತನಿಂದ ಬಂದಿದೆ. ಅವೆಲ್ಲ ಪ್ರೀತಿಗೆ ಯೋಗ್ಯವಾಗಿವೆ. ಆದರೆ ಸಮಷ್ಟಿಪ್ರೇಮದಲ್ಲಿ ವ್ಯಷ್ಟಿ ಪ್ರೇಮವೂ ಅಂತರ್ಗತವಾಗಿದೆ ಎಂಬುದನ್ನು ನಾವು ಮರೆಯಕೂಡದು. ಈ ಸಮಷ್ಟಿಯೇ ಭಕ್ತರ ದೇವರು. ಇತರ ದೇವದೇವತೆಗಳು, ಸ್ವರ್ಗದಲ್ಲಿರುವ ತಂದೆ. ಈಶ್ವರ, ಸೃಷ್ಟಿಕರ್ತ ಮುಂತಾದ ತತ್ತ್ವ ಸಿದ್ಧಾಂತ ಶಾಸ್ತ್ರ ಇವುಗಳಿಂದ ಯಾವ ಪ್ರಯೋಜನವೂ ಇಲ್ಲ, ಆವಶ್ಯಕತೆಯೂ ಇಲ್ಲ. ಅವರು ತಮ್ಮ ಪರಾಭಕ್ತಿ ಮತ್ತು ಪ್ರೇಮದ ಸಹಾಯದಿಂದ ಇವನ್ನೆಲ್ಲಾ ಅತಿಕ್ರಮಿಸಿ ಹೋಗಿರುವರು. ಚಿತ್ತಶುದ್ಧಿಯಾಗಿ ನಿರ್ಮಲವಾಗಿ ದಿವ್ಯಪ್ರೇಮಾಮೃತದಿಂದ ತುಂಬಿ ತುಳುಕಾಡುತ್ತಿರುವಾಗ ಇತರ ದೇವರ ಭಾವನೆಗಳು ನಿಸ್ಸಾರವಾಗಿ ಕಾಣುವುವು. ಇವು ಯೋಗ್ಯವಲ್ಲ ಅಥವಾ ಅಭಾವವನ್ನು ವ್ಯಕ್ತಪಡಿಸಲು ಸಮರ್ಥವಲ್ಲ ಎಂದು ತಿರಸ್ಕರಿಸುವರು. ನಿಜವಾಗಿ ಇದೇ ಪರಾಭಕ್ತಿಯ ಶಕ್ತಿ. ಪೂರ್ಣಭಕ್ತ ದೇವರನ್ನು ನೋಡುವುದಕ್ಕೆ ಇನ್ನು ಮೇಲೆ ದೇವಸ್ಥಾನ ಚರ್ಚು ಮುಂತಾದುವುಗಳಿಗೆ ಹೋಗುವುದಿಲ್ಲ. ದೇವರಿಲ್ಲದ ಸ್ಥಳವೇ ಅವನಿಗೆ ಇರುವುದಿಲ್ಲ. ಭಕ್ತ ದೇವರನ್ನು ದೇವಸ್ಥಾನದ ಒಳಗೆ ಮತ್ತು ಹೊರಗೆ ನೋಡುವನು. ಅವನು ದೇವರನ್ನು ಸಜ್ಜನನ ಸಾಧು ಸ್ವಭಾವದಲ್ಲಿಯೂ ದುರ್ಜನನ ದೌರ್ಜನ್ಯದಲ್ಲಿಯೂ ನೋಡುವನು. ಏಕೆಂದರೆ ಅವನಾಗಲೆ ಭಕ್ತನ ಹೃದಯದಲ್ಲಿ ಮಹಿಮಾನ್ವಿತವಾಗಿ ನಿರಂತರ ಪ್ರಕಾಶಿಸುತ್ತಿರುವ ಅನುಗಾಲವೂ ಇರುವ ಸರ್ವಶಕ್ತನಾದ ಎಂದಿಗೂ ನಂದದ ಪ್ರೇಮಜ್ಯೋತಿಯಂತೆ ನೆಲೆಸಿರುವನು.

ಪ್ರೇಮಾದರ್ಶದ ಮಾನವ ಲಕ್ಷಣ

ಪರಾಭಕ್ತಿಯ ನಿರುಪಾಧಿಕ ಪ್ರೇಮವನ್ನು ಮಾನವ ಭಾಷೆಯಲ್ಲಿ ವ್ಯಕ್ತಪಡಿಸುವುದು ಅಸಾಧ್ಯ. ಪ್ರೇಮದ ಪರಮಸೌಂದರ್ಯ ಮತ್ತು ಪರಿಪೂರ್ಣತೆಯನ್ನು, ಮಾನವ ತನ್ನ ಕಲ್ಪನೆಯ ಚರಮಸೀಮೆಯನ್ನು ಮುಟ್ಟಿದರೂ ಅದನ್ನು ತಿಳಿದುಕೊಳ್ಳಲು ಅಸಾಧ್ಯ. ಆದರೂ ಭಕ್ತಿಮಾರ್ಗಾನುಯಾಯಿಗಳು ಎಲ್ಲಾ ಕಾಲದೇಶಗಳಲ್ಲಿಯೂ ಗೌಣೀ ಮತ್ತು ಪರಾಸ್ಥಿತಿಯಲ್ಲಿ ಭಕ್ತಿಯನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಆದನ್ನು ಇತರರಿಗೆ ವಿವರಿಸುವುದಕ್ಕೆ ಸಾಕಾಗದ ಮಾನವ ಭಾಷೆಯನ್ನೇ ಉಪಯೋಗಿಸಬೇಕಾಯಿತು. ಇದಕ್ಕೂ ಒಂದು ಮೆಟ್ಟಲು ಮುಂದೆ ಹೋಗಿ ಹಲವು ಬಗೆಯ ಮಾನವ ಪ್ರೀತಿಯನ್ನೇ ಅವರ್ಣನೀಯ ಭಗವತ್ಪ್ರೇಮವನ್ನು ವಿವರಿಸುವುದಕ್ಕೆ ಉಪಯೋಗಿಸಿರುವರು. ಮಾನವ ತನ್ನ ಮಾನವ ಸಹಜಭಾವನೆ ಮೂಲಕ ಮಾತ್ರ ಭಗವಂತನನ್ನು ಆಲೋಚಿಸಬಹುದು. ನಿರಪೇಕ್ಷವಾದುದನ್ನು ಸಾಪೇಕ್ಷದ ಭಾಷೆಯಲ್ಲೆ ನಮಗೆ ವಿವರಿಸಬೇಕಾಗಿದೆ. ಇಡೀ ಬ್ರಹ್ಮಾಂಡವೇ ಸಾಪೇಕ್ಷವಾಗಿ ವ್ಯಕ್ತವಾಗುತ್ತಿರುವ ನಿರಪೇಕ್ಷ. ಆದಕಾರಣವೆ ಭಕ್ತ ಮಾನವ ಸಹಜವಾದ ಪ್ರೇಮ ಪದಗಳನ್ನೆ ದೇವರು ಮತ್ತು ಅವನನ್ನು ಪ್ರೀತಿಸುವುದಕ್ಕೆ ಉಪಯೋಗಿಸುವನು.

ಪರಾಭಕ್ತಿಯ ವಿಷಯವಾಗಿ ಬರೆದ ಅನೇಕ ಆಚಾರ್ಯರು ಈ ಪರಾಪ್ರೇಮವನ್ನು ಹಲವು ಭಾವನೆಗಳಲ್ಲಿ ಅನುಭವಿಸಿ ಅರಿತುಕೊಳ್ಳಲು ಯತ್ನಿಸಿರುವರು. ಈ ಭಾವದ ಅತಿ ಕೆಳಗಿನ ಮೆಟ್ಟಲೇ ಶಾಂತ. ಯಾವಾಗ ಭಕ್ತ ಪ್ರೇಮದ ಉದ್ವೇಗವಿಲ್ಲದೆ ಅದರಿಂದ ಉನ್ಮತ್ತನಾಗಿ ಹೋಗದೆ ಕೇವಲ ಬಾಹ್ಯಪೂಜಾ ವಿಧಾನ ಮಂತ್ರ ತಂತ್ರಗಳ ಆಡಂಬರ ಇವುಗಳಿಗಿಂತ ಸ್ವಲ್ಪಮೇಲಾಗಿ, ಆದರೆ ಪ್ರೇಮೋನ್ಮಾದವಿಲ್ಲದೆ ಶಾಂತವಾಗಿ ಸರ್ವಸಾಮಾನ್ಯವಾಗಿಸುವ ಪ್ರೇಮ ಶಾಂತ. ಕೆಲವರಿಗೆ ನಿಧಾನವಾಗಿ ಹೋಗಲು ಆಸೆ. ಮತ್ತೆ ಕೆಲವರು ರಭಸದಿಂದ ಸುಂಟುರಗಾಳಿಯಂತೆ ಚಲಿಸುವರು. ಇದನ್ನು ನಾವು ಪ್ರಪಂಚದಲ್ಲಿ ನೋಡುವೆವು. ಶಾಂತ ಭಕ್ತ ನಿರುದ್ವೇಗಪರ ಸಮಾಧಾನಚಿತ್ತನು, ಮಧುರ ಸ್ವಭಾವದವನಾಗಿರುವನು.

ಇದಕ್ಕಿಂತ ಮೇಲಿನ ಮೆಟ್ಟಲೆ ದಾಸ್ಯ. ಭಕ್ತ ತಾನು ಭಗವಂತನ ಸೇವಕ ಎಂದು ಭಾವಿಸುವುದರಿಂದ ಇದು ಬರುವುದು. ನಿಷ್ಠಾವಂತ ಸೇವಕ ನಿಗೆ ಯಜಮಾನನ ಮೇಲೆ ಇರುವ ಭಕ್ತಿಯೇ ಇದರ ಆದರ್ಶ.

ಮುಂದಿನದೆ ಸಖ್ಯ. "ನೀನು ನನ್ನ ಪ್ರಿಯಸಖ". ಒಬ್ಬ ತನ್ನ ಸಖನಿಗೆ ತನ್ನ ರಹಸ್ಯವನ್ನೆಲ್ಲಾ ಹೇಳುವನು. ಅವನು ತನ್ನ ಲೋಪ ದೋಷಗಳನ್ನು ನೋಡಿ ದೂರುವುದಿಲ್ಲ. ಯಾವಾಗಲೂ ತನಗೆ ಸಹಾಯ ಮಾಡುವನೆಂದು ಗೊತ್ತಿದೆ. ತನಗೂ ತನ್ನ ಸ್ನೇಹಿತನಿಗೂ ಒಂದು ಸಮಾ ನತೆ ಇರುವಂತೆ ಭಕ್ತ ಮತ್ತು ತನ್ನ ಸ್ನೇಹಿತನಾದ ದೇವರಲ್ಲಿ ಒಂದು ಸಮಾನತೆ, ಪ್ರೇಮ ಹರಿಯುತ್ತಿರುವುದು. ದೇವರು ನಮ್ಮ ಅತ್ಯಂತ ಸಮೀ ಪದಲ್ಲಿರುವ ಸ್ನೇಹಿತನಾಗುವನು. ನಮ್ಮ ಜೀವನದ ದುಃಖವನ್ನೆಲ್ಲಾ ಅವನಿಗೆ ಹೇಳಿಕೊಳ್ಳಬಹುದು. ನಮ್ಮ ಹೃದಯದ ರಹಸ್ಯತಮ ವಿಷಯ ಗಳನ್ನೆಲ್ಲಾ ಅವನಲ್ಲಿ ಹೇಳಿಕೊಳ್ಳಬಹುದು. ಅವನು ಅದನ್ನು ಇತರರಿಗೆ ಹೇಳುವುದಿಲ್ಲ, ಸ್ನೇಹಿತ ತನಗೆ ಸಹಾಯಕನಾಗುತ್ತಾನೆ ಎಂಬ ಭರವಸೆ ಇರುವುದು. ಭಕ್ತ ದೇವರನ್ನು ನಮ್ಮ ಸರಿಸಮನಾದ ಸ್ನೇಹಿತನಂತೆ ಸ್ವೀಕ ಸುವನು. ದೇವರನ್ನು ಇಲ್ಲಿ ನಮ್ಮ ಜೊತೆಯ ಆಟಗಾರನಂತೆ ನೋಡು ವೆವು. ನಾವೆಲ್ಲಾ ಈ ಜಗತ್ತಿನಲ್ಲಿ ಆಟವಾಡುತ್ತಿರುವೆವು ಎಂದು ಬೇಕಾದರೆ ಹೇಳಬಹುದು. ಮಕ್ಕಳು ಆಟವಾಡುವಂತೆ, ಪ್ರಖ್ಯಾತ ರಾಜರು ಚಕ್ರ ವರ್ತಿಗಳು ತಮ್ಮ ಆಟವನ್ನು ಆಡುವಂತೆ, ಸ್ವಯಂ ಭಗವಂತನೇ ಈ ಪ್ರಪಂಚದಲ್ಲಿ ಲೀಲೆಯಲ್ಲಿ ನಿರತನಾಗಿರುವನು. ಅವನು ಪರಿಪೂರ್ಣ; ಅವನಿಗೇನೂ ಬೇಕಾಗಿಲ್ಲ. ಅವನೇಕೆ ಸೃಷ್ಟಿಸಬೇಕು? ಕೆಲವು ಬಯಕೆ ಯನ್ನು ತೃಪ್ತಿಪಡಿಸಿಕೊಳ್ಳುವುದಕ್ಕಾಗಿ ಕರ್ಮಮಾಡಬೇಕು? ಬಯಕೆ ಯಾವಾಗಲೂ ನಮ್ಮ ಕೊರತೆಯನ್ನು ಸೂಚಿಸುವುದು. ದೇವರು ಪರಿ ಪೂರ್ಣ ಅವನಿಗಾವ ಕೊರತೆಯೂ ಇಲ್ಲ. ಏಕೆ ಅವನು ನಿತ್ಯ ಸೃಷ್ಟಿ ಕಾರ್ಯದಲ್ಲಿ ಮಗ್ನನಾಗಿರಬೇಕು? ಅವನಿಗೆ ಯಾವ ಉದ್ದೇಶವಿದೆ? ನಾವು ಊಹಿಸುವಂತೆ ದೇವರು ಯಾವುದೊ ಒಂದು ಉದ್ದೇಶಕ್ಕಾಗಿ ಸೃಷ್ಟಿಸು ತ್ತಿರುವನು ಎಂಬ ಕಥೆ, ಕಥೆಯ ದೃಷ್ಟಿಯಿಂದ ಚೆನ್ನಾಗಿರಬಹುದೇ ಹೊರತು ಅನ್ಯಥಾ ಅಲ್ಲ. ಇದೆಲ್ಲಾ ನಿಜವಾಗಿ ಆಟ, ಸೃಷ್ಟಿ ಎಂಬು ದೊಂದು ನಡೆಯುತ್ತಿರುವ ಅವನ ಲೀಲೆ, ಇಡೀ ಬ್ರಹ್ಮಾಂಡ ಅವನಿಗೆ ಆನಂದ ತರುವ ಒಂದು ದೊಡ್ಡ ತಮಾಷೆ ಆಗಿರಬೇಕು. ನೀನು ದರಿದ್ರ

ನಾದರೆ ಅದನ್ನು ಒಂದು ತಮಾಷೆಯಂತೆ ನೋಡು, ಶ್ರೀಮಂತನಾದರೆ ಶ್ರೀಮಂತತನವನ್ನು ತಮಾಷೆಯಂತೆ ಭಾವಿಸು. ಅಪಾಯ ಬಂದರೆ ಅದೂ ಒಂದು ದೊಡ್ಡ ತಮಾಷೆಯೆ, ಸಂತೋಷ ಬಂದರೆ ಅದೂ ಸ್ವಲ್ಪ ದೊಡ್ಡ ತಮಾಷೆಯೆ. ಪ್ರಪಂಚ ಒಂದು ಕ್ರೀಡಾಭೂಮಿ. ನಾವೆಲ್ಲಾ ದೊಡ್ಡ ತಮಾಷೆಯಲ್ಲಿ ನಿರತರಾಗಿರುವೆವು, ಆಟದಲ್ಲಿ ನಿರತರಾಗಿರುವೆವು. ದೇವರು ಯಾವಾಗಲೂ ನಮ್ಮೊಡನೆ ಆಡುತ್ತಿರುವನು, ನಾವು ಯಾವಾಗಲೂ ದೇವರೊಡನೆ ಆಡುತ್ತಿರುವೆವು. ದೇವರು ನಮ್ಮ ನಿತ್ಯ ಜೊತೆಗಾರ. ಅವನೆಷ್ಟು ಚೆನ್ನಾಗಿ ಆಡುತ್ತಿರುವನು. ಆಟ ಮುಗಿಯಿತೆಂದರೆ ಕಲ್ಪ ಕೊನೆಗೊಳ್ಳುವುದು. ಅನಂತರ ದೀರ್ಘಕಾಲವೊ ಅಲ್ಪಕಾಲವೊ ವಿಶ್ರಾಂತಿ, ಅದಾದ ಮೇಲೆ ಎಲ್ಲರೂ ಪುನಃ ಹೊರಗೆ ಬಂದು ಆಡುವರು. ಇದೆಲ್ಲಾ ಒಂದು ಲೀಲೆ, ನೀವು ಲೀಲೆಗೆ ಸಹಾಯಕರು ಎಂಬುದನ್ನು ಮರೆತಾಗ ಮಾತ್ರ ದುಃಖ ವ್ಯಥೆ ಬರುವುದು. ಆಗ ಹೃದಯ ಹೊರಲಾರದ ಭಾರದಿಂದ ಕುಸಿದು ಹೋಗುವುದು. ಪ್ರಪಂಚ ತನ್ನ ಪ್ರಚಂಡ ಶಕ್ತಿಯಿಂದ ನಿನ್ನನ್ನು ಅಪ್ಪಳಿಸುವುದು. ಕ್ಷಣಕಾಲ ಬಾಳುವೆಯ ಜಗತ್ತು ಸತ್ಯವಲ್ಲ, ನಾವೆಲ್ಲಾ ರಂಗಭೂಮಿಯ ಮೇಲೆ ಆಡುತ್ತಿರುವೆವು, ಭಗವಂತನ ಲೀಲೆಗೆ ಸಹಾಯಕರಾಗಿರುವೆವು ಎಂಬುದನ್ನು ಅರಿತಾಗ ತಕ್ಷಣ ದುಃಖ ಕೊನೆಗಾಣುವುದು. ಅವನು ಪ್ರತಿಯೊಂದು ಕಣದ ಅಂತರಾಳದಲ್ಲಿಯೂ ಆಡುತ್ತಿರುವನು. ಗ್ರಹ ಚಂದ್ರ ಸೂರ್ಯನನ್ನು ಸೃಷ್ಟಿಸುವಾಗ ಅವನು ಆಡುತ್ತಿರುವನು. ಅವನು ಮಾನವ ಹೃದಯದೊಡನೆ ಆಡುತ್ತಿರುವನು, ಪ್ರಾಣಿಗಳಲ್ಲಿ ಆಡುತ್ತಿರುವನು, ತರುಲತೆಗಳಲ್ಲಿ ಆಡುತ್ತಿರುವನು. ನಾವೆಲ್ಲಾ ಅವನ ಪಗಡೆಯಾಟದ ಕಾಯಿಗಳು. ಅವನು ಕಾಯನ್ನು ಹಾಸಿನಮೇಲಿಟ್ಟು ನಡೆಸುವನು. ಮೊದಲು ನಮ್ಮನ್ನು ಒಂದು ವಿಧವಾಗಿ ಇಡುವನು, ಅನಂತರ ಇನ್ನೊಂದು ವಿಧವಾಗಿ ಇಡುವನು. ನಾವೆಲ್ಲಾ ಅರಿತೊ ಅರಿಯದೆಯೊ ಅವನ ಲೀಲೆಗೆ ಸಹಾಯಕರಾಗಿರುವೆವು. ಓ ಎಂತಹ ಆನಂದ! ನಾವೆಲ್ಲಾ ಅವನ ಜೊತೆಗಾರರು!

ವಾತ್ಸಲ್ಯಭಾವ ನಂತರ ಬರುವುದು. ದೇವರನ್ನು ನಮ್ಮ ತಂದೆಯಂತೆ ನೋಡುವುದಲ್ಲ, ಅವನನ್ನು ನನ್ನ ಮಗುವಿನಂತೆ ಭಾವಿಸುವುದು. ಇದು ವಿಚಿತ್ರವಾಗಿ ತೋರಬಹುದು. ಭಗವಂತನ ಭಾವನೆಯಲ್ಲಿರುವ ಶಕ್ತಿ ಮುಂತಾದ ವೈಭವಗಳನ್ನೆಲ್ಲಾ ಕಳಚುವುದಕ್ಕೆ ಇದೊಂದು ಸಾಧನೆ. ವೈಭವಗಳಿದ್ದರೆ ಜೊತೆಗೆ ಅಂಜಿಕೆಯೂ ಬರುವುದು. ಪ್ರೀತಿಯಲ್ಲಿ

ಎಂದಿಗೂ ಅಂಜಿಕೆ ಇರಬಾರದು. ನಮ್ಮ ಶೀಲವನ್ನು ರೂಢಿಸುವುದಕ್ಕೆ ಗೌರವ ದೈನ್ಯತೆ ಮುಂತಾದ ಭಾವಗಳು ಸಹಕಾರಿಯಾಗಬಹುದು. ಆದರೆ ಶೀಲವನ್ನು ಒಮ್ಮೆ ರೂಢಿಸಿ ಆದಮೇಲೆ ಭಕ್ತ ಒಮ್ಮೆ ಶಾಂತವಾದ ಸಮಾಧಾನದಿಂದ ಪ್ರೀತಿಯ ಸವಿಯನ್ನು ಅರಿತಮೇಲೆ ಸ್ವಲ್ಪ ಪ್ರೇಮೋನ್ಮಾದದ ಸ್ಥಿತಿಯ ಅನುಭವವನ್ನೂ ಪಡೆದಮೇಲೆ ಅವನು ಇನ್ನು ಮೇಲೆ ನೀತಿ, ಶಿಸ್ತು, ಮುಂತಾದುವನ್ನು ಕುರಿತು ಮಾತನಾಡಬೇಕಾಗಿಲ್ಲ. ಭಗವಂತನನ್ನು ಪರಾಕ್ರಮ ಶಾಲಿಯಂತೆ, ಮಹಾರಾಜನಂತೆ, ಸರ್ವಲೋಕಾಧೀಶ್ವರನಂತೆ, ದೇವದೇವನಂತೆ, ಕಲ್ಪಿಸಿಕೊಳ್ಳಲಿಚ್ಛಿಸನು. ಭಯವನ್ನು ಹುಟ್ಟಿಸುವಂತಹ ಶಕ್ತಿಯ ಸಂಬಂಧ ದೇವರಲ್ಲಿ ಇಲ್ಲದಿರಲೆಂತಲೇ ಅವನು ದೇವರನ್ನು ತನ್ನ ಮಗುವಿನಂತೆ ಪೂಜಿಸುವನು. ತಂದೆ ತಾಯಿಗಳಿಗೆ ಮಗುವನ್ನು ಕಂಡರೆ ಅಂಜಿಕೆ ಇರುವುದಿಲ್ಲ. ಮಗುವನ್ನು ಕಂಡರೆ ಗೌರವವೂ ಇರುವುದಿಲ್ಲ. ಮಗುವಿನಿಂದ ಯಾವುದನ್ನೂ ಹಿಂತಿರುಗಿ ಅಪೇಕ್ಷಿಸುವುದಿಲ್ಲ. ಮಗುವಿನ ಸ್ಥಿತಿ ಯಾವಾಗಲೂ ಸ್ವೀಕರಿಸುವವನದು. ಮಗುವಿನಮೇಲಿನ ಪ್ರೀತಿಗಾಗಿ ತಂದೆ ತಾಯಿಗಳು ನೂರಾರುವೇಳೆ ಜೇಕಾದರೂ ತಮ್ಮ ದೇಹವನ್ನು ನೀಡಬಲ್ಲರು. ತಮ್ಮ ಮಗುವಿಗಾಗಿ ಸಾವಿರ ಜನ್ಮಗಳನ್ನಾದರೂ ತ್ಯಾಗಮಾಡಬಲ್ಲರು. ಅದಕ್ಕೇ ದೇವರನ್ನು ಮಗುವಿನಂತೆ ಪ್ರೀತಿಸುವುದು. ಯಾರು ದೇವರ ಅವತಾರದಲ್ಲಿ ನಂಬುವರೊ ಅಂಥ ಧರ್ಮಗಳಲ್ಲಿ ಮಾತ್ರ ವಾತ್ಸಲ್ಯಭಾವ ಜಾರಿಗೆ ಬಂದು ಸ್ವಾಭಾವಿಕವಾಗಿ ವೃದ್ಧಿಯಾಗುವುದು. ಮುಹಮ್ಮದೀಯರಿಗೆ ವಾತ್ಸಲ್ಯಭಾವ ಸಾಧ್ಯವೇ ಇಲ್ಲ. ಇದನ್ನು ಕಂಡರೆ ಅಂಜಿಕೆಯಿಂದ ಹಿಂದೆ ಸರಿಯುವರು. ಆದರೆ ಕ್ರೈಸ್ತರಿಗೆ ಮತ್ತು ಹಿಂದೂಗಳಿಗೆ ಇದು ಬಹು ಸುಲಭ. ಏಕೆಂದರೆ ಅವರಲ್ಲಿ ಬಾಲಕ್ರೈಸ್ತ ಮತ್ತು ಬಾಲಗೋಪಾಲ ಇರುವರು. ಭರತಖಂಡದಲ್ಲಿ ಅನೇಕ ಸ್ತ್ರೀಯರು ತಾವು ಕೃಷ್ಣನ ತಾಯಿ ಎಂದು ಭಾವಿಸುವರು. ಕ್ರೈಸ್ತ ತಾಯಂದಿರೂ ಕೂಡ ತಾವು ಏಸೂಕ್ರಿಸ್ತನ ತಾಯಿ ಎಂದು ಬೇಕಾದರೆ ಭಾವಿಸಬಹುದು. ಇದರಿಂದ ಪಾಶ್ಚಾತ್ಯದೇಶಕ್ಕೆ ಅತ್ಯಾವಶ್ಯಕವಾದ ಭಗವಂತನ ಮಾತೃಭಾವ ಬರುವುದು. ದೇವರಮೇಲೆ ನಮಗಿರುವ ಅಂಜಿಕೆ ಗೌರವಗಳೆಂಬ ಮೂಢಭಕ್ತಿ ನಮ್ಮ ಹೃದಯಾಂತರಾಳದಲ್ಲಿ ಬೇರು ಬಿಟ್ಟಿವೆ. ದೇವರಿಗೆ ಸಂಬಂಧಪಟ್ಟ ಗೌರವ, ಭಕ್ತಿ, ಅಂಜಿಕೆ, ಅವನು ಮಹಾಪ್ರಭು, ಸರ್ವಶಕ್ತ ಎಂಬ ಭಾವನೆಗಳನ್ನು ಮರೆಯಬೇಕಾದರೆ ಬಹಳಕಾಲ ಜೇಕಾಗುವುದು.

ಭಗವದ್ಭಕ್ತಿಯನ್ನು ವ್ಯಕ್ತಗೊಳಿಸುವ ಮತ್ತೊಂದು ಭಾವವಿದೆ. ಇದನ್ನೆ ಮಧುರಭಾವ ಎನ್ನುವುದು. ಇದು ಭಾವಗಳಲ್ಲೆಲ್ಲಾ ಶ್ರೇಷ್ಠತಮ ಭಾವ. ಈ ಪ್ರಪಂಚದಲ್ಲಿ ವ್ಯಕ್ತವಾಗುವ ಅತಿ ನಿಕಟ ಪ್ರೇಮದ ಆಧಾರದ ಮೇಲೆ ಇದು ನಿಂತಿದೆ. ಮಾನವನಿಗೆ ತಿಳಿದ ಪ್ರೇಮದಲ್ಲೆಲ್ಲಾ ಇದರಷ್ಟು ಉತ್ಕಟವಾದುದು ಮತ್ತೊಂದು ಇಲ್ಲ. ಯಾವ ಪ್ರೇಮ ಮಾನವನ ಸ್ವಭಾವವನ್ನೆಲ್ಲಾ ಕಂಪಿಸುವಂತೆ ಮಾಡುವುದು? ಯಾವ ಪ್ರೇಮ ತನ್ನ ರೋಮಕೂಪದಲ್ಲೆಲ್ಲಾ ಪ್ರವಹಿಸುವುದು? ಯಾವ ಪ್ರೇಮ ತನ್ನನ್ನು ಉನ್ಮತ್ತನನ್ನಾಗಿ ಮಾಡಿ ತನ್ನ ಸ್ವಭಾವವನ್ನೆ ಮರೆಸಿ ಒಬ್ಬ ದಾನವನನ್ನಾಗಿಯೋ ದೇವನನ್ನಾಗಿಯೋ ಮಾರ್ಪಡಿಸುವುದು? ಸ್ತ್ರೀಪುರುಷರ ಮಧ್ಯೆ ಇರುವ ಪ್ರೇಮವೆ ಅದು. ಈ ಮಧುರಭಾವದಲ್ಲಿ ದೇವರು ನಮ್ಮ ಪ್ರಿಯತಮನಾಗಿರುವನು. ನಾವೆಲ್ಲ ಸ್ತ್ರೀಯರು, ಪ್ರಪಂಚದಲ್ಲಿ ಪುರುಷರಾರೂ ಇಲ್ಲ. ಇರುವನೊಬ್ಬನೇ ಪುರುಷ, ಅವನು ನಮ್ಮ ಪ್ರಿಯತಮ. ಪುರುಷ ಯಾವ ಪ್ರೀತಿಯನ್ನು ಸ್ತ್ರೀಗೆ ಕೊಡುವನೊ, ಸ್ತ್ರೀ ಪುರುಷನಿಗೆ ಕೊಡುವಳೊ ಅವನ್ನೆಲ್ಲಾ ದೇವರಿಗೆ ಕೊಡಬೇಕಾಗಿದೆ. ಪ್ರಪಂಚದಲ್ಲಿ ನಮ್ಮ ಕಣ್ಣಿಗೆ ಬೀಳುವ ಬಗೆಬಗೆಯ ಪ್ರೇಮಗಳೆಲ್ಲ, ಕೇವಲ ನಟನೆ, ನಾವು ಸುಮ್ಮನೆ ಆಟವಾಡುತ್ತಿರುವೆವು, ಆದರೆ ಅವುಗಳ ಗುರಿಯೆಲ್ಲ ದೇವರೇ ಆಗಿರುವನು. ಈ ಪ್ರೇಮವೆಂಬ ಅದ್ಭುತಪ್ರವಾಹ ಯಾವ ಅನಂತ ಸಾಗರವನ್ನು ಸೇರುತ್ತಿದೆಯೊ ಅದು ಇವನಿಗೆ ಗೊತ್ತಿಲ್ಲ. ಆದಕಾರಣವೆ ಕೆಲಸಕ್ಕೆ ಬಾರದ ಮನುಷ್ಯರೆಂಬ ಅಲ್ಪಗೊಂಬೆಗಳಮೇಲೆ ಹೋಗುವಂತೆ ಮಾಡುವೆವು. ಮಾನವನ ಹೃದಯದಲ್ಲಿ ಮಗುವಿನ ಮೇಲಿರುವ ಅದ್ಭುತ ಪ್ರೇಮ ಕೇವಲ ಮಗು ಎಂಬ ಒಂದು ಗೊಂಬೆಗಲ್ಲ. ಪ್ರೇಮಾಂಧರಾಗಿ ಕೇವಲ ಮಗುವಿನಮೇಲೆ ಮಾತ್ರ ನೀವು ಪ್ರೇಮವನ್ನು ಹರಿಸಿದರೆ ಇದರಿಂದ ನಾವು ವ್ಯಥೆಪಡಬೇಕಾಗುವುದು. ಆದರೆ ಇಂತಹ ವ್ಯಥೆಯಿಂದ ನಿಮ್ಮಲ್ಲಿರುವ ಪ್ರೇಮವನ್ನು ಯಾವುದಾದರೂ ಮಾನವ ವ್ಯಕ್ತಿಯಮೇಲೆ ಹರಿಸಿದರೆ ಪ್ರತಿಫಲವಾಗಿ ನಿಧಾನವಾಗಿಯೊ ಜಾಗ್ರತೆಯಾಗಿಯೊ ದುಃಖ ಮತ್ತು ವ್ಯಥೆಯನ್ನು ತಂದೇ ತರುವುದು, ಎಂಬುದನ್ನು ಅರಿತುಕೊಳ್ಳುವರು. ಯಾರಿಗೆ ಮರಣ ಬದಲಾವಣೆಗಳಿಲ್ಲವೊ, ಯಾರ ಪ್ರೇಮ ಸಾಗರದಲ್ಲಿ ಉಬ್ಬರವಿಳಿತಗಳಿಲ್ಲವೊ, ಅಂತಹ ಪರಮಾತ್ಮನಿಗೆ ಮಾತ್ರ ನಮ್ಮ ಪ್ರೇಮವನ್ನು ಅರ್ಪಿಸಬೇಕು. ಪ್ರೇಮ ತನ್ನ ನಿಜವಾದ ಮೂಲಸ್ಥಾನಕ್ಕೆ

ಹೋಗಬೇಕು. ನಿಜವಾಗಿ ಯಾರು ಅನಂತ ಪ್ರೇಮಸಾಗರನೊ ಅಲ್ಲಿಗೆ ಹೋಗಬೇಕು. ನದಿಗಳೆಲ್ಲ ಸಾಗರಕ್ಕೆ ಸೇರುವುವು. ಬೆಟ್ಟದಿಂದ ಜಾರಿ ಬರುವ ಒಂದು ಹನಿ ಕೂಡ ಯಾವುದೊ ತೊರೆಯನ್ನೊ ನದಿಯನ್ನೊ ಸೇರಿ ನಿಲ್ಲುವುದಿಲ್ಲ; ಅದು ಎಷ್ಟೇ ದೊಡ್ಡದಾಗಿ ಬೇಕಾದರೂ ಇರಬಹುದು, ಅಂತೂ ಕೊನೆಗೆ ಆ ನದಿ ಸಾಗರಕ್ಕೆ ಸೇರುವುದು. ನಮ್ಮ ಪ್ರೀತಿ ಕೋಪ ತಾಪಗಳಿಗೆಲ್ಲ ದೇವರೊಬ್ಬನೇ ಗುರಿ. ನೀವು ಕೋಪಿಸಿಕೊಳ್ಳಬೇಕಾದರೆ ದೇವರಮೇಲೆ ಕೋಪಗೊಳ್ಳಿ. ನಿಮ್ಮ ಪ್ರಿಯತಮನನ್ನು ಗದರಿಸಿಕೊಳ್ಳಿ. ನಿಮ್ಮ ಸ್ನೇಹಿತನ ಮೇಲೆ ರೇಗಿ. ಯಾರಮೇಲೆ ನೀವು ನಿರ್ಭೀತಿಯಿಂದ ಕೋಪ ತೋರಬಹುದು? ಮಾನವ ನಿಮ್ಮ ಕೋಪವನ್ನು ಸಹನೆಯಿಂದ ನೋಡುವುದಿಲ್ಲ. ಅವನೂ ಕೋಪಗೊಳ್ಳುವನು. ನನ್ನ ಮೇಲೆ ನಿಮಗೆ ಕೋಪವಾದರೆ ನನಗೂ ಬೇಗ ಕೋಪ ಬರುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಅದನ್ನು ತಾಳುವ ಸಹನೆ ನನಗೆ ಇಲ್ಲ. ನಿಮ್ಮ ಪ್ರಿಯತಮನಿಗೆ "ನೀನೇಕೆ ನನ್ನ ಹತ್ತಿರ ಬರುವುದಿಲ್ಲ, ನನ್ನೊಬ್ಬನನ್ನೇ ಏಕೆ ಬಿಡುವೆ" ಎನ್ನಿ. ಅವನಲ್ಲಿ ಅಲ್ಲದೆ ಮತ್ತೆಲ್ಲಿ ಸಂತೋಷವಿರುವುದು. ಕೆಲಸಕ್ಕೆ ಬಾರದ ಚೂರುಪಾರು ಪ್ರಾಪಂಚಿಕ ವಸ್ತುಗಳಲ್ಲಿ ಏನು ಸಂತೋಷವಿದೆ? ಅನಂತಾನಂದದ ಸಾರಸ್ಫಟಿಕವನ್ನು ನಾವು ಆರಸಬೇಕಾಗಿದೆ. ಅದು ದೇವರಲ್ಲಿ ಇದೆ. ನಮ್ಮ ಕೋಪತಾಪಗಳೆಲ್ಲ ಅವನಿಗೆ ಹೋಗಲಿ, ಇವೆಲ್ಲ ಇರುವುದು ಅವನಿಗಾಗಿ. ಅವು ತಮ್ಮ ಗುರಿ ತಪ್ಪಿ ಕೆಳಗೆ ಹೋದರೆ ತುಚ್ಛವಾಗುವುವು. ಅವು ನೇರ ದೇವರ ಗುರಿಯೆಡೆಗೆ ಹೋದರೆ ಅತಿ ಹೀನವಾದುವೂ ಪವಿತ್ರವಾಗುವುವು. ದೇಹ ಮತ್ತು ಮನಸ್ಸಿನ ಶಕ್ತಿಗಳು ಯಾವ ರೀತಿ ವ್ಯಕ್ತವಾಗುತ್ತಿದ್ದರೂ ಅವುಗಳ ಏಕಮಾತ್ರ ಗುರಿ ದೇವರು. ಎಲ್ಲಾ ಪ್ರೇಮ ಮಾನವಹೃದಯದಲ್ಲಿರುವ ಕಾಮವೆಲ್ಲ ದೇವರಡಿಗೆ ಹೋಗ ಬೇಕು. ಅವನೇ ಪ್ರಿಯತಮ. ಮಾನವಹೃದಯ ಮತ್ತಾವುದನ್ನು ಪ್ರೀತಿಸಬಲ್ಲುದು? ಅವನಷ್ಟು ಸುಂದರವಾಗಿ ಯಾರೂ ಇಲ್ಲ. ಅವನಷ್ಟು ಭವ್ಯವಾಗಿ ಯಾರೂ ಇಲ್ಲ. ಅವನೇ ರೂಪುವೆತ್ತ ಸೌಂದರ್ಯ, ಅವನೇ ರೂಪುವೆತ್ತ ಭವ್ಯತೆ. ಪ್ರಪಂಚದಲ್ಲಿ ಯಾರು ಅವನಿಗಿಂತ ಸುಂದರ ವಾಗಿರುವರು? ನಮ್ಮ ಪತಿಯಾಗುವುದಕ್ಕೆ ಅವನಿಗಿಂತ ಯಾರಿಗೆ ಹೆಚ್ಚು ಯೋಗ್ಯತೆ ಇದೆ? ಅವನೇ ಪತಿಯಾಗಲಿ. ಅವನೇ ಪ್ರಿಯತಮನಾಗಲಿ. ಭಕ್ತರು ಪರಾಭಕ್ತಿಯನ್ನು ಕುರಿತು ಹಾಡುವಾಗ, ಮಾನವ ಭಾವನೆಗೆ

ಸಂಬಂಧಪಟ್ಟ ಭಾವನೆಗಳನ್ನೆಲ್ಲಾ ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸುವುದಕ್ಕೆ ಸಾಕೆಂದು ಅನೇಕವೇಳೆ ಸ್ವೀಕರಿಸುವೆವು. ಮೂಢರಿಗೆ ಇದು ಗೊತ್ತಾಗುವುದಿಲ್ಲ, ಅವರೆಂದಿಗೂ ತಿಳಿದುಕೊಳ್ಳುವುದೂ ಇಲ್ಲ. ಅವರು ತಮ್ಮ ಬಾಹ್ಯಚಕ್ಷುವಿನಿಂದ ಮಾತ್ರ ನೋಡುವರು. ಈ ಆಧ್ಯಾತ್ಮಿಕ ಪ್ರೇಮೋನ್ಮಾದವನ್ನು ಅವರು ಗ್ರಹಿಸಲಾರರು. ಅವರು ಹೇಗೆ ಇದನ್ನು ಗ್ರಹಿಸಲು ಸಾಧ್ಯ? "ಪ್ರಿಯನೆ, ನಿನ್ನ ಒಂದು ಮಧುರ ಚುಂಬನ! ನೀನು ಯಾರನ್ನು ಚುಂಬಿಸಿರುವೆಯೋ ಅವರಿಗೆ ನಿನ್ನ ಮೇಲಿನ ಆಸೆ ಎಂದೆಂದಿಗೂ ವೃದ್ಧಿಯಾಗುವುದು. ದುಃಖವೆಲ್ಲ ಮಾಯವಾಗುವುದು. ನಿನ್ನ ವಿನಹ ಉಳಿದೆಲ್ಲವನ್ನೂ ಅವನು ಮರೆಯುವನು." ಭಕ್ತನನ್ನು ಉನ್ಮತ್ತನನ್ನಾಗಿ, ಮಾಡುವ ಮಾನವನನ್ನು ದೇವನನ್ನಾಗಿ ಮಾಡುವ, ಪ್ರಿಯತಮನ ಚುಂಬನಕ್ಕಾಗಿ, ಅವನ ತುಟಿಯ ಸ್ಪರ್ಶಕ್ಕಾಗಿ ಯತ್ನಿಸಿ. ಯಾರಿಗೆ ಇಂಥ ಚುಂಬನ ಭಗವಂತನಿಂದ ದೊರೆತಿದೆಯೊ ಅವನಿಗೆ ಪ್ರಕೃತಿಯೆಲ್ಲ ಬದಲಾಯಿಸುವುದು, ಪ್ರಪಂಚ ಮಾಯವಾಗುವುದು. ಸೂರ್ಯ ಚಂದ್ರರು ಕಣ್ಣಿಗೆ ಕಾಣದೆ ಹೋಗುವರು. ಇಡೀ ವಿಶ್ವವೇ ಅನಂತ ಪ್ರೇಮಸಾಗರದಲ್ಲಿ ಐಕ್ಯವಾಗುವುದು. ಪ್ರೇಮೋನ್ಮಾದದ ಪರಾಕಾಷ್ಠತೆ ಇದು. ಓ! ನಿಜವಾದ ಭಕ್ತಿ ಅಲ್ಲಿಯೂ ನಿಲ್ಲುವುದಿಲ್ಲ. ಸತಿಪತಿಯರ ಪ್ರೇಮ ಕೂಡ ಸಾಕಷ್ಟು ತೀವ್ರವಾಗಿಲ್ಲ ಅವನಿಗೆ. ಭಕ್ತರು ಜಾರಪ್ರೇಮವನ್ನೂ ಕೂಡ ಉದಾಹರಣೆಗೆ ತೆಗೆದುಕೊಳ್ಳುವರು. ಏಕೆಂದರೆ ಅದು ಅಷ್ಟು ತೀವ್ರವಾಗಿರುವುದು. ಇದರಲ್ಲಿರುವ ಅಯುಕ್ತತೆಯಲ್ಲ ಅವರ ಗಮನದಲ್ಲಿರುವುದು. ಈ ಪ್ರೇಮದ ಸ್ವಭಾವವೇನೆಂದರೆ ಮಾರ್ಗದಲ್ಲಿ ಆತಂಕವಿದ್ದಷ್ಟೂ ಇದು ಹೆಚ್ಚು ಪ್ರಬಲವಾಗುವುದು. ಸತಿಪತಿಯರಲ್ಲಿರುವ ಪ್ರೇಮ ಮಧುರವಾದುದು. ಇಲ್ಲಿ ಯಾವ ಆತಂಕವೂ ಇರುವುದಿಲ್ಲ. ಭಕ್ತರು ಅನ್ಯ ಪ್ರಿಯತಮನಲ್ಲಿ ಅನುರಾಗಿಯಾದ ಜಾರೆಯ ಉದಾಹರಣೆಗೆ ತೆಗೆದುಕೊಳ್ಳುವರು. ಅವಳ ತಾಯಿ, ತಂದೆ, ಪತಿ ಅದನ್ನು ವಿರೋಧಿಸುವರು. ಅವಳ ಪ್ರೇಮಕ್ಕೆ ಆತಂಕ ಹೆಚ್ಚಿದಷ್ಟೂ ಅದು ಪ್ರಬಲವಾಗುವುದು. ಬೃಂದಾವನದಲ್ಲಿ ಗೋಪಿಯರು ಎಷ್ಟು ಉತ್ಕಟವಾಗಿ ಶ್ರೀಕೃಷ್ಣನನ್ನು ಪ್ರೀತಿಸಿದರು. ಅವರ ಧ್ವನಿಯನ್ನು ಕೇಳಿದೊಡನೆಯೆ ನಿತ್ಯ ಧನ್ಯರಾದ ಗೋಪಿಯರು ಪ್ರಪಂಚ ಮತ್ತು ಅದರ ಬಂಧನ, ಅವರ ಕರ್ತವ್ಯ ಸುಖ, ದುಃಖಗಳನ್ನೆಲ್ಲಾ ಮರೆತು ಅವನನ್ನು ನೋಡುವುದಕ್ಕೆ ಹೇಗೆ

ಧಾವಿಸುತ್ತಿದ್ದರು ಎಂಬುದನ್ನು ಮಾನವ ಭಾಷೆ ವಿವರಿಸಲಾರದು. ಮಾನವ, ಹೇ ಮಾನವ, ನೀನು ಪರಾಭಕ್ತಿಯನ್ನು ಕುರಿತು ಮಾತಾಡುವೆ, ಜೊತೆಗೆ ಕೆಲಸಕ್ಕೆ ಬಾರದ ಪ್ರಾಪಂಚಿಕ ವ್ಯವಹಾರದಲ್ಲಿಯೂ ನಿರತನಾಗಿರುವೆ; ಇದು ಹೇಗೆ ಸಾಧ್ಯ? "ರಾಮನಿರುವೆಡೆ ಕಾಮಕ್ಕೆ ಎಡೆಯಿಲ್ಲ, ಕಾಮವಿರುವ ಕಡೆ ರಾಮನಿಗೆ ಎಡೆ ಇಲ್ಲ. ಅವೆಂದಿಗೂ ಒಟ್ಟಿಗೆ ಇರಲಾರದು. ಕತ್ತಲೆ ಬೆಳಕಿನಂತೆ ಒಂದೇ ಕಡೆ ಇರಲಾರದು."

ಉಪಸಂಹಾರ

ಪರಾಭಕ್ತಿಯನ್ನು ಪಡೆದಮೇಲೆ ತತ್ತ್ವವನ್ನು ಆಚೆಗೆ ಒಗೆಯುವರು. ಯಾರು ಆಗ ಅದನ್ನು ಲೆಕ್ಕಿಸುವರು? ಸ್ವಾತಂತ್ರ್ಯ ಮುಕ್ತಿ ನಿರ್ವಾಣ ಮುಂತಾದುವನ್ನೆಲ್ಲಾ ಆಚೆಗೆ ಒಗೆಯುವರು. ಪರಮಪ್ರೇಮಾಮೃತವನ್ನು ಅನುಭವಿಸುತ್ತಿರುವಾಗ ಯಾರು ಮುಕ್ತರಾಗಲು ಬಯಸುವರು? "ದೇವರೆ, ನನಗೆ ದ್ರವ್ಯಬೇಡ, ಸ್ನೇಹಿತರು ಬೇಡ, ಸೌಂದರ್ಯ ಬೇಡ, ಪಾಂಡಿತ್ಯ ಬೇಡ, ಮುಕ್ತಿಯೂ ಬೇಡ. ಪುನಃ ಪುನಃ ಬೇಕಾದರೆ ನಾನು ಜನ್ಮವೆತ್ತುವೆ, ನೀನೆ ಎಂದೆಂದಿಗೂ ನನ್ನ ಪ್ರಿಯತಮನಾಗು." "ಸಕ್ಕರೆಯಾಗಲು ಯಾರು ಇಚ್ಛಿಸುವರು. ಸಕ್ಕರೆಯನ್ನು ತಿನ್ನಲಾಸೆ" ಎನ್ನುವನು ಭಕ್ತ. ಮುಕ್ತನಾಗಿ ದೇವರಲ್ಲಿ ಐಕ್ಯನಾಗಲು ಯಾರಿಗೆ ಆಸೆ? "ನಾನೆ ಅವನೆಂದು ನನಗೆ ಗೊತ್ತಿರಬಹುದು. ಆದರೂ ಅವನನ್ನು ಆನಂದಿಸುವುದಕ್ಕಾಗಿ ಅವನಿಂದ ಬೇರೆ ಆಗುವೆನು." ಭಕ್ತ ಹೇಳುವುದು ಹೀಗೆ. ಪ್ರೀತಿಗಾಗಿ ಪ್ರೀತಿಯೆ ಅವರ ಚರಮಸುಖ. ಪ್ರಿಯತಮನನ್ನು ಆನಂದಿಸುವುದಕ್ಕಾಗಿ ಸಹಸ್ರಾರು ವೇಳೆಯಾದರೂ ಕೈಕಾಲು ಕಟ್ಟಿಕೊಂಡು ಇರಲು ಸಿದ್ಧರಾಗಿರುವರು. ಪ್ರೀತಿಯಲ್ಲದೆ ಭಕ್ತ ಮತ್ತಾವುದನ್ನೂ ಲೆಕ್ಕಿಸುವುದಿಲ್ಲ. ತಾನು ಪ್ರೀತಿಸುವುದು ಅವನಿಂದ, ಪ್ರೀತಿಸಲ್ಪಡುವುದು ಮಾತ್ರ ಅವನಿಗೆ ಬೇಕಾಗಿರುವುದು. ಇವನ ಅಪ್ರಾಪಂಚಿಕಪ್ರೇಮ, ನದಿಯಮೇಲೆ ಅದರ ಪ್ರವಾಹಕ್ಕೆ ವಿರೋಧವಾಗಿ ಹರಿಯುತ್ತಿರುವ ದೊಡ್ಡ ಅಲೆಯಂತೆ. ಭಕ್ತ ಪ್ರವಾಹಕ್ಕೆ ವಿರೋಧವಾಗಿ ನದಿಯಮೇಲೆ ಹೋಗುವನು. ಪ್ರಪಂಚ

ಅವನನ್ನು ಹುಚ್ಚ ಎನ್ನುವುದು. ಪ್ರಪಂಚದವರು ಯಾರನ್ನು ಹುಚ್ಚ ಎಂದು ಕರೆಯುತ್ತಿದ್ದರೊ ಅಂತಹವರೊಬ್ಬರ ಪರಿಚಯು ನನಗಿದೆ. ಇದಕ್ಕೆ ಅವರ ಉತ್ತರವೆ ಇದು: "ಸಖನೇ, ಪ್ರಪಂಚವೇ ದೊಡ್ಡದೊಂದು ಹುಚ್ಚರ ಆಸ್ಪತ್ರೆ. ಕೆಲವರಿಗೆ ಪ್ರಾಪಂಚಿಕ ವ್ಯಕ್ತಿಗಳಮೇಲೆ ಹುಚ್ಚು, ಕೆಲವರಿಗೆ ಯಶಸ್ಸಿನಮೇಲೆ, ಕೀರ್ತಿಯಮೇಲೆ ಕೆಲವರಿಗೆ, ಕೆಲವರಿಗೆ ದ್ರವ್ಯದಮೇಲೆ, ಮತ್ತೆ ಕೆಲವರಿಗೆ ಸ್ವರ್ಗಕ್ಕೆ ಹೋಗುವುದಕ್ಕೊ, ಮುಕ್ತಿ ಪಡೆಯುವುದಕ್ಕೊ ಹುಚ್ಚು. ಈ ಬೃಹತ್ ಹುಚ್ಚರ ಆಸ್ಪತ್ರೆಯಲ್ಲಿ ನಾನೂ ಹುಚ್ಚ; ನನಗೆ ದೇವರಮೇಲೆ ಹುಚ್ಚು. ನಿಮಗೆ ಹಣದಮೇಲೆ ಹುಚ್ಚಾದರೆ ನನಗೆ ದೇವರಮೇಲೆ ಹುಚ್ಚು. ನಿಮಗೂ ಹುಚ್ಚು, ನನಗೂ ಹುಚ್ಚು ಆದರೆ ನನ್ನ ಹುಚ್ಚು ಇತರರ ಹುಚ್ಚಿಗಿಂತ ಮೇಲೆಂದು ಭಾವಿಸುವೆನು. ನಿಜವಾದ ಭಕ್ತನ ಪ್ರೇಮ ದಹಿಸುತ್ತಿರುವ ಉನ್ಮಾದಾವಸ್ಥೆ. ಇದರ ಮುಂದೆ ಉಳಿದುದೆಲ್ಲ ಮಾಯವಾಗುವುದು. ಅವನಿಗೆ ಇಡೀ ಬ್ರಹ್ಮಾಂಡ ಪ್ರೇಮದಿಂದ ತುಂಬಿ ತುಳುಕಾಡುತ್ತಿವೆ. ಭಕ್ತನಿಗೆ ಪ್ರಪಂಚ ಕಾಣುವುದು ಹೀಗೆ. ಭಕ್ತನಲ್ಲಿ ಇಂತಹ ಪ್ರೇಮ[illegible]ರೆ ನಿತ್ಯಧನ್ಯನಾಗುವನು. ನಿತ್ಯ ಸುಖಿಯಾಗುವನು. ಈ ಪವಿತ್ರ ಭಗವತ್ಪ್ರೇಮೋನ್ಮಾದ ಒಂದೆ ನಮ್ಮಲ್ಲಿರುವ ಭವರೋಗವನ್ನು ಎಂದೆಂದಿಗೂ ಗುಣಮಾಡಬಲ್ಲದು. ಆಸೆಯೊಂದಿಗೆ ಸ್ವಾರ್ಥವೂ ತೊಲಗಿತು. ಭಕ್ತ ದೇವರ ಸಮಿಪಕ್ಕೆ ಹೋಗಿರುವನು. ಮೊದಲು ಅವನಲ್ಲಿ ತುಂಬಿ ತುಳುಕಾಡುತ್ತಿದ್ದ ವ್ಯರ್ಥ, ಆಸೆಗಳಗಳನ್ನೆಲ್ಲಾ ಆಚೆಗೆಸೆದಿರುವನು.

ಭಕ್ತಿಯೋಗದಲ್ಲಿ ನಾವೆಲ್ಲ ದ್ವೈತಿಗಳಂತೆ ಪ್ರಾರಂಭಿಸಬೇಕು. ದೇವರು ನಮಗೆ ಬೇರೆ ಆಗಿರುವನು, ನಾವೂ ಕೂಡ ಅವನಿಂದ ಬೇರೆ ಎಂದು ಭಾವಿಸುವೆವು. ಮಧ್ಯದಲ್ಲಿ ಭಕ್ತಿ ಬರುವುದು. ಭಕ್ತ ಭಗವಂತನ ಸಮಿಪಕ್ಕೆ ಹೋಗುವನು. ಭಗವಂತನೂ ಭಕ್ತನ ಸಮಿಪಕ್ಕೆ ಬರುವನು. ಭಕ್ತ ಮಾನವ ಸಹಜವಾದ ಮಾತೃಪಿತೃಭಾವ ವಾತ್ಸಲ್ಯಭಾವ ಸಖ್ಯ, ದಾಸ್ಯ, ಮಧುರ ಭಾವಗಳನ್ನೆಲ್ಲಾ ತೆಗೆದುಕೊಂಡು ತನ್ನ ಪ್ರೇಮಾದರ್ಶವಾದ ದೇವರಮೇಲೆ ಅರೋಪಿಸುವನು. ಅವನಿಗೆ ದೇವರು ಇವುಗಳೆಲ್ಲದರಂತೆ ಕಾಣುವನು. ತನ್ನ ಆರಾಧನೆಯ ಇಷ್ಟದೈವದಲ್ಲಿ ತಾನು ಪೂರ್ಣನಾಗಿ ತನ್ಮಯನಾದಾಗ ತನ್ನ ಸಾಧನೆಯ ಗುರಿಯನ್ನು ಸೇರುವನು. ನಾವೆಲ್ಲಾ ನಮ್ಮ ಮೇಲಿನ ಪ್ರೇಮದಿಂದ ಪ್ರಾರಂಭಿಸುವೆವು. ನಮ್ಮ

ಕ್ಷುದ್ರಅಯುಕ್ತ ಅಹಂಕಾರದ ಅಧೀನದಲ್ಲಿ ಪ್ರೇಮವೂ ಸ್ವಾರ್ಥವಾಗು ವುದು. ಅಂತೂ ಕೊನೆಗೆ ಪ್ರೇಮದ ಪೂರ್ಣಜ್ಯೋತಿ ಕೋರೈಸುವುದು. ಆ ಕಾಂತಿಯಲ್ಲಿ ಅಲ್ಪ ವ್ಯಕ್ತಿತ್ತ್ವ ಅನಂತಾತ್ಮನಲ್ಲಿ ತನ್ಮಯವಾಗುವುದು ಕಾಣುವುದು. ಈ ಪ್ರೇಮಜ್ಯೋತಿಯ ಸಾನ್ನಿಧ್ಯದಲ್ಲಿ ಮಾನವ ಕೂಡ ರೂಪಾಂತರ ಹೊಂದುವನು. ಪ್ರೇಮ, ಪ್ರೀತಿಸುವವನು, ಪ್ರೀತಿಸುವುದಕ್ಕೆ ವಿಷಯವಾಗಿರುವವನು, ಎಲ್ಲವೂ ಒಂದೆ ಎಂಬ ಸ್ಫೂರ್ತಿದಾಯಕವಾದ ಅಮೋಘವಾದ ಸತ್ಯವನ್ನು ಕೊನೆಗೆ ಸಾಕ್ಷಾತ್ಕಾರ ಮಾಡಿಕೊಳ್ಳುವನು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

ಕೊಲಂಬೊ ಇಂದ ೫ ೦ ೦
ಸಂವಾದ ತರಂಗಿ ... ೫ ೦ ೦
ಶ್ರೀ ರಾಮಕೃ ...
ಸ್ವಾಮಿ ವಿವೇ ...
ಪತ್ರಮಾಲೆ ...
ಜ್ಞಾನಯೋ ...
ರಾಜಯೋ ...
ಶ್ರೀ ಶಾರ ...
ಗೀತಾ ಪ ...
ಶ್ರೀ ಶಾರ ... ೦
ಪರಮಾ ... ೦
ಕರ್ಮ ... ೦
ಬ್ರಹ್ಮಾ ... ೦
ಶ್ರೀ ರ ... ೦
ಪರಿವ ... ೦
ಪ್ರಾ ... ೦
ಭಕ್ತಿ ... ೦
ಶ್ರೀ ...
... ೦ ೦
ಶ್ರೀ ... ೦ ೦
... ೦ ೦
... ೦ ೦
... ೦ ೦
... ೦ ೦
ಭಕ್ತಿ ...
ಶ್ರೀ ರಾಮಕೃಷ್ಣ ೧೨ ೦
ವಿದ್ಯಾಭ್ಯಾಸ ೦ ೧೦ ೦
ಹಿಂದೂ ಧರ್ಮಸಾರ ೦ ೧೦ ೦
ವರ್ತಮಾನ ಭಾರತ ೦ ೧೦ ೦